ದುಡಿವ ಜನರ ಪ್ರಾಣಮಿತ್ರ


ಜನಶಕ್ತಿ

ಕನ್ನಡ ವಾರಪತ್ರಿಕೆ

Blog janashakthi.wordpress.com e-mail : js_weekly@yahoo.com

ಸಂಪುಟ 5 ಸಂಚಿಕೆ 32 ಆಗಸ್ಟ್ 31, 2011 ರೂ. 5/- ಪುಟ 16





ಲೋಕಾಯುಕ್ತ ವರದಿ

ಗಣಿ ಮಾಫಿಯಾ ವಿರಾಟ್ ಲೂಟಿ

ಭ್ರಷ್ಟತೆಯ ರಾಶಿಯಲ್ಲಿ
ಯಡಿಯೂರಪ್ಪ, ರೆಡ್ಡಿ ಸಹೋದರರನ್ನ
ಮೀರಿಸುವವರೇ ಇಲ್ಲ...

▶ 8



ರಾಜಿನಾಮೆ ಕೇವಲ ಮುಖ್ಯಮಂತ್ರಿಗಳದ್ದಲ್ಲ ಇಡೀ ಸರ್ಕಾರದ್ದು



ಯಡಿಯೂರಪ್ಪ ರಾಜೀನಾಮೆ ಕೊಡಬಹುದು,
ಕೊಡದೆಯೂ ಇರಬಹುದು. ಅವರ ರಾಜೀನಾಮೆ
ಒಂದರಿಂದಲೇ ರಾಜ್ಯದ ಸಮಸ್ಯೆ ಇತ್ಯರ್ಥವಾಗುವುದಿಲ್ಲ.....


▶ 9

ಹಾಸನ : ಮಲ ಹೊರುವ ಪದ್ಧತಿಗೆ ಅಮಾಯಕರ ಬಲಿ

ಹಾಸನ



ಸರ್ಕಾರ 'ಇಲ್ಲ' ಎನ್ನುವ ಮಲಹೊರುವ ಪದ್ಧತಿಗೆ ಬಲಿಯಾದ ಅಮಾಯಕರು



ಮಹದೇವ



ಅರ್ಜುನ

ನಮ್ಮದು ಸನಾತನ ಸಂಸ್ಕೃತಿ–ಜಗತ್ತಿಗೇ ಮಾದರಿಯಾದುದು. ನಮ್ಮ ಪರಂಪರೆಯಲ್ಲಿ ಎಲ್ಲವೂ ಇತ್ತು, ನಮ್ಮ ಪೂರ್ವಿಕರು ಬಹಳ ಹಿಂದೆಯೇ ಹೇಳಿರುವುದನ್ನು, ಮಾಡಿರುವುದನ್ನು ಆದುನಿಕ ವಿಜ್ಞಾನ ಈಗ ಹುಡುಕುತ್ತಿದೆ ಎನ್ನುವವರು ಇದನ್ನು ಗಮನಿಸಬೇಕಿದೆ. ಅವರ ಪ್ರಕಾರ ಎಲ್ಲವನ್ನೂ ಕಂಡುಹಿಡಿದ ಅವರ ಪೂರ್ವಿಕರು ಮನುಷ್ಯನ ಮಲ ವಿಸರ್ಜನೆಗೊಂದು ಜಾಗ ಹಾಗು ಅದರ ವಿಲೇವಾರಿಗೊಂದು ವ್ಯವಸ್ಥೆ ಕಂಡು ಕೊಳ್ಳದಿದ್ದದ್ದು ಒಂದು ವಿಪರ್ಯಾಸವೇ ಸರಿ. ಬಹುಶಃ ಈ ದೇಶದಲ್ಲಿ ಮಾನವನ ಮಲಹೊರಲೆಂದೇ ನಿಗದಿಮಾಡಲ್ಪಟ್ಟಿದ್ದ ಒಂದು ಜಾತಿಯನ್ನೇ ಅವರು ಸೃಷ್ಟಿಸಿದ್ದರಿಂದ ಅವರಿಗೆ ಅದರ ಅವಶ್ಯಕತೆ ಬಂದಿರಲಾರದು ಅಥವಾ ಅದನ್ನೂ ಒಂದು ಅದ್ಭುತ ಸಂಶೋಧನೆಯಂದೂ ಕರೆಯಬಹುದೇನೊ. ಇದಕ್ಕೆ ಸರಿಯಾಗಿ 'ಆಧುನಿಕ' ಸರ್ಕಾರವೂ ನ್ಯಾಯಾಲಯಕ್ಕೆ ನಮ್ಮಲ್ಲಿ ಮಲಹೊರುವ ಪದ್ಧತಿ ಇಲ್ಲವೇ ಇಲ್ಲ ಎಂದು ಪ್ರಮಾಣ ಪತ್ರ ನೀಡಿದೆ. ಒಟ್ಟಿನಲ್ಲಿ ಅವರ ಸನಾತನ ಸಂಸ್ಕೃತಿ ಹಾಗು ಭ್ರಷ್ಟ ವ್ಯವಸ್ಥೆ ಸೃಷ್ಟಿಸಿದ ಅನಿವಾರ್ಯತೆಗೆ ಇಬ್ಬರು ಅಮಾಯಕ ಪೌರ ಕಾರ್ಮಿಕರು ಬಲಿಯಾಗಿದ್ದಾರೆ.

ಜುಲೈ 9ರಂದು ಹಾಸನ ಜಿಲ್ಲೆಯ ಆಲೂರು ತಾಲ್ಲೂಕಿನ ಕೆಂಚಮ್ಮನ ಹೊಸಕೋಟೆಯಲ್ಲಿನ ಕಾಫಿ ತೋಟದಲ್ಲಿದ್ದ ಶೌಚಗುಂಡಿಗೆ ಶೇಖರಣೆಗೊಂಡಿದ್ದ ಮಲ ಹೊರಲು ಗುಂಡಿಗಿಳಿದ ಸಕಲೇಶಪುರದ ಇಬ್ಬರು ಪೌರ ಕಾರ್ಮಿಕರು ಮತ್ತೆ ಮೇಲೆಕ್ಕೆ ಬರಲೇಯಿಲ್ಲ. ಸಕಲೇಶಪುರದ ಪಟ್ಟಣ ಪಂಚಾಯತಿಯಲ್ಲಿ ಗುತ್ತಿಗೆ ಪೌರ ಕಾರ್ಮಿಕರಾಗಿ ದುಡಿಯುತ್ತಿದ್ದ ಮಹದೇವ(25) ಮತ್ತು ಅರ್ಜುನ(21) ಎಂಬುವವರು ಕಡಿಮೆ ಕೂಲಿ, ಗುತ್ತಿಗೆ ಕಾರ್ಮಿಕ ಪದ್ಧತಿಯಲ್ಲಿನ ಮಾಲೀಕ ಹಾಗು ಗುತ್ತಿಗೆದಾರನ ಶೋಷಣೆಗೊಳಪಟ್ಟು ಬದುಕು ಸಾಗಿಸುವ ಅನಿವಾರ್ಯತೆಯಿಂದಾಗಿ ಕೇವಲ 3ಸಾವಿರ ರೂಪಾಯಿ ಹಣಕ್ಕಾಗಿ ಖಾಸಗಿ ಕೆಲಸ ಒಪ್ಪಿಕೊಂಡು ಶೌಚಗುಂಡಿಗಿಳಿದಾಗ ಅದರಲ್ಲಿನ ವಿಷಾನಿಲ ಅವರ ಪ್ರಾಣವನ್ನೇ ಕಸಿದುಕೊಂಡಿತ್ತು.

ಈ ಘಟನೆ ಇಡೀ ನಾಗರೀಕ ಸಮಾಜವೇ ತಲೆತಗ್ಗಿಸುವಂತಹದ್ದು. ಒಂದು ಕಡೆ ಸರ್ಕಾರ ಮಲಹೊರುವ ಪದ್ಧತಿಯನ್ನು ನಿಷೇಧಿಸಿ ಕಾನೂನು ಜಾರಿಗೆ ತರುತ್ತದೆ. ಪೌರ ಕಾರ್ಮಿಕರ ಪುನರ್ವಸತಿಗೆ ಕೋಟ್ಯಾಂತರ ರೂಪಾಯಿಯ ಯೋಜನೆ ರೂಪಿಸುತ್ತದೆ. ಆದರೆ ಇದ್ಯಾವುದೂ ಅವರಿಗೆ ತಲುಪದೆ ವಾಪಸ್ಸಾಗುತ್ತಿರುವುದು ಮಾತ್ರ ವಿಪರ್ಯಾಸ. ಪೌರ ಕಾರ್ಮಿಕರ ಪುನರ್ವಸತಿಗೆ ಹಣ ನೀಡಿ ಮಲ ಹೊರುವ ಪದ್ಧತಿಯನ್ನು ನಿಷೇಧಿಸುವ ಸರ್ಕಾರ ಮತ್ತೊಂದೆಡೆ ಅವರಿಗೆ ಖಾಯಂ ಕೆಲಸ ಸಿಗದಂತೆ ಮಾಡಿ ಅವನ್ನು "ಗುತ್ತಿಗೆ ಕಾರ್ಮಿಕ ಪದ್ಧತಿ" ಎಂಬ ಆಧುನಿಕ ಗುಲಾಮಿ ಪದ್ಧತಿಗೆ ದೂಡಿ ಕಡಿಮೆ ಕೂಲಿ, ಮಾಲೀಕ ಹಾಗು ಗುತ್ತಿಗೆದಾರನ ಶೋಷಣೆಗೆ ತುತ್ತಾಗುವಂತೆ ಮಾಡಿ, ಪೌರ ಕಾರ್ಮಿಕರು ಅನಿವಾರ್ಯವಾಗಿ ಕೇವಲ ಬದುಕುವುದಕ್ಕಾಗಿ "ನಿಷೇಧಿತ" ಮಲ ಹೊರುವ ಕೆಲಸ ಮಾಡುವಂತಹ ಪರಿಸ್ಥಿತಿ ನಿರ್ಮಾಣ ಮಾಡಿದೆ.

ಈ ಘಟನೆ ನಡೆದ ಕೂಡಲೆ ಸ್ಥಳಕ್ಕೆ ಬೇಟಿ ನೀಡಿದ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಧರ್ಮೇಶ್ ನೇತೃತ್ವದ ಹಾಸನ ಜಿಲ್ಲಾ ಪೌರ ಕಾರ್ಮಿಕರ ಸಂಘದ ಪದಾಧಿಕಾರಿಗಳಾದ ಪ್ರಕಾಶ್, ಮಂಜುನಾಥ್, ಶಿವೇಗೌಡ ಮತ್ತು ರವಿ ಮತ್ತಿತರರನ್ನೊಳಗೊಂಡ ತಂಡ ಮೃತರ ಕುಟುಂಬಗಳಿಗೆ ಸಾಂತ್ವನ ಹೇಳಿ ಸರ್ಕಾರ ತಲಾ 5ಲಕ್ಷ ರೂಪಾಯಿ ಪರಿಹಾರ, ಒಂದು ಖಾಯಂ ಉದ್ಯೋಗ ಹಾಗು ಖಾಸಗೀ ಎಸ್ಟೇಟ್‌ನ ಮಾಲೀಕನ ಮೇಲೆ ಕೂಡಲೆ ಕ್ರಮ ಜರುಗಿಸುವಂತೆ ಒತ್ತಾಯಿಸಿದೆ. ಇಷ್ಟೆಲ್ಲಾ ಆದರೂ ಜಿಲ್ಲಾಡಳಿತವಾಗಲೀ ಜನಪ್ರತಿನಿದಿ, ಗಳಾಗಲೀ ಏನೂ ಆಗೇಯಿಲ್ಲವೇನೋ ಎಂಬತ್ತಿದ್ದುದು ಅಲ್ಲದೆ ಕೆಲ ಜನ ಪ್ರತಿನಿಧಿಗಳಂತು ಮಾಲೀಕನ ರಕ್ಷಣೆಗೆ ಧಾವಿಸಿ ರಾಜಿ ಪಂಚಾಯತಿ ಮಾಡಿ ಮೃತರ ಕುಟುಂಬಗಳಿಗೆ ಪುಡಿಗಾಸು ನೀಡಿ ಇಡೀ ಪ್ರಕರಣವನ್ನೇ ಮುಚ್ಚಿಹಾಕುವ ಹಂತದಲ್ಲಿದ್ದರು. ಆದರೆ ಸಿಐಟಿಯುವಿನ ಮಧ್ಯಪ್ರವೇಶದಿಂದಾಗಿ ಇಡೀ ಪ್ರಕರಣ ಮಾಧ್ಯಮಗಳ ಮುಖಾಂತರ ಬೆಳಕಿಗೆ ಬರುವಂತಾಯಿತು. ಇಷ್ಟೆಲ್ಲಾ ಆದರೂ ಜಿಲ್ಲಾಡಳಿತ ಮತ್ತು ತಾಲ್ಲೂಕು ಮಟ್ಟದ ...ಗಳು ಏನೂ ಗೊತ್ತಿಲ್ಲದಂತೆ ಮೌನಕ್ಕೆ ...ದ್ದರು.

...ರ ಹೊಣೆಹೊತ್ತು ಪರಿಹಾರ ...ತೆ ಆಗ್ರಹಿಸಿ ಜುಲೈ 12ರಂದು ...ು ನೇತೃತ್ವದಲ್ಲಿ ಪ್ರತಿಭಟನೆಯೂ ...ಲೆ ಎಚ್ಚೆತ್ತ ಜಿಲ್ಲಾಡಳಿತ ಜಿಲ್ಲೆಯಲ್ಲಿ ... ಹೊರುವ ಪದ್ಧತಿ ಜೀವಂತವಿರುವ ಬಗ್ಗೆ ಚರ್ಚಿಸಲು ಜುಲೈ 30ರಂದು ಸಭೆ ಕರೆಧಿದೆ. ಅಷ್ಟೇ ಅಲ್ಲದೆ ಹಾಸನದಂತಹ ನಗರದಲ್ಲಿಯೂ ಮಾನವನ ಮಲ ಹೊರಲು ಮಾನವರನ್ನೇ ಬಳಸಿಕೊಳ್ಳುವ ಪದ್ಧತಿ ಇನ್ನೂ ಜೀವಂತವಾಗಿದೆ. ಜಾತಿ ಪದ್ಧತಿ, ನವಉದಾರೀಕರಣ, ಬೆಲೆ ಏರಿಕೆ, ಭ್ರಷ್ಟಾಚಾರ, ಗುತ್ತಿಗೆ ಕಾರ್ಮಿಕ ಪದ್ಧತಿ, ಕಡಿಮೆ ಕೂಲಿ, ಕೆಲಸದ ಹಾಗು ಸಾಮಾಜಿಕ ಅಭದ್ರತೆಯಂತಹ ವಿಷವರ್ತುಲದಲ್ಲಿ ಸಿಲುಕಿರುವ ಪೌರ ಕಾರ್ಮಿಕರ ಬದುಕಿನ ಅನಿವಾರ್ಯತೆಗಾಗಿ ಈ ನೀಚ ಪದ್ಧತಿಗೆ ಒಳಗಾಗಿ ತಮ್ಮ ಪ್ರಾಣವನ್ನೇ ಕಳೆದುಕಳ್ಳುತ್ತಿರುವು ನಾಗರೀಕ ಸಮಾಜದ ದುರಂತವೇ ಸರಿ.

ನಾವು ಸಂಸ್ಕೃತಿ ರಕ್ಷಕರು ಹಾಗು ಕರ್ನಾಟಕದಲ್ಲಿ ಅಭಿವೃದ್ಧಿಯ ಹೊಳೆಯನ್ನೇ ಹರಿಸುತ್ತಿದ್ದೇವೆಂದು ಬೀಗುತ್ತ ಭ್ರಷ್ಟಾಚಾರವೆಂಬ ಮಲವನ್ನು ತಲೆಮೇಲೆ ಹೊತ್ತು ತಿರುಗುತ್ತಿರುವ ಯಡಿಯೂರಪ್ಪ ಮತ್ತವರ ಗ್ಯಾಂಗ್‌ಗೆ ಕನಿಷ್ಟ ಮಾನವ ಕಾಳಜಿ ಇದ್ದರೂ ಪ್ರಾಣ ಕಳೆದುಕೊಂಡ ಕುಟುಂಬಗಳಿಗೆ ಪರಿಹಾರ ಹಾಗು ಖಾಯಂ ಉದ್ಯೋಗ ಸಿಕ್ಕಿರುತ್ತಿತ್ತು.

ವರದಿ: ಧರ್ಮೇಶ್, ಹಾಸನ



ಆರ್ಡರ್.....ಆರ್ಡರ್ ಸರ್ಕಾರದ್ದು ಮನಿ ಲಾಂಡ್ರಿ ಯೋಜನೆ

ಸರ್ಕಾರದ ಯೋಜನೆಗಳು 'ಮನಿ ಲಾಂಡ್ರಿ ಯೋಜನೆಗಳಿದ್ದಂತೆ' ಎಂದು ನ್ಯಾ.ಡಿ.ವಿ.ಶೈಲೇಂದ್ರಕುಮಾರ್ ಮತ್ತೆ ಕಿಡಿಕಾರಿದ್ದಾರೆ.

ಕಪ್ಪು ಹಣಗಳನ್ನು ಅಧಿಕೃತಗೊಳಿಸಲು ಸರ್ಕಾರಗಳು ನೂತನ ಯೋಜನೆ ಹಾಕಿಕೊಳ್ಳುತ್ತವೆ. ಹೊಲಸು ಬಟ್ಟೆ ತೊಳೆದು ಸ್ವಚ್ಛಗೊಳಿಸುವಂತಹ ಲಾಂಡ್ರಿ ಕೆಲಸವನ್ನು ಸರ್ಕಾರ ಕಪ್ಪು ಹಣದ ವಿಷಯದಲ್ಲಿ ಮಾಡುತ್ತಿದೆ. ಮಾರಿಷಸ್, ಸ್ವಿಸ್‌ಗೆ ಹಾಗೂ ಇತರ ದೇಶಗಳಿಗೆ ಹೋಗಿ ಹೂಡಿಕೆದಾರರನ್ನು ಭೇಟಿ ಮಾಡುವ ನೆಪದಲ್ಲಿ ತಮ್ಮ ಹಣವನ್ನು ಅವರಿಗೆ ನೀಡುತ್ತಾರೆ. ಅದೇ ಹಣ ವಿದೇಶ ಹೂಡಿಕೆ ಮೂಲಕ ಇಲ್ಲಿಗೆ ಅಧಿಕೃತವಾಗಿ ಬರುತ್ತದೆ ಎಂದು ನ್ಯಾ.ಡಿ.ವಿ.ಎಸ್.ಸರ್ಕಾರ ಹಾಗೂ ಭ್ರಷ್ಟ ರಾಜಕಾರಣಿಗಳ ಬಣ್ಣಬಯಲು ಮಾಡಿದ್ದಾರೆ. ಹೂಡಿಕೆ ದಾರರ ಹಿಂದಿನ ಮರ್ಮದ ಬಗ್ಗೆ ಇನ್ನಷ್ಟು ಕಿಡಿಕಾರಿದ ನ್ಯಾಯಮೂರ್ತಿ, ಸ್ಥಳಿಯ ರಾಜಕಾರಣಿಗಳ ಕಪ್ಪು ಹಣವನ್ನು ಅಧಿಕೃತಗೊಳಿಸಲು ವಿದೇಶಿ ಬಂಡವಾಳ ಹೂಡಿಕೆ ಎಂದು ಹೇಳಲಾಗುತ್ತಿದೆ. ಈ ಮೂಲಕ ಸರ್ಕಾರಗಳು ಜನರಿಗೆ ಮೋಸ ಮಾಡುತ್ತಿವೆ ಎಂದರು.

ನಾಟಕ ಕಂಪನಿಗಳು:

ವಿಶ್ವದ ಅತಿ ದೊಡ್ಡ ವಿಮಾನ ನಿಲ್ದಾಣಕ್ಕೂ ಕೂಡ ಬೆಂಗಳೂರು ವಿಮಾನ ನಿಲ್ದಾಣ ಹಾಗೂ ಸಂಬಂಧಪಟ್ಟ ಯೋಜನೆಗಳಿಗೆ ಸ್ವಾಧೀನಪಡಿಸಿಕೊಂಡಷ್ಟು ಭೂಮಿಯನ್ನು ವಶಪಡಿಸಿಕೊಂಡಿರಲು ಸಾಧ್ಯವಿಲ್ಲ. ಆದರೆ ವಿಪರ್ಯಾಸವೆಂದರೆ ಸರ್ಕಾರ ಅಥವಾ ಉಳಿದ ಆಡಳಿತ ಮಂಡಳಿಗಳಲ್ಲಿ ಈ ಕುರಿತು ಯಾವುದೇ ಮಾಹಿತಿಗಳಿಲ್ಲ. ಪ್ರತಿ ಯೋಜನೆಗೂ ಒಂದೊಂದು ಮಂಡಳಿ ಹುಟ್ಟು ಹಾಕಲಾಗಿದೆ. ಎಲ್ಲ ಮಂಡಳಿಗಳು ನಾಟಕ ಕಂಪನಿಗಳಿದ್ದಂತೆ. ಭೂ ಸ್ವಾಧೀನದ ಉದ್ದೇಶ ಹಾಗೂ ಗುರಿಯ ಬಗ್ಗೆ ತಿಳಿದಿರುವುದಿಲ್ಲ. ರೈತರ ಭೂಮಿ ವಶಪಡಿಸಿ ಕೊಳ್ಳುವುದೊಂದೇ ದೊಡ್ಡ ಸಾಧನೆ.

ಸಂಪಾದಕೀಯ

ತೊಲಗಬೇಕಿರುವುದು ಇಡೀ ಸರ್ಕಾರ

ಅಕ್ರಮ ಗಣಿಗಾರಿಕೆಯ ಕುರಿತ ಬಹುನಿರೀಕ್ಷಿತ ವರದಿಯನ್ನು ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ ಹೆಗಡೆಯವರ ತಂಡ (27 ಜುಲೈ) ನೀಡಿರುವುದು ಅತ್ಯಂತ ಸ್ವಾಗತಾರ್ಹವಾದುದಾಗಿದೆ. ಸುಮಾರು 25 ಸಾವಿರ ಪುಟಗಳ, 5ಲಕ್ಷಕ್ಕೂ ಅಧಿಕ ದಾಖಲೆ ನೊಂದಾವಣೆಗಳನ್ನು ವಿವರವಾಗಿ ಪರಿಶೀಲಿಸಿ, ನಡೆದ ಅಕ್ರಮಗಳಿಗೆ ಸೂಕ್ತ ಸಾಕ್ಷಿ, ಆಧಾರಗಳನ್ನು ನೀಡಿರುವಲ್ಲಿ ಲೋಕಾಯುಕ್ತರ ತಂಡದ ಪರಿಶ್ರಮ ಶ್ಲಾಘನೀಯವಾದುದು. ಈ ವರದಿಯ ಗಾತ್ರವೇ ನಡೆದಿರುವ ಗಣಿ ಅಕ್ರಮಗಳ ಪ್ರಮಾಣ, ಸ್ವರೂಪವನ್ನು ಅನಾವರಣಗೊಳಿಸಿದೆ. ವರದಿಯ ಪ್ರಮುಖ ಕೆಲವು ಅಂಶಗಳನ್ನೇ ವಿವರಿಸಲಾದಂತೆ ಇದರಲ್ಲಿ 787 ಅಧಿಕಾರಿಗಳು, 600 ವ್ಯಕ್ತಿಗಳು ಭಾಗಿಯಾಗಿರುವುದಾಗಿ, ಅದರಲ್ಲೂ ವಿಶೇಷವಾಗಿ ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿದಿರುವ ಮುಖ್ಯಮಂತ್ರಿ, ಅಲ್ಲದೇ ಅರ್ಧ ಡಜನ್‌ಗಿಂತಲೂ ಮೀರಿ ಸಚಿವರು, ಶಾಸಕರು, ಸಂಸದರು ಅಕ್ರಮಗಳಲ್ಲಿ ತೊಡಗಿರುವ ಅಂಶ ಗುರುತಿಸಿರುವುದು ಗಂಭೀರ ವಿಷಯವಾಗಿದೆ.

ಆರೋಪ ಬಂದಾಗಲೆಲ್ಲಾ, ಅದಕ್ಕೆ ಸೂಕ್ತ ದಾಖಲೆಗಳಿದ್ದರೂ ಅವುಗಳನ್ನೆಲ್ಲಾ ತಿರಸ್ಕರಿಸುತ್ತಾ, ಅತ್ಯಂತ ಭಂಡತನದಿಂದ ಸಮರ್ಥಿಸಿಕೊಂಡು ಅಧಿಕಾರದಲ್ಲಿ ಮುಂದುವರಿಯುತ್ತಾ ಬಂದಂತೆ ಈಗಲೂ ಮಾಡಲಾಗುವುದಿಲ್ಲ. ಲೋಕಾಯುಕ್ತ ಆಯೋಗ ಒಂದು ಸಂವಿಧಾನಾತ್ಮಕ ಸಂಸ್ಥೆಯಾಗಿದ್ದು ಈ ವರದಿಯಲ್ಲಿ ಗುರುತಿಸಲಾದವರು ಅಧಿಕಾರದಲ್ಲಿ ಮುಂದುವರಿಯುವಂತಿಲ್ಲ. ಮುಖ್ಯಮಂತ್ರಿ ಯವರೇ, ಸಂಪುಟದ ಸಚಿವರೇ ಆರೋಪಕ್ಕೆ ಈಡಾಗಿ, ಕಾನೂನು ಕ್ರಮಕ್ಕೆ ಒಳಗಾಗಬೇಕಾಗಿರುವುದರಿಂದ ಅಧಿಕಾರ ಸ್ಥಾನದಿಂದ ಕೆಳಗಿಳಿಯಲೇಬೇಕು. ಆದ್ದರಿಂದ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಆರೋಪಕ್ಕೀಡಾದ ಸಚಿವ ಜನಾರ್ಧನರೆಡ್ಡಿ, ಕರುಣಾಕರರೆಡ್ಡಿ, ಶ್ರೀರಾಮುಲು, ವಿ.ಸೋಮಣ್ಣ ಸ್ಥಾನಕ್ಕೆ ರಾಜೀನಾಮೆ ನೀಡಲೇಬೇಕಾಗುವುದು ಮಾತ್ರವಲ್ಲ. ಗಣಿ ಅದಿರಿನ ಅಕ್ರಮಗಳಲ್ಲಿ ತೊಡಗಿದವರ ಪ್ರಮಾಣವನ್ನೇ ನೋಡಿದರೆ ಇಡೀ ಸರ್ಕಾರವೇ ಇದರಲ್ಲಿ ಭಾಗಿಯಾಗಿರುವುದರಿಂದ ಈ ಭ್ರಷ್ಟ ಸರ್ಕಾರವೇ ರಾಜೀನಾಮೆ ನೀಡಿ ಹೊಸ ಜನಾದೇಶಕ್ಕೆ ಅವಕಾಶ ಮಾಡಿಕೊಡಬೇಕು. ಆದ್ದರಿಂದ ಯಡಿಯೂರಪ್ಪ ಅವರ ಬಿಜೆಪಿ ರಾಜ್ಯ ಸರ್ಕಾರ ಒಂದು ಕ್ಷಣವೂ ಅಧಿಕಾರದಲ್ಲಿ ಮುಂದುವರಿಯುವ ನೈತಿಕ, ರಾಜಕೀಯ, ಆಡಳಿತಾತ್ಮಕ ಹಕ್ಕನ್ನೇ ಕಳೆದುಕೊಂಡಿದೆ.

ಇಂತಹ ಸಂದರ್ಭದಲ್ಲಿ ಬಿಜೆಪಿ ಹೈಕಮಾಂಡ್ ಕೇವಲ ಯಡಿಯೂರಪ್ಪನವರು ಮಾತ್ರ ರಾಜೀನಾಮೆ ಸಲ್ಲಿಸುವಂತೆ ಸೂಚಿಸಿರುವುದು ಅಸಮರ್ಥನೀಯ, ಅನೈತಿಕ. ಹಿಂದಿನಿಂದಲೂ ಯಡಿಯೂರಪ್ಪ ಹಾಗೂ ಸರ್ಕಾರ, ಬಿಜೆಪಿ ಪಕ್ಷದ ನಾಯಕರ ಹಗರಣಗಳು ಹೊರ ಬಂದಾಗಲೆಲ್ಲಾ ಸಮರ್ಥಿಸಿ ಕೊಂಡೇ ಬಂದದ್ದು, ರಾಷ್ಟ್ರೀಯ ನಾಯಕರ ಪಾಲು, ಪಾತ್ರವನ್ನೇ ತೋರಿಸಿತ್ತು. ಕೇಂದ್ರದ ಕಾಂಗ್ರೆಸ್ ಸರ್ಕಾರದ ಹಗರಣಗಳ ಬಗ್ಗೆ ದೊಡ್ಡ ಗಂಟಲಲ್ಲಿ ಕೂಗುತ್ತಿದ್ದ ಬಿಜೆಪಿ ಅಂತಹುದೇ ಭ್ರಷ್ಟಾಚಾರದಲ್ಲಿ ಸಿಕ್ಕಿಹಾಕಿಕೊಂಡಿದ್ದ ತನ್ನ ಸರ್ಕಾರವನ್ನು ಸಮರ್ಥಿಸಿಕೊಂಡು ಇಬ್ಬಗೆಯ ನೀತಿಯನ್ನೇ ಅನುಸರಿಸಿತ್ತು. ಆದರೀಗ ಬೇರೆ ಹಾದಿ ಇಲ್ಲದಿರುವುದೇ ರಾಜೀನಾಮೆ ಕೇಳಲು ಕಾರಣವಾಗಿದೆ ಹೊರತು ಮನಃಪೂರ್ವಕವಾಗಿ, ತಪ್ಪು ಒಪ್ಪಿಕೊಂಡು ಅಲ್ಲ. ಈ ನೀತಿ ಖಂಡನೀಯ.

ಹೀಗಿದ್ದಾಗ್ಯೂ ಯಡಿಯೂರಪ್ಪನವರು ರಾಜ್ಯಪಾಲರಿಗೆ ರಾಜೀನಾಮೆ ಕೊಟ್ಟು ಕಾನೂನು ಪ್ರಕ್ರಿಯೆಗೆ ಒಳಗಾಗಲು ಸಿದ್ಧವಿಲ್ಲದಿರುವುದು ಭಂಡತನವಾಗಿದೆ. ಒಂದು ವೇಳೆ ರಾಜೀನಾಮೆ ಸಲ್ಲಿಸಿದರೂ ಅವರು ಎಸಗಿದ ಅಕ್ರಮಕ್ಕೆ ಶಿಕ್ಷೆಯಾದಂತಲ್ಲ. ಆದರೆ ಬಿಜೆಪಿ ನಾಯಕತ್ವ ಹೊಸ ಮುಖ್ಯಮಂತ್ರಿಯನ್ನು ಆರಿಸಲು ಮುಂದಾಗಿರುವುದು ಸಂವಿಧಾನ ಮತ್ತು ಜನತೆಗೆ ಎಸಗಿದ ದ್ರೋಹವೇ ಆಗಿದೆ.

ಈ ಎಲ್ಲಾ ಘಟನೆಗಳಿಗೂ ಕೇವಲ ವ್ಯಕ್ತಿಯನ್ನೇ ಕೇಂದ್ರ ಬಿಂದುವನ್ನಾಗಿಸುವ ಪ್ರವೃತ್ತಿಯೇ ಅಕ್ರಮವಾಗಿದೆ. ಇದರಲ್ಲಿ ಇಡೀ ಸರ್ಕಾರ, ಆಡಳಿತ ಯಂತ್ರವನ್ನು ಯಥೇಚ್ಛವಾಗಿ ದುರ್ಬಳಕೆ ಮಾಡಿ ಯಾಗಿದೆ. ಕೇಂದ್ರದ 2 ಜಿ ಸ್ಪೆಕ್ಟ್ರಂ ಅಥವಾ ಕೃಷ್ಣಾ-ಗೋದಾವರಿ ಅನಿಲ ಹಂಚಿಕೆ ಹಗರಣಗಳೇ ಆಗಲಿ, ಅಕ್ರಮಗಣಿ ಹಗರಣವೇ ಆಗಿರಲಿ, ಭಾಗಿಯಾಗಿರುವ ಮನಮೋಹನ್‌ಸಿಂಗ್, ರಾಜಾ, ಕನಿಮೋಳಿ, ಯಡಿಯೂರಪ್ಪ-ರೆಡ್ಡಿತ್ರಯರು; ವೈ.ಎಸ್.ರಾಜಶೇಖರರೆಡ್ಡಿ, ಮೋದಿ ಇವರೆಲ್ಲಾ ಉದಾರೀಕರಣ-ಖಾಸಗೀಕರಣದ ಪಾತಕದ ಕೂಸುಗಳು. ಆದ್ದರಿಂದ ನೀತಿಗಳು ಬದಲಾಗದೇ ನೇತಾಗಳ ಬದಲಾವಣೆ ನಿಜಕ್ಕೂ ಸಮಸ್ಯೆಗೆ ಪರಿಹಾರವನ್ನು ತಂದುಕೊಡುವುದಿಲ್ಲ.

ಈಗಲೂ ಬಿಜೆಪಿಯು ರಾಜ್ಯದ ಮುಖ್ಯಮಂತ್ರಿಯನ್ನಾಗಿಸಲು ಹೆಸರಿಸಿರುವ ಈಶ್ವರಪ್ಪ,


ಪುಟ 15ಕ್ಕೆ

ಭಂಡತನ ಮತ್ತು ಕೆಡುಕಿನ ಲೆಕ್ಕಾಚಾರಗಳು

ಓಣಗಿದ ಮೊರೆ ಕೆಳಗೆ ಹಾಕಿ ದೆಹಲಿಯಿಂದ ಬಂದಿಳಿದ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಅಧಿಕಾರ ಮತ್ತು ಮುಖ ಉಳಿಸಿಕೊಳ್ಳುವ ಅವರ ವರಸೆ ಕೈಕೊಡುತ್ತಿವೆ. 'ಆಷಾಢ ಮಾಸ ಕಳೆಯಲಿ 31ರ ನಂತರ ರಾಜೀನಾಮೆ ಕೊಡುವೆ' ಎಂಬ ರಾಹುಕೇತುಗಳ ಲೆಕ್ಕಾಚಾರದ ಕೋರಿಕೆಯನ್ನು ಹೈಕಮಾಂಡ್ ಪರಿಗಣಿಸುವ ಸ್ಥಿತಿಯಲ್ಲಿ ಇಲ್ಲ. ಯಡಿಯೂರಪ್ಪನವರ ಸರ್ಕಾರದ ಸಕಲ ಫಲಾನುಭವಿಗಳಾದ ಆರ್.ಎಸ್.ಎಸ್. ಮತ್ತು ಬಿಜೆಪಿ ಹೈಕಮಾಂಡ್, ಹಿಂದೆ ಸಮರ್ಥಿಸಿಕೊಂಡಂತೆ ಸಮರ್ಥಿಸಿ ಕೊಳ್ಳಲು ಅಸಾಧ್ಯವಾದ ಒತ್ತಡವೀಗ ಸೃಷ್ಟಿಯಾಗಿದೆ. ಹಾಗಾಗಿಯೇ ಹೈಕಮಾಂಡ್ ಬೇಡವೆಂದರೂ ಸಭೆ ನಡೆಸಿದ್ದ ಯಡಿಯೂರಪ್ಪ ರಾಜೀನಾಮೆ ಕೊಡಲು ನಿರ್ದೇಶಿಸಿದ್ದೇವೆ ಎಂದು ವಕ್ತಾರರು ಬಹಿರಂಗವಾಗಿಯೇ ಹೇಳಬೇಕಾಗಿ ಬಂದಿದೆ. ನಾ ಕೊಡಲಾರೆ ಎಂಬ ಯಡಿಯೂರಪ್ಪನವರ ಪಟ್ಟಿನಿಂದ ಬಿಜೆಪಿಯಲ್ಲಿಗ ತಳಮಳ!

ಹೀಗಾಗಿ ಯಡಿಯೂರಪ್ಪ ರಾಜೀನಾಮೆಯನ್ನು ರಾಜ್ಯಪಾಲರಿಗೆ ಸಲ್ಲಿಸುವ ಬದಲಾಗಿ ಬಿಜೆಪಿ ಅಖಿಲ ಭಾರತ ಅಧ್ಯಕ್ಷ ಗಡ್ಕರಿಗೆ ರವಾನಿಸಿದ್ದಾರೆಂಬ ವದಂತಿ ಕುತೂಹಲದ ಕಾವನ್ನು ಉಳಿಸಿಕೊಳ್ಳಲಷ್ಟೇ.

ಹೀಗೆಲ್ಲಾ ಯಡಿಯೂರಪ್ಪ ಕಂಪನಿ ಕಂಗಾಲಾಗಿ ಕಣ್ಣೀರಿಡುತ್ತಾ ಸಂಕಟ ಪಡುತ್ತಿರುವಾಗಲೇ ಅವರ ಉತ್ತರಾಧಿಕಾರಿಗಳಾಗಲು ಸಾಲುಗಟ್ಟಿ ನಿಂತಿದ್ದಾರೆ ಹಲವರು.



ಶೋಭಾ ಕರಂದ್ಲಾಜೆ ಚಾಮುಂಡಿ ಬೆಟ್ಟದ ಮೆಟ್ಟಿಲು ಹತ್ತಿ 'ಹರಕೆ' ಕಟ್ಟಿಂಯಾಗಿದೆ. ಸದಾ ಕೋಲ್ಗೇಟ್ ನಗುವಿನ, ಮಾಧ್ಯಮ ಗೋಷ್ಠಿ ಶೂರ ಸದಾನಂದಗೌಡ ಇನ್‌ಷರ್ಟ್ ಉಡುಪಿನಲ್ಲಿ ಹಲ್ಲು ತೋರಿಸುತ್ತಿದ್ದಾರೆ. ತಾನೂ ಗಟ್ಟಿ ಒಕ್ಕಲಿಗನಲ್ಲವೇ ಎಂದಿರುವ ಅಶೋಕ್ ಮೌನವಾಗಿರುವ ಹಾಗೆ ಕಂಡರೂ ಚುರುಕಿನಿಂದಿದ್ದಾರೆ. ಶೆಟ್ಟರ್ ಸಂಭ್ರಮಕ್ಕೆ ಯಡ್ಡಿಯೇ ಎಳ್ಳು ನೀರು ಬಿಡುತ್ತಿದ್ದರೆ, ಸುರೇಶ್‌ಕುಮಾರ್‌ಗೆ ಅಷ್ಟು ಬಲವಿಲ್ಲ, ಒಲವಿಲ್ಲ... ಹೀಗೆ ಸಾಲು ಸಾಲು ಪಟ್ಟಿ. ಕೇಶವಕೃಪಾದ್ದೇ ಮತ್ತೊಂದು ಯೋಚನೆ, ಯೋಜನೆ! ಆದರೆ ತಾನು ಮೂಗು ತೂರಿಸುವುದಿಲ್ಲ ಎಂದು ಅದು ಹೇಳುತ್ತಿರುವುದು ಶುದ್ಧ ಕಪಟತನ! ಇನ್ನೂ ಅನಂತ್‌ಕುಮಾರ್ ಬೂದಿಯಿಂದ ಮೇಲೇಳುವ ಒಳ ಹುನ್ನಾರದಲ್ಲಿ ಕಿತ್ತಾಟ-ಗುಂಪುಗಾರಿಕೆ-ಪಿತೂರಿಗಳ ಕತ್ತಿ ಝಳಪು.

ಆದರೆ ಬಿಜೆಪಿಯ ಯಡಿಯೂರಪ್ಪ ನವರನ್ನು ತೆಗೆದರೆ ಲಿಂಗಾಯತರು ಸಿಟ್ಟಾಗುವರೇ? ಒಕ್ಕಲಿಗರೊಬ್ಬರನ್ನು ನೇಮಿಸಿದರೆ ಜೆಡಿ(ಎಸ್)ನ ನೆಲೆಯನ್ನು ದುರ್ಬಲಗೊಳಿಸಬಹುದೇ? ಯಾರು ಸಂಘ ನಿಷ್ಠರು, ಅನಿಷ್ಟಗಳನ್ನೆಲ್ಲಾ ಜೊತೆಗೆ ಕೊಂಡೊಯ್ಯಬಲ್ಲರು ಎಂಬಂತಹ ಅಧಃಪತನದ ಸುಳಿಯಲ್ಲಿ ಲೆಕ್ಕಾಚಾರ ಹಾಕುತ್ತಿದೆ. ಇದು ಹಿಂದೂ-ಒಂದೂ ಬಂಧು ಎಂಬುವುದರ ಚಾತುರ್ವರ್ಣ್ಯ ಪ್ರಣೀತ ವಿಶಾಲ ಮನೋಭಾವ!

ಬಿಜೆಪಿ-ಆರ್‌ಆರ್‌ಎಸ್‌ಗಳಿಗೆ ತಮ್ಮ ಸರ್ಕಾರ ಮಾಡಿದ ಮಹಾ ಹಗರಣ ದ್ರೋಹಗಳ ಬಗ್ಗೆ ಪರಿತಾಪವಿಲ್ಲ. ಬದಲಾಗಿ ಏನಿದ್ದರೂ ಹೇಗೆ ಮುಚ್ಚಿಕೊಂಡು ಹೊಸ ಹಗರಣಕ್ಕೆ ಕೈಹಾಕಬಹುದು ಎಂಬುದಷ್ಟೇ ಅದರ ಧ್ಯಾನ. ಎಲ್ಲಾ ಬಿಟ್ಟವರು ಇದಕ್ಕಿಂತ ಹೆಚ್ಚಿಗೆ ಯೋಚಿಸಿಯಾರೇ?


ಕರ್ನಾಟಕ ಲೋಕಾಯುಕ್ತರು ಇನ್ನೇನು ಆಗಸ್ಟ್ 2ಕ್ಕೆ ನಿವೃತ್ತಿಯಾಗಬೇಕು, ಗಣಿಸ್ಫೋಟದ ವರದಿ ನೀಡಿದ ಅವರು ಇದೀಗ ನಿರ್ಗಮನದ ಹೊಸ್ತಿಲಿನಲ್ಲಿದ್ದಾರೆ. ಈ ದಿನಕ್ಕೆಂದೇ ಎದುರು ನೋಡು ತ್ತಿರುವ ಬಿಜೆಪಿ ಸರ್ಕಾರ ತಡ ಮಾಡದೇ ಹೊಸ ಲೋಕಾಯುಕ್ತರನ್ನು ಈಗಾಗಲೇ ನೇಮಿ ಸಿದೆ. ಎಂತಹ ಕ್ಷಿಪ್ರ ಕಾರ್ಯಾಚರಣೆ, ಸಾರ್ವಜನಿಕ ಜೀವನ ದಲ್ಲಿನ ಭ್ರಷ್ಟಾಚಾರ ದಮನಿಸುವ ಕಾಳಜಿ!

ಲೋಕಾಯುಕ್ತರಿಗೆ ವಿದಾಯ... ಸ್ವಾಗತ... ಆದರೆ ಸಂತೋಷ!

ಇನ್ನುಮುಂದೆ ಕರ್ನಾಟಕ ಲೋಕಾಯುಕ್ತ ಆಯೋಗಕ್ಕೆ ಗೌರವಾನ್ವಿತ ನಿವೃತ್ತ ನ್ಯಾಯಮೂರ್ತಿಗಳಾದ ಶಿವರಾಜಪಾಟೀಲರ ಸಾರಥ್ಯ. ಇವರ ಕೈಬಲ ಪಡಿಸಲು ಮತ್ತೊಬ್ಬ

ಪುಟ 4 ಕ್ಕೆ

ಕಾರ್ಟೂನ್ ಕಾರ್ನರ್



ಚಿಕ್ಕಬಳ್ಳಾಪುರ

'ಭ್ರಷ್ಟಾಚಾರ ವ್ಯವಸ್ಥೆ ಕೂಸು'

ಭ್ರಷ್ಟಾಚಾರ ವಿರೋಧಿ ಸಮಾವೇಶ

ವರದಿ : **ಮುಸ್ತಾಫ್ ಬಾಗೇಪಲ್ಲಿ**

ಸಿ.ಪಿ.ಐ(ಎಂ)ಜಿಲ್ಲಾ ಸಮಿತಿಯ ವತಿಯಿಂದ ಚಿಕ್ಕಬಳ್ಳಾಪುರದ ಅಂಬ್ಕೇಡಕರ್ ಭವನದಲ್ಲಿ ಭ್ರಷ್ಟಾಚಾರ ವಿರೋಧಿ ಸಮಾವೇಷವನ್ನು ಹಮ್ಮಿಕೊಳ್ಳಲಾಗಿತ್ತು. ಅಧ್ಯಕ್ಷತೆಯನ್ನು ಜಿಲ್ಲಾ ಸಮಿತಿಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸಿದ್ದಗಂಗಪ್ಪ ರವರು ವಹಿಸಿದರು. ಪ್ರಾಸ್ತಾವಿಕ ಭಾಷಣವನ್ನು ಜಿಲ್ಲಾ ಸಮಿತಿ ಸದಸ್ಯರಾದ ಗೋಪಿನಾಥ್ ಮಾತನಾಡಿದರು. ಜಿ.ವಿ.ಎಸ್.ಮಾತನಾಡಿ, ರಾಜ್ಯಮಟ್ಟದಲ್ಲಿ ಗಣಿಮಾಫಿಯಾ, ಭೂಮಾಫಿಯಾ, ಇನ್ನು ಹಲವಾರು ವಿಧಗಳಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ. ಹೀಗೆ ಸರ್ಕಾರ ನಡೆಸುವವರೆ ಈ ರೀತಿ ಅದರೇ ಜನ ಸಾಮನ್ಯರ ಗತಿ ಏನು? ಅದ್ದರಿಂದ ಭ್ರಷ್ಟಾಚಾರ ಆಂದೋಲನವನ್ನು ಹೊರಾಟದ ಮೂಲಕ ಜನ ಚಳುವಳಿಯಾಗಿ ರೂಪಗೊಳಿಸಲು ಎಲ್ಲರು ಸನ್ನದ್ದರಾಗಬೇಕು ಎಂದರು.

ನಂತರ ಮಾತನಾಡಿದ ಸಿ.ಪಿ.ಐ.(ಎಂ) ಜಿಲ್ಲಾ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ರವರು ಭ್ರಷ್ಟಾಚಾರ ವಿರುದ್ಧ ದೇಶದ್ಯಾಂತ ಕಳೆದ 16 ರಿಂದ ಎಡ ಪಕ್ಷಗಳ ನೇತೃತ್ವದಲ್ಲಿ ಆಂದೋಲನವನ್ನು ಹಮ್ಮಿಕೊಳ್ಳಲಾಗಿದೆ ಇದರ ಸಲುವಾಗಿ 16ನೇ ತಾರೀಖು ಬೆಂಗಳೂರಿನ ರಾಜ್ಯಮಟ್ಟದಲ್ಲಿ ಉದ್ಘಾಟನೆಯಾಗಿದೆ ಭ್ರಷ್ಟಾಚಾರದ ಬಗ್ಗೆ ಸ್ಪಷ್ಟವಾದ ತಿಳುವಳಿಕೆಯನ್ನು ನೀಡಲು ಸಮಾವೇಶದ ಉದ್ದೇಶವಾಗಿದೆ ಭ್ರಷ್ಟಾಚಾರ ಎಂಬುದು ವ್ಯವಸ್ಥೆಯ ಒಂದು ಕೂಸು. ಆಳುವಾ ಸರ್ಕಾರವೇ ಇದರಲ್ಲಿ ಭಾಗಿಯಾಗಿ ಸಂವಿಧಾನಕ್ಕೆ ದ್ರೋಹ ಬಗೆಯುತ್ತಿವೆ. ಇನ್ನೂ ಭ್ರಷ್ಟಾಚಾರ ನಿರ್ಮೂಲನೆ ಯಾವ ರೀತಿ ಮಾಡಬೇಕು ಎನ್ನುವುದು ಪ್ರಶ್ನಿಸಿಕೊಳ್ಳಬೇಕಿದೆ. 1985 ರಲ್ಲಿ ರಾಜೀವ್ ಗಾಂಧಿ ಪ್ರಧಾನಿ ಮಂತ್ರಿಯಾಗಿದ್ದಾಗ, ಭೂಫೂರ್ಸ ಹಗರಣದಲ್ಲಿ ಬರೀ 64 ಕೋಟಿಗಳಿಗೆ ದೊಡ್ಡ ಹಗರಣವೆಂದು ದೇಶದ್ಯಾಂತ ಜನಕಂಗಾಲಾಗಿ ಹೊಗಿದ್ದರು. ಆದೇ ಇತ್ತಿಚಿನ ವಿದ್ಯಮಾನಗಳನ್ನು ಗಮನಿಸಿದರೆ ಬರಿ 2 ಜಿ. ಟೆಲಿಕಾಂ ಹಗರಣದಲ್ಲಿ 1.76 ಲಕ್ಷ ಕೋಟಿ ರೂ ಭ್ರಷ್ಟಾಚಾರ ನಡೆದಿದೆ ಇನ್ನೂ ಆದರ್ಶ ಕಾಮನ್ ವೇಲ್ತ್ ಗೇಮ್ಸ್ ಹೀಗೆ ನಿರಂತರವಾಗಿ ಒಂದುಂದೆಯೇ ಬಯಲಿಗೆ ಬರುತ್ತೀವೆ. 2.ಜಿ ಗಿಂತ 3.ಜಿ ಸ್ಪೆಕ್ಟ್ರಂ ಇನ್ನೂ ದೊಡ್ಡ ಹಗರಣವಾಗಲಿದೆ. ಇದಕ್ಕಿಂತ ದೊಡ್ಡ ಹಗರಣವೆಂದರೆ ಕೆ.ಜಿ.(ಕೃಷ್ಣಾ – ಗೋಧವಾರಿ ಬೇಸಿನ್‌ನಲ್ಲಿ ಗ್ಯಾಸ್ ಉತ್ಪಾದನೆ ಯನ್ನು ಮಾಡಲು ಖಾಸಗೀಕರಣ ಮಾರುವುದು ಹೀಗೆ ಸರ್ಕಾರವೇ ನೇರವಾಗಿ ಭ್ರಷ್ಟಾಚಾರದಲ್ಲಿ ಪಾಲ್ಗೊಂಡಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಹೀಗೆ ಕೇಂದ್ರ ಸರ್ಕಾರ ಅನುಕರಿಸತಕ್ಕಂತಹ ನೀತಿಯೇ ಭ್ರಷ್ಟಾಚಾರದ ಮೂಲವಾಗಿದೆ ಎಂದರು.

ನಂತರ ಜಿಲ್ಲಾ ಪಂಚಾಯ್ತಿ ಉಪಾಧ್ಯಕ್ಷೆ ಬಿ.ಸಾವಿತ್ರಮ್ಮ ಮಾತನಾಡುತ್ತ ಭ್ರಷ್ಟಾಚಾರ ಇಂದು ಎಲ್ಲಾ ರಂಗಗಳಲ್ಲೂ ವ್ಯಾಪಕವಾಗಿ ಹಬ್ಬಿ ಬಡತನ ನಿರ್ಮೂಲನೆ ಅಸಾಧ್ಯವಾಗಿದೆ ಪರ್ಯಾಸವೆಂದರೆ ಭ್ರಷ್ಟಾಚಾರದಲ್ಲಿ ಮುಳುಗಿರವವರೆ ಅದರ ವಿರುದ್ಧ ಹೊರಾಟಕ್ಕೆ ಕೈಗೊಂಡಿರುವುದರಿಂದ ಜನರು ಗೊಂದಲ ದಲ್ಲಿದ್ದಾರೆ ಎಂದು ತಿಳಿಸಿದರು. ಅಧ್ಯಕ್ಷತೆಯನ್ನು ವಹಿಸಿದ್ದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸಿದ್ದಗಂಗಪ್ಪ ನವರು ಸಹ ಮಾತನಾಡಿದರು.

ನಂತರ ಜಿಲ್ಲಾ ಸಮಿತಿ ಸದಸ್ಯರಾದ ಮುನಿವೆಂಕಟಪ್ಪ ಭ್ರಷ್ಟಾಚಾಲ ವಿರೋಧಿ ಸಮಾವೇಷದ ನಿರ್ಣಾಯವನ್ನು ಮಂಡಿಸಿದರು.ಇದನ್ನು ಜಿಲ್ಲಾ ಸಮಿತಿಯ ಸದಸ್ಯರದ ಬಿಳ್ಳೂರು ನಾಗರಾಜ್ ಅನುಮೋಧಿಸಿದರು. ನಂತರ ಸಭೆಯಲ್ಲಿ ಎಲ್ಲರು ಒಮ್ಮತದಿಂದ ಅಂಗೀಕರಿಸಿದರು ಸಿ.ಪಿ.ಐ.(ಎಂ) ಮುಖಂಡರು.

ಈ ಕಾರ್ಯಕ್ರಮದಲ್ಲಿ ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯಿತಿ ಸದಸ್ಯರಾದ ನಾರಾಯಣಮ್ಮ, ಬಾಗೇಪಲ್ಲಿ ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರಾದ ಶೋಭರಾಣಿ, ಉಪಾಧ್ಯಕ್ಷೆ ಗೌರಮ್ಮ, ಸದಸ್ಯರಾದ ಶ್ರೀ ಗೋಪಾಲಕೃಷ್ಣ, ಶಂಕರ್‌ರೆಡ್ಡಿ, ಜನವಾದಿ ಮಹಿಳಾ ಸಂಘದ ಪವಿತ್ರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಸಿ.ಪಿ.ಐ.(ಎಂ) ಮುಖಂಡರು ಭಾಗವಹಿಸಿದರು.





ಈ ವಾರ

ಪುಟ 3 ರಿಂದ

ಎರಡನೇ ಉಪ ಲೋಕಾಯುಕ್ತರಾಗಿ ಗೌ.ನ್ಯಾಆರ್.ಗುರುರಾಜನ್ ರವರು.

ನ್ಯಾ.ಪಾಟೀಲರು ಕರ್ನಾಟಕದವರು, ರಾಯಚೂರಿನ ಮಲದಕಲ್‌ನಲ್ಲಿ ಜನನ. ಓದಿದ್ದು, ಬೆಳೆದದ್ದು, ವೃತ್ತಿ ಆರಂಭಿಸಿದ್ದು ಇದೇ ಹೈದ್ರಾಬಾದ್ ಕರ್ನಾಟಕದಲ್ಲೇ. ಮುಖ್ಯವಾಗಿ ಗುಲ್ಬರ್ಗಾದಲ್ಲೇ. ಕರ್ನಾಟಕದ ನ್ಯಾಯಮೂರ್ತಿಗಳಾಗಿ ರಾಜಸ್ಥಾನದ ಮುಖ್ಯ ನ್ಯಾಯಮೂರ್ತಿಗಳಾಗಿ ನಂತರ ಸುಪ್ರೀಂಕೋರ್ಟ್ ನಲ್ಲಿಯೂ ಹೀಗೆ ಹಲವು ಹಂತಗಳ ಹೊಣೆ ನಿಭಾಯಿಸಿದವರೇ.

ಹಿಂದೆ ಚುನಾವಣಾ ಆಯೋಗದಂತೆ, ಲೋಕಾಯುಕ್ತವನ್ನು ಜನ ಅಷ್ಟಾಗಿ ಗಂಭೀರವಾಗಿ ನೋಡುತ್ತಿರಲಿಲ್ಲ. ಇತ್ತೀಚಿನ ದಿನಗಳಲ್ಲಿ ದೇಶದಲ್ಲಿ ಹಗರಣ, ಅಕ್ರಮಗಳ ಸರಣಿ ಸ್ಫೋಟಗಳ ನಡುವೆ ಜನತೆಗೆ ಇಂತಹ ಸಂಸ್ಥೆಗಳು ಅಪಾರ ನಿರೀಕ್ಷೆಗಳನ್ನು ಹುಟ್ಟಿಸಿವೆ. ಹಾಗೆ ನೋಡಿದರೆ ಕಛೇರಿ, ಆಸ್ಪತ್ರೆಗಳಲ್ಲಿ 'ಲಂಚ' ವ್ಯವಹಾರವನ್ನು ಎತ್ತಿ ತೋರಿಸಿದವರು ನ್ಯಾ.ವೆಂಕಟಾಚಲ ಅವರು. ಅದು ಅಷ್ಟೇ ಅಲ್ಲ ಭ್ರಷ್ಟಾಚಾರ ಎಂಬುದು ಹೇಗೆಲ್ಲಾ, ಎತ್ತೆಲ್ಲಾ ಇದೆ ಎಂಬುದನ್ನು ಆಡಳಿತ ನಡೆಸುವವರು, ನಡೆಸಿದವರು ನಾಡಿನ ಸಂಪತ್ತನ್ನೇ ಲೂಟಿ ಮಾಡುತ್ತಿರುವ ಭಯಾನಕ ಭ್ರಷ್ಟಾಚಾರ–ಅಕ್ರಮಗಳನ್ನು ಅಡಿಗೆ ಕೈ ಹಾಕಿ ಅಲುಗಾಡಿಸಿ ದವರು ನ್ಯಾಯಮೂರ್ತಿ ಸಂತೋಷ ಹೆಗಡೆಯವರು. ಅಧಿಕಾರಿಗಳು ಗಳಿಸಿದ ಅಕ್ರಮ ಆಸ್ತಿ ಭ್ರಷ್ಟತೆಯನ್ನು ಹೊರತರುತ್ತಲೇ ರಾಷ್ಟ್ರೀಯ–ಅಂತರರಾಷ್ಟ್ರೀಯ ಸಂಬಂಧದ ಗಣಿ ಮಾಫಿಯಾಗಳನ್ನು ಜನರೆದುರು ಕಟಕಟೆಯಲ್ಲಿ ಹೀಗೆ ಲೋಕಾಯುಕ್ತ ಸಂಸ್ಥೆಯ ಕಾರ್ಯವ್ಯಾಪ್ತಿಯನ್ನು ತೆರೆದಿಟ್ಟರು.



ನಿಲ್ಲಿಸಿದವರು. ಅವರು ಅವರ ಕಾರ್ಯವಿಧಾನ, ಕ್ರಮಗಳಲ್ಲಿ ಓರೆಕೋರೆಗಳು ಇರಲಿಲ್ಲ ಅಥವಾ ಇಲ್ಲವೆಂದೇನಲ್ಲ, ರಾಜ್ಯದಲ್ಲಿ ಅಧಿಕೃತ ವಿರೋಧ ಪಕ್ಷಗಳು ಹಾಸಿಗೆ ಹಾಸಿ ಮಕಾಡೆ ಮಲಗಿರುವಾಗ 'ವಿರೋಧ'ಪಕ್ಷ'ವಾಗಿ ಕಾರ್ಯನಿರ್ವಹಿಸಿದವರು ಅವರು ಎಂಬುದೂ ನಿಜ!

ನೆರೆ ಸಂತ್ರಸ್ತರ ಪುನರ್ವಸತಿಯಲ್ಲಿಯೂ ಹಣ ಹೊಡೆದವರನ್ನು ಹೊರಗೆಳೆದ ಪ್ರಕರಣಗಳಲ್ಲಿ ಜನತೆಯ ಲೋಕಾಯುಕ್ತರು ಎಂದು ಕರೆಸಿಕೊಂಡರು.


ಇದು ಗಮನಾರ್ಹ ಹೆಜ್ಜೆ, ಆದರೆ ಇದಕ್ಕೆಲ್ಲಾ ಜನರ ಅಪಾರ ಬೆಂಬಲ, ಮೆಚ್ಚುಗೆ ವ್ಯಕ್ತವಾಯಿತಾದರೂ ಕ್ರಿಯಾಶೀಲ ಚಳುವಳಿಯಾಗಿ ಹರಿಯಲಿಲ್ಲ ಎಂಬ ಕೊರತೆ ಹಾಗೇ ಉಳಿಯುತ್ತದೆ. ಆದರೆ ಒಂದು ಜಾಡು–ಉದಾಹರಣೆ ನಿರ್ಮಿತವಾಯಿತು. ಇದೀಗ, ನೂತನ ಲೋಕಾಯುಕ್ತರನ್ನು ಜನ ಕೇಳುತ್ತಿರುವುದು ಇದನ್ನೇ? ಮಾತ್ರವಲ್ಲ ಭ್ರಷ್ಟರನ್ನು ಬಲೆಗೆ ಹಾಕಲು ಏನೆಲ್ಲಾ ಕ್ರಮಗಳು, ಇಚ್ಛಾಶಕ್ತಿ ಅಗತ್ಯ ಸಿದ್ದತೆಗಳು ಇವೆಯೋ ಎಂದು ಇಲ್ಲಿ ಹಲವು ಆಯ್ಕೆಗಳಿಗೆ ಅವಕಾಶವಿಲ್ಲ. ಒಂದೆಡೆ ಅಧಿಕಾರಸ್ಥರು–ಭ್ರಷ್ಟರು. ಹಗರಣಗಳನ್ನು ಅರಗಿಸಿಕೊಂಡು ನೀತಿ ಭೋದನೆ ಮಾಡುವ ಗಣಿ–ಭೂ ಮಾಫಿಯಾಗಳು. ಇವುಗಳನ್ನು ಮಟ್ಟಹಾಕಬೇಕು ಎಂಬ ನಿರೀಕ್ಷೆಯ ಜನಗಳು. ನಿಜ! ಲೋಕಾಯುಕ್ತ ಸಂಸ್ಥೆಗೂ ಒಂದು ಮಿತಿಯಿದೆ. ಬಲ್ಲವನ್ನೂ ತಡೆಯಲು ಮಟ್ಟ ಹಾಕುವುದು ಸಾಧ್ಯವಿಲ್ಲ. ಆದಾಗ್ಯೂ ಸ್ವಲ್ಪವಾದರೂ ನ್ಯಾಯಕೊಡಬಲ್ಲ ಅವಕಾಶಗಳಿವೆ. ಆದ್ದರಿಂದ ನ್ಯಾಯದ ದಾರಿ ನಡೆಯನ್ನೇ ಜನ ಎದುರು ನೋಡುತ್ತಾರೆ ಹಾದಿ ಸ್ಪಷ್ಟವಿದೆ! ಹೆಜ್ಜೆ ಯಾವ ಕಡೆ?

□

'ಕಾರ್ಪೋರೇಟ್ ಕೊಳ್ಳೆಗಾಗಿ ನೀತಿ ನಿಯಮಗಳೇ ಮಾರ್ಪಾಡು'

– ಕಾಂ. ಸುಧಾಕರ ರೆಡ್ಡಿ
ಸಿಪಿಐ ಉಪ ಪ್ರಧಾನ ಕಾರ್ಯದರ್ಶಿ

ಭ್ರಷ್ಟಾಚಾರದ ವಿರುದ್ಧ ಎಡಪಕ್ಷಗಳ ರಾಜ್ಯ ಮಟ್ಟದ ಸಮಾವೇಶ
ಜುಲೈ 16, 2011 ಬೆಂಗಳೂರು




ಕರ್ನಾಟಕದ ಉದ್ದಗಲ, ದೇಶದ ಉದ್ದಗಲ ಭ್ರಷ್ಟಾಚಾರದ್ದೇ ಮಾತು. ಕೇಂದ್ರ ಯುಪಿಎ ಸರ್ಕಾರ. ರಾಜ್ಯದ ಬಿಜೆಪಿ ಸರ್ಕಾರಗಳು ನಡೆಸಿರುವ ವ್ಯಾಪಕ ಭ್ರಷ್ಟಾಚಾರ, ಸಾರ್ವಜನಿಕ ಸಂಪತ್ತಿನ ಲೂಟಿಯ ಅಗಾಧತೆಯನ್ನು ಕಂಡು ಜನತೆ ಬೆಚ್ಚಿ ಬೀಳುತ್ತಿದ್ದಾರೆ.

ನಮ್ಮ ನಾಡಿನ ಹಾಗೂ ದೇಶದ ಹಲವು ರಾಜಕೀಯ ಪಕ್ಷಗಳು ತಮ್ಮ ಮುಖಂಡರಲ್ಲಿ ಜೈಲಿಗೆ ಹೋಗುವವರು ಯಾರು. ಹೊರಗೆ ಉಳಿಯುವವರು ಯಾರು ಎಂದು ಲೆಕ್ಕಾಚಾರ ಮಾಡುತ್ತಾ ಕೂರಬೇಕಾದ ಪರಿಸ್ಥಿತಿ ಬಂದಿದ್ದರೆ, ಈ ಸನ್ನಿವೇಶದಲ್ಲಿ ನೈತಿಕತೆ, ಭ್ರಷ್ಟಾಚಾರದ ಬಗೆಗೆ ಧೈರ್ಯದಿಂದ ತಲೆ ಎತ್ತಿ ನಿಂತು ಮಾತನಾಡುವ ಉಳಿಸಿಕೊಂಡಿರುವುದು ಬಹುತೇಕ ಎಡಪಕ್ಷಗಳು ಮಾತ್ರ. ಇಂತಹ ಎಡಪಕ್ಷಗಳು ರಾಷ್ಟ್ರವ್ಯಾಪಿಯಾಗಿ ಹಮ್ಮಿಕೊಂಡಿರುವ ಚಳುವಳಿಯ ಭಾಗವಾಗಿ ಜುಲೈ 16,2011 ರಂದು ಬೆಂಗಳೂರಿನಲ್ಲಿ ರಾಜ್ಯ ಮಟ್ಟದ 'ಭ್ರಷ್ಟಾಚಾರ ವಿರೋಧಿ ಸಮಾವೇಶ'ವು ನಡೆಯಿತು.

ಪ್ರಚಾರಾಂದೋಲನಕ್ಕೆ ಚಾಲನೆ ನೀಡಿತು. ಸಿಪಿಐ(ಎಂ) ಸಿಪಿಐ ಫಾರ್ವರ್ಡ್ ಬ್ಲಾಕ್ ಪಕ್ಷಗಳ ರಾಜ್ಯ ಘಟಕಗಳು ಸಂಘಟಿಸಿದ್ದ ಈ ಸಮಾವೇಶವು ನಗರದ ಎನ್.ಜಿ.ಓ. ಸಭಾಂಗಣದಲ್ಲಿ ನಡೆಯಿತು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ಹಾಗೂ ಸಿಪಿಐನ ಹಿರಿಯ ಮುಖಂಡರಾದ ಎಂ.ಸಿ.ನರಸಿಂಹನ್ ಅವರುಗಳು ಅಧ್ಯಕ್ಷತೆ ವಹಿಸಿದ್ದ ಸಮಾವೇಶದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ಪ್ರಸನ್ನಕುಮಾರ್ ಪ್ರಸ್ತಾವಿಕ ಮಾತುಗಳನ್ನಾಡಿದರು.

ರಾಜ್ಯದಲ್ಲಿನ ಬಿಜೆಪಿ ಸರ್ಕಾರದ ಆಡಳಿತದಲ್ಲಿ ಭ್ರಷ್ಟಾಚಾರವೇ ಕಾಯಕ, ಭ್ರಷ್ಟಾಚಾರವೇ ಆಡಳಿತ ಎಂಬಂತಾಗಿದೆ. ದೊಡ್ಡ ಬಂಡವಾಳಗಾರರ ಶಾಮೀಲು, ಬೆಂಬಲದೊಂದಿಗೆ ಕೇಂದ್ರ ಯುಪಿಎ ಸರ್ಕಾರವೂ ಲಕ್ಷಾಂತರ ಕೋಟಿ ರೂಪಾಯಿಗಳ 2 ಜಿ ಮತ್ತು ಕೆಜಿ ಹಗರಣಗಳಲ್ಲಿ ಮುಳುಗಿದೆ ಎಂದೂ ಪ್ರಸನ್ನರವರು ಟೀಕಿಸಿದರು. ದಶಕಗಳ ಕಾಲ ಮಂತ್ರಿ, ಮುಖ್ಯಮಂತ್ರಿಗಳಾಗಿದ್ದರೂ




ಎಡಪಕ್ಷಗಳ ಮುಖಂಡರು ಉಟ್ಟ ಬಟ್ಟೆ, ಸೂಟ್‌ಕೇಸ್‌ನಲ್ಲಿನ ಪುಸ್ತಕಗಳಷ್ಟೇ ತಮ್ಮ ಆಸ್ತಿಯನ್ನಾಗಿ ಇಟ್ಟುಕೊಂಡಿದ್ದಂತಹ ಉದಾಹರಣೆಗಳಿವೆ ಎಂದು ಪ್ರಸನ್ನರವರು ಹೇಳಿದರು.

ಸಿಪಿಐ ಪಕ್ಷದ ಅಖಿಲ ಭಾರತ ಉಪ ಪ್ರಧಾನ ಕಾರ್ಯದರ್ಶಿ ಸುಧಾಕರರೆಡ್ಡಿರವರು ಸಮಾವೇಶವನ್ನು ಉದ್ಘಾಟಿಸಿದರು. ಅವರ ಉದ್ಘಾಟನಾ ಭಾಷಣ ಹಾಗೂ ಇತರ ಮುಖಂಡರ ಮಾತಿನ ಮುಖ್ಯಾಂಶಗಳು ಹೀಗಿವೆ.

ವ್ಯಾಪಕಗೊಂಡ ರಾಜಕೀಯ ಭ್ರಷ್ಟಾಚಾರ
–ಸುಧಾಕರರೆಡ್ಡಿ

"ದೇಶದಲ್ಲಿ ಭ್ರಷ್ಟಾಚಾರವು ಹಿಂದೆಂದೂ ಇಲ್ಲದ ಆಯಾಮವನ್ನು ಮುಟ್ಟಿದೆ. ನಿರ್ದಿಷ್ಟವಾಗಿ ರಾಜಕೀಯ ಭ್ರಷ್ಟಾಚಾರ ವ್ಯಾಪಕಗೊಂಡಿದೆ. ಬೃಹತ್ ಕಾರ್ಪೋರೇಟ್ ಕಂಪನಿಗಳಿಗೆ ಅನುಕೂಲ ಮಾಡಿ ಕೊಡುವುದಕ್ಕಾಗಿ ನೀತಿ ನಿಯಮಗಳನ್ನೇ ಬದಲಿಸಲಾಗಿದೆ. 2ಜಿ ಹಗರಣ, ಕಾಮನ್‌ವೆಲ್ತ್ ಹಗರಣ, ಆದರ್ಶ ವಸತಿ ಹಗರಣ, ಕೆ.ಜಿ. ಹಗರಣ, ಬಯಲಾಗಿವೆ.. ಮುಂದಿನ 18 ವರ್ಷಗಳಲ್ಲಿ ಕೆ.ಜಿ. ಹಗರಣ ಒಂದರಿಂದಲೇ 38 ಲಕ್ಷ ಕೋಟಿ ನಷ್ಟ ಆಗಲಿದೆ.

ಸ್ವಿಸ್ ಬ್ಯಾಂಕ್‌ನಲ್ಲಿ ಭಾರತೀಯರು ಇರಿಸಿರುವ ಕಪ್ಪು ಹಣ 72 ಲಕ್ಷ ಕೋಟಿ ಎಂಬ ಮಾಹಿತಿಗಳಿವೆ. ಎಷ್ಟೆಲ್ಲಾ ಮಾಹಿತಿಗಳಿದ್ದರೂ ಸರ್ಕಾರದ ನಿಷ್ಕ್ರಿಯತೆಯಿಂದ ಅದನ್ನು ವಶಕ್ಕೆ ತೆಗೆದುಕೊಳ್ಳುವ ಕೆಲಸ ಸಿಗಲಿಲ್ಲ. ಕೇಂದ್ರ ಸರ್ಕಾರ ಕಾಂಗ್ರೆಸ್ ಮುಖಂಡರ ಸಂರಕ್ಷಣೆಗೆ ಯತ್ನಿಸುತ್ತಿದೆ. ಯಡಿಯೂರಪ್ಪ ದೇಶದ ಅತಿ ಭ್ರಷ್ಟ ಮುಖ್ಯಮಂತ್ರಿ ಎನ್ನಲಾಗುತ್ತಿದೆ. ಆದರೆ ಅವರಿಗೂ ಸ್ಪರ್ಧಿಗಳಿದ್ದಾರೆ.



ರಾಷ್ಟ್ರಪತಿ ಹೊರತುಪಡಿಸಿ ಪ್ರಧಾನಿ ಲೋಕಪಾಲ ವ್ಯಾಪ್ತಿಗೆ ಬರಬೇಕು: ನ್ಯಾಯಾಂಗಕ್ಕೆ ಉತ್ತರದಾಯಿತ್ವ ಬೇಕು. ಅದಕ್ಕಾಗಿ ಪ್ರತ್ಯೇಕ ನ್ಯಾಯಾಂಗ ಆಯೋಗದ ರಚನೆ ಅಗತ್ಯ. ಲೋಕಪಾಲ ಮಾತ್ರದಿಂದಲೇ ಭ್ರಷ್ಟಾಚಾರವನ್ನು ತಡೆಯಲಾಗದು. ಜಾಗೃತ ಜನತೆಯ ಆಂದೋಲನದಿಂದ ಅದು ಸಾಧ್ಯ.

ಪ್ರಧಾನಿ ಅಪ್ರಾಮಾಣಿಕರು
–ಜಿ.ವಿ.ಶ್ರೀರಾಮರೆಡ್ಡಿ

"ಪ್ರಧಾನಿಯವರು ಪ್ರಮಾಣಿಕರು. ದಕ್ಷರು ಎನ್ನಲಾಗುತ್ತದೆ. ಆದರೆ ಅವರು ಅಪ್ರಮಾಣಿಕರು, ಅದಕ್ಷರು, 2 ಜಿ ಪ್ರಕರಣದಲ್ಲಿ ನನ್ನ ಸಲಹೆ ಪರಿಗಣಿಸಲಿಲ್ಲ... ಕಾನೂನು ಸಚಿವಾಲಯ ತಪ್ಪು ದಾರಿಗೆಳೆಯಿತು ಎನ್ನುತ್ತಿದ್ದಾರೆ.

. ಸ್ವಿಸ್ ಬ್ಯಾಂಕಿನಲ್ಲಿರುವುದು ಮಾತ್ರ ಕಪ್ಪು ಹಣವಲ್ಲ. ನಮ್ಮ ಮಠಗಳಲ್ಲಿಯೂ ಕಪ್ಪು ಹಣ ಇದೆ. ಎಲ್ಲ ಬಗೆಯ ಭ್ರಷ್ಟಾಚಾರ, ಅಕ್ರಮಗಳನ್ನು ಹತ್ತಿಕ್ಕಬೇಕಿದೆ".

ಸಾಂಕೇತಿಕ ಪ್ರತಿಭಟನೆ ಸಾಲದು
–ಸಿದ್ಧನಗೌಡ ಪಾಟೀಲ

"ಕೇವಲ ಸಾಂಕೇತಿಕ ಪ್ರತಿಭಟನೆಗಳಿಂದ ಭ್ರಷ್ಟಾಚಾರದ ವಿರುದ್ಧದ ಹೋರಾಟ ಯಶಸ್ವಿಯಾಗುವುದಿಲ್ಲ. ಬೃಹತ್ ಆಂದೋಲನ ಬೆಳೆದು ಬರಬೇಕು"

ನಿರ್ಣಯ

ರಾಜ್ಯದಾದ್ಯಂತ ಭ್ರಷ್ಟಾಚಾರ ವಿರುದ್ಧ ಹೋರಾಟವನ್ನು ತೀವ್ರಗೊಳಿಸುವ, ಹಾಗೂ ಎಡಪಕ್ಷಗಳ ರಾಷ್ಟ್ರವ್ಯಾಪಿ ಹೋರಾಟದ ಭಾಗವಾಗಿ ಪಿಕೆಟಿಂಗ್ ಇತ್ಯಾದಿ ಹೋರಾಟಗಳನ್ನು ಯಶಸ್ವಿಗೊಳಿಸುವ ನಿರ್ಣಯವನ್ನು ಸಮಾವೇಶದಲ್ಲಿ ಅಂಗೀಕರಿಸಲಾಯಿತು. ಈ ಸಮಾವೇಶದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಪ್ರತಿನಿಧಿಗಳು ಭಾಗವಹಿಸಿದ್ದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ.ನಾಯರ್‌ರವರು ಸಮಾವೇಶದ ಸಮಾರೋಪವನ್ನು ಪ್ರಕಟಿಸಿದರು.

ಯಡಿಯೂರಪ್ಪ ರಾಜೀನಾಮೆ ಕೊಡಲೇಬೇಕು

–ಸಿಪಿಐ(ಎಂ) ಪೊಲಿಟ್ ಬ್ಯೂರೋ
ಜುಲೈ 22, 2011 ನವದೆಹಲಿ


ಕರ್ನಾಟಕ ಲೋಕಾಯುಕ್ತರು. ನೀಡಿದ ಅಕ್ರಮ ಗಣಿಗಾರಿಕೆಯ ವರದಿಯಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪನವರು ಎಸಗಿರುವ ತಪ್ಪುಗಳ ಬಗ್ಗೆ ನಮೂದಿಸಿದ್ದಾರೆ. ಪೂರ್ಣ ವರದಿ ಅಧಿಕೃತವಾಗಿ ಸಲ್ಲಿಕೆಯಾಗದಿದ್ದರೂ ನ್ಯಾ.ಸಂತೋಷಹೆಗಡೆ ಯವರು ಅದನ್ನು ದೃಢೀಕರಿಸಿದ್ದಾರೆ.

ಈ ಆರೋಪದಿಂದಾಗಿ ಯಡಿಯೂರಪ್ಪ ನವರು ರಾಜೀನಾಮೆ ಕೊಡದೇ ಗತ್ಯಂತರವಿಲ್ಲ. ವರದಿ ಸಲ್ಲಿಕೆಯಾದ ಮೇಲೆ ತಪ್ಪೆಸಗಿದವರ ಮೇಲೆ ಕಾನೂನಿನಂತೆ ಕ್ರಮ ಜರುಗಿಸಲೇಬೇಕು. ಬಿಜೆಪಿ ನಾಯಕತ್ವ ಈ ವಿಷಯದಲ್ಲಿ ನುಣುಚಿಕೊಳ್ಳುವಂತಿಲ್ಲ. ಗಣಿ ಮಾಫಿಯಾ ಮತ್ತು ಅದನ್ನು ಪೋಷಿಸುತ್ತಿರುವ ಅಪ್ರಮಾಣಿಕ ರೊಂದಿಗೆ ಸೇರಿ ಕರ್ನಾಟಕ ಸರ್ಕಾರವನ್ನು ರಚಿಸಿರುವುದರ ಹೊಣೆ ಬಿಜೆಪಿ ಹೊರಬೇಕು.

ಹಕ್ಕುಪತ್ರಕ್ಕೆ ಆಗ್ರಹ, ಉಪವಾಸ ಸತ್ಯಾಗ್ರಹ

ದಲಿತ ಹಕ್ಕು ಹೋರಾಟ ಸಮಿತಿಯಿಂದ ತಹಶೀಲ್ದಾರ್ ಕಚೇರಿ ಚಲೋ

ಮಂಗಳೂರು ತಾಲೂಕಿನ ಮುಲ್ಕಿ ನಗರ ಪಂಚಾಯತು ವ್ಯಾಪ್ತಿಯ ಲಿಂಗಪ್ಪಯ್ಯಕಾಡು ಪ್ರದೇಶದ ನಿವಾಸಿಗಳು ಮನೆಕಟ್ಟಿ 35 ವರ್ಷ ಕಳೆದರೂ ಸರ್ಕಾರ ಅವರಿಗೆ ಹಕ್ಕುಪತ್ರ ನೀಡಿಲ್ಲ. ದಲಿತ ಹಾಗೂ ಅಲ್ಪಸಂಖ್ಯಾತ ಸಮುದಾಯದ 65ಕ್ಕೂ ಹೆಚ್ಚು ಕುಟುಂಬಗಳು ಇಲ್ಲಿವೆ. ಹಕ್ಕುಪತ್ರ ಇಲ್ಲದೆ ಈ ಬಡ ಕುಟುಂಬಗಳು ಸರ್ಕಾರದ ಅನೇಕ ಸವಲತ್ತುಗಳಿಂದ ವಂಚಿತರಾಗಿದ್ದಾರೆ. ಇದನ್ನು ತಾಲೂಕು ತಹಶೀಲ್ದಾರರ ಗಮನಕ್ಕೆ ತರುವ ಸಲುವಾಗಿ ಈಗಾಗಲೇ ಕಳೆದ ಎಪ್ರಿಲ್ 24 ರಂದು ಮುಲ್ಕಿ ನಗರ ಪಂಚಾಯತಿಗೆ ಮುತ್ತಿಗೆ ಹಾಕಲಾಗಿತ್ತು. ಅಲ್ಲದೆ ನಿವಾಸಿಗಳ ರೇಶನ್ ಕಾರ್ಡು, ಮತದಾರರ ಗುರುತುಚೀಟಿ ಪ್ರತಿಗಳನ್ನು ಲಗತ್ತಿಸಿ ತಹಶೀಲ್ದಾರರಿಗೆ ಹಕ್ಕುಪತ್ರಕ್ಕಾಗಿ ಮನವಿ ಸಲ್ಲಿಸಲಾಗಿತ್ತು. ಆದರೆ ತಹಶೀಲ್ದಾರರು ಪರಿಶೀಲನಾ ಪ್ರಕ್ರಿಯೆಯನ್ನು ತ್ವರಿತಗೊಳಿಸದೆ ವಿಳಂಬಿಸುತ್ತಿದ್ದಾರೆಂದು ಹಕ್ಕುಪತ್ರ ಚಳುವಳಿಗೆ ನೇತೃತ್ವ ನೀಡಿದ ದಲಿತ ಹಕ್ಕುಗಳ ಹೋರಾಟ ಸಮಿತಿ ಅಭಿಪ್ರಾಯಪಟ್ಟು, ಜುಲೈ 25 ರಂದು ತಹಶೀಲ್ದಾರ್ ಕಚೇರಿ ಚಲೋ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.





ಮಂಗಳೂರು ನಗರದ ಮೈದಾನು ಕಚೇರಿಯಿಂದ ಮಂಗಳೂರು ತಾಲೂಕು ಕಚೇರಿಗೆ ಮೆರವಣಿಗೆ ನಡೆಯಿತು. ಪ್ರತಿಭಟನೆಯನ್ನು ಸಿಪಿಎಂ ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಜೆ.ಬಾಲಕೃಷ್ಣ ಶೆಟ್ಟಿ ಉದ್ಘಾಟಿಸಿದರು. ಪ್ರತಿಭಟನಾ ಸಭೆಯನ್ನುದ್ದೇಶಿಸಿ ಸಿಪಿಎಂ ಜಿಲ್ಲಾ ಸಮಿತಿ ಸದಸ್ಯ ಕೃಷ್ಣಪ್ಪ ಕೊಂಚಾಡಿ, ಉಳ್ಳಾಲ ವಲಯ ಸಿಪಿಎಂ ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್, ಪ್ರಗತಿಪರ ಚಿಂತಕರ ವೇದಿಕೆಯ ಅಧ್ಯಕ್ಷ ಪಿ.ಎ.ಪ್ರಸನ್ನ ಹಾಗೂ ದಲಿತ ಹಕ್ಕು ಹೋರಾಟ ಸಮಿತಿಯ ನಗರ ಕಾರ್ಯದರ್ಶಿ ಲಿಂಗಪ್ಪ ನಂತೂರು ಮಾತನಾಡಿದರು. ಸಭೆಯ ಬಳಿಕ ತಹಶೀಲ್ದಾರರಿಗೆ ಮನವಿಯನ್ನು ಸಲ್ಲಿಸಲಾಯಿತು. ಜಯ ಕುಮಾರ್ ಸ್ವಾಗತಿಸಿದರು. ಎಲ್.ಟಿ.ಸುವರ್ಣ ವಂದಿಸಿದರು. ದಲಿತ ಹಕ್ಕು ಸಮಿತಿಯ ಯಮುನಾ ಪಚ್ಚನಾಡಿ, ಸರೋಜಮ್ಮ, ಲಿಂಗಪ್ಪಯ್ಯ ಕಾಡು ಹೋರಾಟ ಸಮಿತಿಯ ಮುಖಂಡರಾದ ಜುಬೇದಾ, ಲತಾ, ನೌಶಾದ್, ಹಸನಬ್ಬ, ವಿಠಲ, ಶೋಭಾ ಮತ್ತಿತರರು ನೂರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು. ○

ಬೀದಿ ಬದಿ ವ್ಯಾಪಾರಿಗಳಿಂದ ಉಪವಾಸ ಸತ್ಯಾಗ್ರಹ



ಮಂಗಳೂರು ನಗರದ ಬೀದಿ ಬದಿ ವ್ಯಾಪಾರಿಗಳಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸದೆ, 'ಟೈಗರ್' ಕಾರ್ಯಾಚರಣೆಯ ಮೂಲಕ ಅವರ ಬದುಕುವ ಹಕ್ಕನ್ನು ಮಂಗಳೂರು ಮಹಾನಗರ ಪಾಲಿಕೆ ಇಲ್ಲವಾಗಿಸುವ ಪ್ರಯತ್ನ ಮುಂದುವರಿಸುತ್ತಲೇ ಇದೆ. 3 ತಿಂಗಳ ಹಿಂದೆ ಸಿಐಟಿಯು ನೇತೃತ್ವದಲ್ಲಿ ಬೀದಿ ಬದಿ ವ್ಯಾಪಾರಿಗಳ ಸಂಘ ರಚನೆಗೊಂಡು ವಿವಿಧ ಹಂತಗಳಲ್ಲಿ ಪ್ರತಿಭಟನಾ ಹೋರಾಟವನ್ನು ನಡೆಸುತ್ತಾ ಬಂದಿದೆ. 15 ದಿನಗಳೊಳಗಾಗಿ ಪರ್ಯಾಯ ವ್ಯವಸ್ಥೆಯನ್ನು ಮಾಡುವುದಾಗಿ ಮಹಾನಗರ ಪಾಲಿಕೆ ಕೌನ್ಸಿಲ್ ಸಭೆಯಲ್ಲಿ ತೀರ್ಮಾನ ಕೈಗೊಂಡು ಇಪ್ಪತ್ತೈದು ದಿನಗಳಾಗಿದ್ದರೂ ಯಾವೊಂದೂ ಪರ್ಯಾಯ ವ್ಯವಸ್ಥೆಯನ್ನು ಮಾಡಿಲ್ಲ; ಮಾತ್ರವಲ್ಲದೆ ಪದೇ ಪದೇ 'ಟೈಗರ್' ಕಾರ್ಯಾಚರಣೆ ನಡೆಸಿ ವ್ಯಾಪಾರಿಗಳನ್ನು ಓಟ್ಟಾಡಿಸುತ್ತಿದೆ. ಮಂಗಳೂರು ಮಹಾನಗರ ಪಾಲಿಕೆಯ ಈ ವಚನ ಭ್ರಷ್ಟತೆಯನ್ನು ವಿರೋಧಿಸಿ ಜುಲೈ 25 ರಂದು ಪಾಲಿಕೆ ಕಚೇರಿ ಎದುರು ಹೋರಾಟ ಸಮಿತಿ ನೇತೃತ್ವದಲ್ಲಿ ಉಪವಾಸ ಸತ್ಯಾಗ್ರಹವನ್ನು ಹಮ್ಮಿಕೊಳ್ಳಲಾಗಿತ್ತು.

ಸಾಮಾಜಿಕ ಕಾರ್ಯಕರ್ತೆ ಹಾಗೂ ಹೋರಾಟ ಸಮಿತಿಯ ಸದಸ್ಯೆ ಫ್ಲೋರೀಟಾ ನೊರೊನ್ಹಾ ಸತ್ಯಾಗ್ರಹವನ್ನು ಉದ್ಘಾಟಿಸಿದರು. ಬೀದಿ ಬದಿ ವ್ಯಾಪಾರ ಒಂದು ಹಕ್ಕಾಗಿದ್ದು, ಆ ಹಕ್ಕನ್ನು ಬಡ ವ್ಯಾಪಾರಿಗಳಿಂದ ಕಸಿಯುವ ಅಧಿಕಾರ ಯಾರಿಗೂ ಇಲ್ಲ ಎಂದು ಅವರು ಹೇಳಿದರು. ಮನಪಾ ವ್ಯಾಪ್ತಿಯಲ್ಲಿರುವ 500 ರಷ್ಟು ಬೀದಿ ಬದಿ ವ್ಯಾಪಾರಿಗಳಿಗೆ ವ್ಯವಸ್ಥೆ ಮಾಡಲು ಆಗದ ಸರಕಾರ ಇರುವುದು ನಮ್ಮ ದುರಂತ. ಟೈಗರ್ ಕಾರ್ಯಾಚರಣೆಯ ಮೂಲಕ ಬಡ ವ್ಯಾಪಾರಿಗಳಿಗೆ ತೊಂದರೆ ನೀಡುವ ಬದಲು ಅವರಿಗೆ ಅಗತ್ಯವಾದ ವ್ಯವಸ್ಥೆಯನ್ನು ಕಲ್ಪಿಸುವ ಕಾರ್ಯವನ್ನು ಪಾಲಿಕೆ ಮಾಡಬೇಕು ಎಂದು ಅವರು ಆಗ್ರಹಿಸಿದರು.

ಪ್ರತಿಭಟನಾ ಸತ್ಯಾಗ್ರಹಿಗಳನ್ನುದ್ದೇಶಿಸಿ ದ.ಕ.ಜಿಲ್ಲಾ ಜನತಾದಳದ ಮುಖಂಡ ಎಂ.ಜಿ.ಹೆಗ್ಡೆ, ಶಶಿರಾಜ್ ಶೆಟ್ಟಿ,ಉಳ್ಳಾಲ ವಲಯ ಸಿಪಿಎಂ ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್, ಆಟೋ ರಿಕ್ಷಾ ಚಾಲಕರ ಮುಖಂಡ ಎಲ್.ಟಿ. ಸುವರ್ಣ, ಡಿವೈಎಫ್ಐ ಮುಖಂಡರಾದ ದಯಾನಂದ ಶೆಟ್ಟಿ, ಬಿ.ಕೆ.ಇಮ್ತಿಯಾಜ್ ಮಾತನಾಡಿದರು.

ಒಂದು ದಿನದ ಉಪವಾಸ ಸತ್ಯಾಗ್ರಹದಲ್ಲಿ ಹೋರಾಟ ಸಮಿತಿಯ ಸಂಚಾಲಕ ಸುನಿಲ್ ಕುಮಾರ್ ಬಜಾಲ್, ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಕೆ.ಯಾದವ ಶೆಟ್ಟಿ, ಡಿವೈಎಫ್ಐನ ಯೋಗೀಶ್ ಜಪ್ಪಿನಮೊಗರು, ಪಾಲಿಕೆ ಸದಸ್ಯೆ ಕಾಂಗ್ರೆಸಿನ ಅಪ್ಪಿ ಅಲ್ಲದೆ ಬೀದಿ ಬದಿ ವ್ಯಾಪಾರಿಗಳ ಸಂಘದ ಮುಖಂಡರಾದ ಮುಹಮ್ಮದ್ ಮುಸ್ತಾಫಾ, ಸಂತೋಷ್ ಕುಮಾರ್, ಶೋಭಾ, ಮಹಮ್ಮದ್ ಸಲೀಂ, ಆಸೀಫ್, ಅಬ್ದುಲ್ ಮಲಿಕ್ ರವರು ಕುಳಿತಿದ್ದರು. ಸಾಯಂಕಾಲ ಅನ್ನ ಸತ್ಯಾಗ್ರಹದ ಸಮಾರೋಪ ಭಾಷಣವನ್ನು ಸಿಐಟಿಯು ದ.ಕ. ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ ಮಾಡಿದರು. ○



ಅಂಕೋಲಾದಲ್ಲಿ ಪ್ರತಿಭಟನೆ

ಯಡಿಯೂರಪ್ಪ ಕೂಡಲೇ ರಾಜಿನಾಮೆ ನೀಡಬೇಕೆಂದು ಮತ್ತು ಹೊಸ ಚುನಾವಣೆಗೆ ಆದೇಶ ನೀಡಬೇಕೆಂದು ಒತ್ತಾಯಿಸಿ ಅಂಕೋಲಾದಲ್ಲಿ ಸಿಪಿಎಂ ಪಕ್ಷದಿಂದ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು. ಪಕ್ಷದ ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ, ಸ್ಥಳೀಯ ಮುಖಂಡರಾದ ಗೌರೀಶ ನಾಯಕ, ಮುರ್ಕುಂಡಿ ನಾಯ್ಕ, ರಾಜು ಜಿ. ಗೌಡ, ನಾಗಪ್ಪ ನಾಯ್ಕ, ಸೋಮಯ್ಯ ಗೌಡ ಮುಂತಾದವರು ನೇತೃತ್ವ ವಹಿಸಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಭ್ರಷ್ಟಾಚಾರ ನವ ಉದಾರೀಕರಣದ ಕೂಲಿ

ಜುಲೈ 8 ರ 'ಪೀಪಲ್ಸ್ ಡೆಮಾಕ್ರಸಿ' ಯ ಲೇಖನ

ಪ್ರಕಾಶ್ ಕಾರಟ್


ಹಗರಣಗಳ ಸರಮಾಲೆ ಕೇಂದ್ರ ಸರ್ಕಾರವನ್ನು ಮತ್ತಷ್ಟು ಸಂಕಟಕ್ಕೆ ಸಿಲುಕಿಕೊಳ್ಳುವಂತೆ ಮಾಡಿದೆ. 9 ತಿಂಗಳ ಬಳಿಕ 2ಜಿ ಸ್ಪೆಕ್ಟ್ರಂ ಪ್ರಕರಣ ಕೇಂದ್ರವನ್ನು ಸಂದಿಗ್ಧಕ್ಕೆ ಸಿಲುಕಿಸಿದೆ. ಇದಾದ ಬೆನ್ನಲ್ಲೇ ಒಂದರ ಹಿಂದೆ ಮತ್ತೊಂದು ಹಗರಣಗಳು ಬಯಲಾಗುತ್ತಲೇ ಸಾಗಿದೆ. ಪ್ರತಿಯೊಂದು ಹಂತದಲ್ಲೂ ಮನಮೋಹನ್ ಸರ್ಕಾರದ ಪ್ರತಿಷ್ಠೆಗೆ ಬಲವಾದ ಪೆಟ್ಟು ಬೀಳುತ್ತಲೇ ಇದೆ. ಇದರಲ್ಲಿ ಇತ್ತೀಚಿನ ಸೇರ್ಪಡೆ ಎಂದರೆ, ವಿದೇಶದಲ್ಲಿರುವ ಕಾಳಧನವನ್ನು ತರಲು ಕೇಂದ್ರ ಸರ್ಕಾರ ನಿರಾಸಕ್ತಿ ವಹಿಸಿದೆ ಎಂಬ ಸುಪ್ರೀಂ ಕೋರ್ಟ್ ಆಕ್ರೋಶ. ಕೇಂದ್ರದ ನಿರ್ಲಕ್ಷ್ಯದಿಂದ ಕೆಂಡಾಮಂಡಲವಾದ ಸುಪ್ರೀಂ ಕೋರ್ಟ್ ಈ ಬಗ್ಗೆ ಸರ್ಕಾರದ ಕ್ರಮದ ಮೇಲುಸ್ತುವಾರಿ ನೋಡಿಕೊಳ್ಳಲು ವಿಶೇಷ ತನಿಖಾ ತಂಡವನ್ನು ರಚಿಸಿದೆ. ಈ ಮೂಲಕ ಸರ್ಕಾರ ರಚಿಸಿದ ಉನ್ನತಾಧಿಕಾರದ ಸಮಿತಿಯನ್ನು ಬರ್ಖಾಸ್ತುಗೊಳಿಸಿದೆ.

ದೇಶದಲ್ಲಿ ಈಗ ಕುತೂಹಲಕಾರಿ ರಾಜಕೀಯ ಪರಿಸ್ಥಿತಿ ನೆಲೆಸಿದೆ. ಎರಡನೇ ಅವಧಿಯ ಯುಪಿಎ ಸರ್ಕಾರ ಕಳೆದ ಮೇ ತಿಂಗಳಿನಲ್ಲಿ ತನ್ನ ಅಧಿಕಾರಾವಧಿಯ ಎರಡನೇ ವರ್ಷ ಪೂರೈಸಿದೆ. ಈಗ ಅದು ಯಾವುದೇ ದೂರದೃಷ್ಟಿ ಇಲ್ಲದೆ ಅಧ್ವಾನದತ್ತ ಸಾಗುತ್ತಿದೆ. ಒಂದರ ಹಿಂದೆ ಒಂದು ಹಗರಣ ಬಯಲಾಗುತ್ತಲೇ ಇದೆ. ಇದರಿ ಸರ್ಕಾರ ಹೆಚ್ಚಿನ ಅಪಾಯವ ತಪ್ಪಿಸುವತ್ತ ಹಾಗೂ ಹಾನಿ ನಿಯಂತ್ರಿ ಕ್ರಮಗಳತ್ತ ಅನಿವಾರ್ಯವಾ ಗಂಟುಬೀಳುತ್ತಿದೆ.

ಸರ್ಕಾರ ಸಮಸ್ಯೆಯಲ್ಲಿದೆ, ಗೊತ್ತು ಗುರಿಯಿಲ್ಲದೆ ಸಾಗು ಎಂಬುದನ್ನು ಸ್ವತಃ ಸರ್ಕಾರದ ಬೆಂಬಲಿಗರು ಎಂದು ಹೇಳಲ ಮಿತ್ರಪಕ್ಷಗಳೇ ಹೇಳುತ್ತಿವೆ. ಉದಾರೀಕರಣದ ನೀತಿಗಳನ್ನು ಮು ಕೊಂಡೊಯ್ಯುವಲ್ಲಿ ಸಕಾ ವಿಫಲವಾಗಿದೆ ಎಂಬುದಕ್ಕೆ ಬೃಹತ್ ಉದ್ಯಮ ಸಂಸ್ಥೆಗಳು ಮತ್ತು ಕಾರ್ಪೊರೇಟ್ ವಲಯದ ಲಾಬಿಗಳು ತೀವ್ರ ದುಃಖ ವ್ಯಕ್ತಪಡಿಸುತ್ತಿದೆ. ಬಂಡವಾಳ ಹೂಡಿಕೆದಾರರು ತಮಗೆ ಆಗಬಹುದಾದದ ನಷ್ಟದ ಕುರಿತು ಕೆಪ್ಪು ಕನವರಿಕೆಗಳೊಂದಿಗೆ ಮರುಗುತ್ತಿದ್ದಾರೆ. ಪ್ರಧಾನ ಮಂತ್ರಿಗಳು ಸ್ಪಷ್ಟ ನಿರ್ಧಾರ ಇಲ್ಲದ ಹಾಗೂ ಪರಿಣಾಮಕಾರಿಯಲ್ಲದ ನಾಯಕ ಎಂಬುದಾಗಿ ಕಾರ್ಪೊರೇಟ್ ಮಾಧ್ಯಮ ಸಂಸ್ಥೆಗಳು ವರ್ಣಿಸುತ್ತಿವೆ. ಆಡಳಿತದ ಚಿಂತನೆ ಹಾಗೂ ಜಾರಿಯಲ್ಲಿ ಕಾಂಗ್ರೆಸ್ ಪಕ್ಷ ಮತ್ತು ಸರ್ಕಾರದ ಮಧ್ಯೆ ಅಪಸ್ವರ ಇದೆ ಎಂದು ಬಿಂಬಿಸುತ್ತಿವೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿರುವ ಕೆಲವು ಮಾಧ್ಯಮ ಸಂಸ್ಥೆಗಳು ಯುಪಿಎ–2 ತನ್ನ ಮೂರನೇ ವರ್ಷದ ಅಧಿಕಾರವಧಿ ಪೂರ್ಣಗೊಳ್ಳುವ ಮೊದಲೇ ಊನಗೊಂಡ ವ್ಯಕ್ತಿ ಅಥವಾ ಹೆಳವನ ಪರಿಸ್ಥಿತಿಯಂತಾಗಿದೆ ಎಂದು ಬಣ್ಣಿಸಿದೆ.

ಭ್ರಷ್ಟಾಚಾರ: ನವ ಉದಾರೀಕರಣದ ಕೂಲಿ

ಭ್ರಷ್ಟಾಚಾರ, ಹಗರಣಗಳಿಂದ ಕೇಂದ್ರ ಸರ್ಕಾರ ದಿಕ್ಕುತಪ್ಪಿದೆ. ಆದರೆ ಪರಿಸ್ಥಿತಿ ಕುತೂಹಲಕಾರಿಯಾಗಿದೆ. ಏಕೆಂದರೆ, ಸರ್ಕಾರ ಅಸ್ಥಿರಗೊಳ್ಳುವ ಯಾವುದೇ ಸಾಧ್ಯತೆ ಇಲ್ಲ. ಸರ್ಕಾರಕ್ಕೆ ಸಂಬಂಧಿಸಿದಂತೆ, ಯಾವುದೇ ಗಂಭೀರ ರಾಜಕೀಯ ಅಪಾಯ ಎದುರಾಗಿಲ್ಲ. ಇಷ್ಟೆಲ್ಲ ಭ್ರಷ್ಟಾಚಾರ, ಹಗರಣ ಹೊರಬಿದ್ದರೂ ಯಾವುದೇ ಮಿತ್ರಪಕ್ಷವಾಗಲೀ ಸರ್ಕಾರದ ಸಖ್ಯ ತ್ಯಜಿಸಿಲ್ಲ. ಯಾವುದೇ ಪಕ್ಷ ಕೇಂದ್ರ ಸರ್ಕಾರಕ್ಕೆ ನೀಡಿರುವ ಆಂತರಿಕ ಹಾಗೂ ಬಾಹ್ಯ ಬೆಂಬಲ ವಾಪಸ್ ಪಡೆದಿಲ್ಲ. ಇಂತಹ ಯಾವುದೇ ಪ್ರಕ್ರಿಯೆ ನಡೆಯದಿರುವಾಗ ಸರ್ಕಾರ ಯಾಕೆ ತಾನೆ



ಅಸ್ಥಿರವಾಗುತ್ತದೆ? ಉನ್ನತ ಮಟ್ಟದಲ್ಲಿ ಭ್ರಷ್ಟಾಚಾರ ನಡೆದಿದ್ದರೂ, ಈ ಹಗರಣಗಳು ಸರ್ಕಾರದ ಸಮಗ್ರತೆ ಮತ್ತು ವಿಶ್ವಾಸಾರ್ಹತೆಗೆ ಧಕ್ಕೆ ತಂದರೂ ಸರ್ಕಾರಕ್ಕೆ ಯಾವ ಅಪಾಯವೂ ಆಗಿಲ್ಲ ಎಂಬ ಹಿನ್ನೆಲೆಯಲ್ಲಿ ಈ ಮೇಲಿನ ಪ್ರಶ್ನೆಗೆ ಉತ್ತರ ಕಂಡುಕೊಳ್ಳಬೇಕು.

ನವ ಉದಾರೀಕರಣದ ನೀತಿಗಳ ಕೂಲಿ ಎಂದರೆ ಭ್ರಷ್ಟಾಚಾರ ಮತ್ತು ಸಾರ್ವಜನಿಕ ಸಂಪತ್ತಿನ ಲೂಟಿ. ಕೇಂದ್ರ ಸರ್ಕಾರವೇ ಮುಂದೆ ನಿಂತು ಈ ಪ್ರಕ್ರಿಯೆಗೆ ದಾರಿ ಮಾಡಿಕೊಟ್ಟಿದೆ. ಇದಕ್ಕೆ ಬೇಕಾದ ಅನುಕೂಲತೆಗಳನ್ನು ಮಾಡುವ ಉಪಕರಣವಾಗಿ ಮಾರ್ಪಟ್ಟಿದೆ.

2 ಜಿ ಸ್ಪೆಕ್ಟ್ರಂ ಹಗರಣವು ನಾಟಕೀಯ ತಿರುವುಗಳನ್ನು ಪಡೆದು ಅಧಿಕಾರಿಗಳು, ಆಡಳಿತಾರೂಢ ರಾಜಕಾರಣಿಗಳು ಮತ್ತು ಬೃಹತ್ ಉದ್ಯಮಿಗಳ ನಡುವಿನ ನಂಟನ್ನು ಬಯಲುಗೊಳಿಸಿದೆ. ಇದು ನವ ಉದಾರೀಕರಣ ವ್ಯವಸ್ಥೆಯ ಒಂದು ಫಲವಾಗಿದೆ. ಪ್ರಧಾನ ಮಂತ್ರಿ ಮತ್ತು ಕೇಂದ್ರದ ಸಚಿವರುಗಳು ಈ ಪ್ರಕ್ರಿಯೆಯ ಹೃದಯ ಸ್ಥಾನದಲ್ಲಿದ್ದಾರೆ. ಆದ್ದರಿಂದಲೇ ಉದಾರೀಕರಣದ ನಿರ್ಮಾತೃ ಎನಿಸಿದವರೇ ಈಗ ನೇರವಾಗಿ ಭ್ರಷ್ಟಾಚಾರದ ಬಿಸಿಯನ್ನು ಅನುಭವಿಸುತ್ತಿದ್ದಾರೆ. ಅವರೇ ಆರಂಭಿಸಿದ ನೀತಿಗಳು ಮತ್ತು ಚೌಕಟ್ಟಿನಲ್ಲಿ ಪದೇ ಪದೇ ಬರುವ ರೋಗವಾಗಿದೆ.

ಈ ಭ್ರಷ್ಟಾಚಾರದ ನಂಟಿನ ಮೂರು ವಿಭಾಗದ ಪ್ರತಿನಿಧಿಗಳನ್ನೂ ನಾವು ತಿಹಾರ್ ಜೈಲಿನಲ್ಲಿ ಕಾಣಬಹುದು. ಬೃಹತ್ ಉದ್ಯಮಿಗಳಲ್ಲಿ ಕಂಪೆನಿಗಳ ಮುಖ್ಯಸ್ಥರಿಂದ ಹಿಡಿದು ವಿವಿಧ ಸ್ಥಾನಗಳನ್ನು ಅಲಂಕರಿಸಿದವರು ಇದ್ದಾರೆ. ಇವರೆಲ್ಲರೂ ಲಂಚ ನೀಡಿದ ಪ್ರಕರಣದಲ್ಲಿದ್ದಾರೆ. ಆಡಳಿತಾರೂಢ ರಾಜಕಾರಣಿಗಳಲ್ಲಿ ಎ. ರಾಜಾ, ಕಣಿಮೋಳಿ ಮೊದಲಾದವರಿದ್ದಾರೆ. ಇನ್ನು ಅಧಿಕಾರಿಗಳ ಪೈಕಿ ಟೆಲಿಕಾಂ ಇಲಾಖೆಯ ಮಾಜಿ ಕಾರ್ಯದರ್ಶಿ ಮತ್ತು ಸಚಿವಾಲಯದ ವಿವಿಧ ಅಧಿಕಾರಿಗಳು ಜೈಲಿನ ಊಟ ಮಾಡುತ್ತಿದ್ದಾರೆ.

ಸಂಕ್ಷಿಪ್ತವಾಗಿ ಹೇಳುವುದಿದ್ದರೆ, ಸರ್ಕಾರಕ್ಕೆ ಈ ಪಾರ್ಶ್ವವಾಯು ಬಡಿಯಲು ಕಾರಣ ವ್ಯವಸ್ಥಿತವಾಗಿ ಬದಲಾದ ಭ್ರಷ್ಟಾಚಾರದ ಸ್ವರೂಪ. ಪ್ರಭುತ್ವವನ್ನು ಬೃಹತ್ ಉದ್ಯಮಿಗಳಿಗೆ ಮುಕ್ತಗೊಳಿಸಿದ ಪರಿಣಾಮವೇ ಇದು. ಕಾರ್ಯಾಂಗದ ವಿಶ್ವಾಸಾರ್ಹತೆಗೆ ಈ ಪ್ರಕ್ರಿಯೆ ಗಂಭೀರ ಪ್ರಹಾರ ನೀಡಿದೆ. ಭ್ರಷ್ಟಾಚಾರ ಒಂದು ಕ್ಯಾನ್ಸರ್ ಆಗಿ ಇಡೀ ವ್ಯವಸ್ಥೆಗೆ ಸಂಚಕಾರವಾಗಿ ಬೆಳೆಯುವ ಹಂತಕ್ಕೆ ಬೆಳೆದುಬಿಟ್ಟಿದೆ. ಇದನ್ನು ತಡೆಯಲು ಉನ್ನತ ಮಟ್ಟದಲ್ಲಿ ನ್ಯಾಯಾಂಗ ಕೂಡ ಮಧ್ಯಪ್ರವೇಶ ಮಾಡಬೇಕಾದ ಅನಿವಾರ್ಯತೆಯೂ ಎದುರಾಗಿದೆ.

2010ರ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಜಂಟಿ ಸಂಸದೀಯ ಸಮಿತಿ ರಚನೆ ವೇಳೆ ಹಾಗೂ ಭ್ರಷ್ಟಾಚಾರದ ವಿರುದ್ಧದ ಪ್ರಬಲ ಆಂದೋಲನದ ಸಂದರ್ಭದಲ್ಲಿ ಸಂಸತ್ತಿನಲ್ಲಿ ರಾಜಕೀಯವಾಗಿ ಭ್ರಷ್ಟಾಚಾರ ಯಾವ ಪಾತ್ರ ವಹಿಸಿತು ಎಂಬುದು ನಮಗೆಲ್ಲರಿಗೂ ಗೊತ್ತೇ ಇದೆ.

ಭ್ರಷ್ಟಾಚಾರವನ್ನು ಬೇರುಸಮೇತ ಕಿತ್ತು ಹಾಕಲು ಕೇಂದ್ರ ಸರ್ಕಾರ ಮತ್ತು ಕಾಂಗ್ರೆಸ್ ನಾಯಕತ್ವ ದಯನೀಯ ವೈಫಲ್ಯ ಕಂಡಿದೆ. ತಾನೇ ಆರಂಭಿಸಿದ ಆರ್ಥಿಕ ನೀತಿಗಳಿಂದಾಗಿ ಭ್ರಷ್ಟಾಚಾರ ವಿರಾಟ್‌ರೂಪ ಪಡೆದುಕೊಂಡಿದ್ದು, ರಾಜಕೀಯವಾಗಿ ಈ ಸಮಸ್ಯೆಯನ್ನು ಎದುರಿಸಲು ಕಾಂಗ್ರೆಸ್ ಅಶಕ್ತವಾಗಿದೆ. ಇದೇ ಆರ್ಥಿಕ ನೀತಿಗಳನ್ನು ಮುನ್ನಡೆಸಿದ್ದ ಎನ್‌ಡಿಎ ಸರ್ಕಾರದಲ್ಲೂ ಉನ್ನತ ಮಟ್ಟದಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿ ಬೆಳೆದುಬಿಟ್ಟಿತ್ತು.

ಈ ಪಿಡುಗನ್ನು ತಡೆಯಲು ಕಾಂಗ್ರೆಸ್ ಯಾವುದೇ ತಂತ್ರವನ್ನು ಅನುಸರಿಸಿದರೂ ಉನ್ನತ ಮಟ್ಟದಲ್ಲಿ ವ್ಯವಸ್ಥಿತವಾಗಿ ನಡೆಯುತ್ತಿರುವ ಭ್ರಷ್ಟಾಚಾರವನ್ನು ತಡೆಯಲು ಅದು ಅಸಮರ್ಥವಾಗಿದೆ. ಇಬ್ಬರು ಕೇಂದ್ರ ಸಚಿವರುಗಳಾದ ದಯಾನಿಧಿ ಮಾರನ್ ಮತ್ತು ಮುರಳಿ ದಿಯೋರಾ ತನಿಖಾ ಸಂಸ್ಥೆಗಳ ಹದ್ದಿನ ಕಣ್ಣಿಗೆ ಒಳಗಾಗಿದ್ದಾರೆ. ಕೃಷ್ಣಾ ಗೋದಾವರಿ ಅನಿಲ ನಿಕ್ಷೇಪದ ನೀಡಿಕೆಯಲ್ಲಾದ ಅವ್ಯವಹಾರದ ವಿವರ ಸಿಎಜಿ ವರದಿಗಾಗಿ ಕಾಯುತ್ತಿದೆ. ಇಂತಹ ಪ್ರಕರಣಗಳ ಸಂದರ್ಭದಲ್ಲೇ ಸಿಎಜಿಯ ಪಾತ್ರ ಹಾಗೂ ಕಾರ್ಯಾಂಗದ ವಲಯದಲ್ಲಿ ನ್ಯಾಯಾಂಗ ಹಸ್ತಕ್ಷೇಪ ಮಾಡುತ್ತಿರುವುದನ್ನು ಪ್ರಧಾನ ಮಂತ್ರಿ ಮತ್ತು ಕಾಂಗ್ರೆಸ್‌ನ ನಾಯಕತ್ವ ಟೀಕಿಸುತ್ತಿದೆ. ಇದು ಭ್ರಷ್ಟಾಚಾರವನ್ನು ಹತ್ತಿಕ್ಕುವಲ್ಲಿ ವೈಫಲ್ಯ ಅನುಭವಿಸಿದ ಆ ಪಕ್ಷದ ಹತಾಶ ಮನೋಭಾವವನ್ನು ತೋರಿಸುತ್ತಿದೆ. ಪರಿಣಾಮಕಾರಿ ಲೋಕಪಾಲ್ ಮಸೂದೆ ಕುರಿತ ಬೇಡಿಕೆಗೆ ಜನಸಮೂಹದಿಂದ ಸಿಕ್ಕಿದ ಅಗಾಧ ಬೆಂಬಲ ಜನರಲ್ಲಿ ಭ್ರಷ್ಟಾಚಾರದ ವಿರುದ್ಧದ ಮನೋಭಾವವನ್ನು ತೋರಿಸಿದೆ. ಅಣ್ಣಾ ಹಜಾರೆ ತಂಡ ಮುಂದಿಟ್ಟ ಎಲ್ಲ ಬೇಡಿಕೆಗಳನ್ನು ಯಾರೂ ಒಪ್ಪದಿರಬಹುದು. ಆದರೆ, ಆ ಬೇಡಿಕೆಗಳ ಹಿಂದಿರುವ ಸಾಮಾಜಿಕ ಕಳಕಳಿಯನ್ನು ಅರ್ಥೈಸಿಕೊಳ್ಳಬೇಕು. ಅದಕ್ಕೆ ಬದಲಾಗಿ ಸರ್ಕಾರ ಪರಿಣಾಮಕಾರಿ ಲೋಕಪಾಲ್ ವ್ಯವಸ್ಥೆ ರಚಿಸುವ ಪ್ರಕ್ರಿಯೆಯಿಂದ ವಿಮುಖವಾಗುತ್ತಿದೆ.

ಭ್ರಷ್ಟಾಚಾರದ ವಿರುದ್ಧದ ಸಮರದಲ್ಲಿ ತಾನು ಅನುಸರಿಸಿದ ಕ್ರಮಗಳಿಂದ ಕೇಂದ್ರ ಸರ್ಕಾರ ಜನರ ಹೃದಯವನ್ನು ಗೆಲ್ಲುವಲ್ಲಿ ವಿಫಲವಾಗಿದೆ. ಈ ಜನಾಂದೋಲನವನ್ನು ಹತ್ತಿಕ್ಕಲು ಮುಂದಾದ ಕಾಂಗ್ರೆಸ್ ನಾಯಕತ್ವ ತಾನು ಹೆಣೆದ ಬಲೆಯಲ್ಲಿ ಸಿಕ್ಕಿಹಾಕಿಕೊಂಡಿದೆ. ಸರ್ಕಾರದಲ್ಲಿ ಪ್ರಧಾನಿಯವರ ಬಳಿಕದ ಸ್ಥಾನ ಹೊಂದಿರುವ ಕೇಂದ್ರ ಸಚಿವ ಹಾಗೂ ಹಿರಿಯ ಕಾಂಗ್ರೆಸ್ ನಾಯಕ ಪ್ರಣಬ್ ಮುಖರ್ಜಿ ಒಂದು ಹೇಳಿಕೆ ನೀಡಿ ಪ್ರತಿಪಕ್ಷದ ನಿಲುವನ್ನು ಖಂಡಿಸಿದ್ದರು. ರಾಮ್‌ದೇವ್ ಮತ್ತು ಅಣ್ಣಾ ಹಜಾರೆ ಹೋರಾಟಕ್ಕೆ ಬಿಜೆಪಿ ಮತ್ತು ಸಿಪಿಐ(ಎಂ)

ಪುಟ 12 ಕ್ಕೆ

'ಗಣಿ ಲೂಟಿ: ಲೋಕಾಯುಕ್ತ ತನಿಖಾ ವರದಿ

ಬಿಜೆಪಿ–ಸಂಘ ಪರಿವಾರಗಳ ನೈತಿಕ ಅಧಃಪತನಕ್ಕೆ ಕನ್ನಡಿ

ಯಡಿಯೂರಪ್ಪ ಸರ್ಕಾರ ಅಕ್ರಮ ಗಣಿಗಾರಿಕೆ ಬೊಕ್ಕಸಕ್ಕೆ ರೂ. 16,085 ಕೋಟಿ ನಷ್ಟ

> ಗಣಿಗಾರಿಕೆ ನಿಷೇಧಿಸಿದ್ದಕ್ಕಾಗಿ ತನಗೆ 'ನೊಬೆಲ್ ಪ್ರಶಸ್ತಿ' ಸಿಗಬೇಕೆಂದು ಯಡಿಯೂರಪ್ಪ ಅವಲತ್ತುಕೊಂಡಿದ್ದಾರೆ. ನಾಚಿಕೆ, ಮಾನ, ಮರ್ಯಾದೆ ಎಲ್ಲವನ್ನು ಬಿಟ್ಟು ನೀತಿ, ನಿಯಮ, ಕಾನೂನು ಉಲ್ಲಂಘಿಸಿ ನೈತಿಕತೆ, ಸಾರ್ವಜನಿಕರ ಭಯ, ಗಾಳಿಗೆ ತೂರಿ ರಾಜ್ಯದಲ್ಲಿ ನಡೆದಿರುವ ಖನಿಜ ಸಂಪತ್ತಿನ ನಗ್ನ ದರೋಡೆ, ನೈಸರ್ಗಿಕ ಸಂಪತ್ತಿನ ನಿರ್ದಯ ಡಕಾಯಿತಿಯ ವಿರಾಟ ಸ್ವರೂಪ ಲೋಕಾಯುಕ್ತ ತನಿಖಾ ವರದಿಯಲ್ಲಿ ಬಯಲಾಗಿದೆ. ಬರಿ ಯಡಿಯೂರಪ್ಪ ಮಾತ್ರವಲ್ಲ ಇದೇ ಬಿಜೆಪಿ ಸರ್ಕಾರ ತೊಲಗಿ, ಈ ಬಗೆಗೆ ತುರ್ತು ಕಾನೂನು ಕ್ರಮ ವಹಿಸುವ ಆಗಬೇಕಿದೆ.

ಜಯ

ಲೂಟಿಂಗ್ ಗ್ಯಾಂಗ್ – ಯಡ್ಡಿ ಅಂಡ್ ರೆಡ್ಡಿ ಬ್ರದರ್ಸ್:

ಲಜ್ಜೆಗೆಟ್ಟ ಭ್ರಷ್ಟ ಯಡಿಯೂರಪ್ಪ ಮತ್ತು ಬಿಜೆಪಿ ಸರ್ಕಾರದ ಅಕ್ರಮಗಳಿಗೆ 25,000 ಪುಟಗಳಷ್ಟಿರುವ ಲೋಕಾಯುಕ್ತರ ತನಿಖಾ ವರದಿ ಮತ್ತು ಪೂರಕ ಮಾಹಿತಿಗಳ ಬೃಹತ್ ಸಂಪುಟ ಕೊನೆಯ ಉಳಿಯೇಟು ನೀಡಿದಂತಿದೆ. ಒಂದು ರಾಜ್ಯದ ಮುಖ್ಯಮಂತ್ರಿಯಷ್ಟೇ ಅಲ್ಲ, ಜೊತೆಗೆ ಗಣಿ ಖಾತೆಯನ್ನು ತಾನೇ ಹೊಂದಿದ್ದು 2006–2010 ರ ಅವಧಿಯ ಕೇವಲ ನಾಲ್ಕೇ ವರ್ಷಗಳಲ್ಲಿ ಅಕ್ರಮ ಗಣಿಗಾರಿಕೆಯಿಂದ ಸರ್ಕಾರದ ಖಜಾನೆಗೆ ಸುಮಾರು ರೂ. 16,085 ಕೋಟಿ ನಷ್ಟವುಂಟು ಮಾಡಿದ್ದಾರೆ. ಇದು ಯಡಿಯೂರಪ್ಪ ಜನತೆಗೆ ಬಗೆದಿರುವ ದ್ರೋಹ ಮಾತ್ರವಷ್ಟೇ ಅಲ್ಲ, ಇಂಥಹ ಭ್ರಷ್ಟ ಸರ್ಕಾರಗಳನ್ನು ನೀಡುತ್ತಿರುವ 'ವಿಭಿನ್ನ ಪಕ್ಷ' ಬಿಜೆಪಿ–ಸಂಘ ಪರಿವಾರಗಳ ನೈತಿಕ ಭ್ರಷ್ಟತೆಗೆ ಕನ್ನಡಿಯಂತಿದೆ. ಯಡಿಯೂರಪ್ಪ ನೇತೃತ್ವದ ಸರ್ಕಾರ, ಬಿಜೆಪಿಯ ದಕ್ಷಿಣ



ರಾಜ್ಯವೊಂದರಲ್ಲಿಯ ಸರ್ಕಾರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವಂತೆಯೇ ಕ್ಷಣ ಕ್ಷಣವೊಂದಕ್ಕೆ ಭ್ರಷ್ಟ ಕೂಪಗಳನ್ನು ಸೃಷ್ಟಿಸುವ ಸರ್ಕಾರವಾಗಿಯೂ ಸಾಬೀತು ಪಡಿಸಿದೆ.

ಇದೀಗ ತಾನೆ ಲೋಕಾಯುಕ್ತರು ಸಲ್ಲಿಸಿರುವ ಅಕ್ರಮ ಗಣಿಗಾರಿಕೆ ಕುರಿತ ಅಂತಿಮ ವರದಿಯಲ್ಲಿ ಯಡಿಯೂರಪ್ಪ ಸೇರಿದಂತೆ ಇತರೆ ಮಂತ್ರಿಗಳು, ಕಾಂಗ್ರೆಸ್ ನಾಯಕರು ಮತ್ತು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯ ಹೆಸರು ಸೇರಿದ್ದರೂ, ಭ್ರಷ್ಟತೆಯ ರಾಶಿಯಲ್ಲಿ ಯಡಿಯೂರಪ್ಪ ಮತ್ತು ರೆಡ್ಡಿ ಸಹೋದರರರನ್ನು ಮೀರಿಸುವವರೇ ಇಲ್ಲ. ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ನಡೆದಿರುವ ಅಕ್ರಮ ಗಣಿಗಾರಿಕೆಯ ಮಿತಿಮೀರಿದ ಭ್ರಷ್ಟತೆಯಲ್ಲಿ ಮುಖ್ಯಮಂತ್ರಿ ಮತ್ತು ಬಿಜೆಪಿಯ ಮಂತ್ರಿ ಮಹೋದಯರಲ್ಲದೆ 787 ಹಿರಿಯ ಅಧಿಕಾರಿಗಳೂ ಶಾಮೀಲಾಗಿರುವುದು ಆಡಳಿತ ವ್ಯವಸ್ಥೆ ಎಷ್ಟು ಭ್ರಷ್ಟರೋಗಕ್ಕೆ ಗುರಿಯಾಗಿದೆ ಎಂದು ಸಾರಿ ಹೇಳುತ್ತದೆ. ಜೊತೆಗೆ 100 ಕ್ಕೂ ಹೆಚ್ಚು ಕಂಪನಿಗಳು ಇದರಲ್ಲಿ ಭಾಗಿಯಾಗಿವೆ.

ಯಡಿಯೂರಪ್ಪ ಮತ್ತು ಮಕ್ಕಳ ಕರ್ಮಕಾಂಡಗಳು:

ಯಡಿಯೂರಪ್ಪ ಮತ್ತು ಮಕ್ಕಳ ಕರ್ಮಕಾಂಡಗಳ ಕುರಿತು ಲೋಕಾಯುಕ್ತರು ಸಾಕ್ಷ್ಯಾಧಾರಗಳ ಸಮೇತ ಸಲ್ಲಿಸಿರುವ ವರದಿಯಲ್ಲಿ ಪ್ರಮುಖವಾಗಿ ಕೆಳಕಂಡವು ಸಾಬೀತಾಗಿವೆ.

- ಜಿಂದಾಲ್ ಸಮೂಹಕ್ಕೆ ಸೇರಿರುವ ಸೌತ್‌ವೆಸ್ಟ್ ಎಂಬ ಗಣಿಗಾರಿಕೆ ಕಂಪನಿ ಯಡಿಯೂರಪ್ಪನ ಮಕ್ಕಳ ಮಾಲೀಕತ್ವದ ಪ್ರೇರಣಾ ಎಂಬ ಟ್ರಸ್ಟ್‌ವೊಂದಕ್ಕೆ ರೂ. 20 ಕೋಟಿ ದೇಣಿಗೆ ನೀಡಿದೆ.
- ಯಡಿಯೂರಪ್ಪ ಮತ್ತು ಮಕ್ಕಳ ಟ್ರಸ್ಟ್ ರಾಚೇನಹಳ್ಳಿಯಲ್ಲಿ ರೂ. 1 ಕೋಟಿ ನೀಡಿ 1 ಎಕರೆ ಜಮೀನು ಖರೀದಿಸಿದೆ. ಅದೇ ಜಮೀನನ್ನು ಕೆಲವೇ ದಿನಗಳ ನಂತರ ರೂ. 20 ಕೋಟಿಗೆ ಇದೇ ಕಂಪನಿಗೆ ಮಾರಾಟ ಮಾಡಿ ಲಾಭ ಗಳಿಸಿದೆ. ಆದರೆ ಸರ್ಕಾರದ ಭೂ ಮಾರ್ಗದರ್ಶಿ ದರ ರೂ. 1.20 ರಿಂದ 1.40 ಕೋಟಿ ಮಾತ್ರ ಇದೆ. ಈ ಕಂಪನಿಯ ಹಲವು ಅರ್ಜಿಗಳು ಸರ್ಕಾರದ ಮುಂದೆ ಬಾಕಿಯಿದ್ದವು. ಈ ಕಂಪನಿ ಲಾಭದಲ್ಲಿಲ್ಲದಿದ್ದರೂ ಇಷ್ಟೊಂದು ಹಣ ನೀಡಿರುವುದು ಸಂಶಯಾಸ್ಪದ ಸಂದಾಯ ಎಂದು ಹೇಳಲಾಗಿದೆ.
- ಚೆಕ್ ಮೂಲಕ ನೇರವಾಗಿ ಯಡಿಯೂರಪ್ಪ ಮತ್ತು ಮಕ್ಕಳು ಲಂಚ ಸ್ವೀಕರಿಸಿರುವುದಕ್ಕೆ ಸಾಕ್ಷ್ಯಗಳು ಸಿಕ್ಕಿವೆ.
- ಲೋಕಾಯುಕ್ತರ ಮಧ್ಯಂತರ ವರದಿಯಲ್ಲಿ 11 ಹಿರಿಯ ಐಎಎಸ್ ಅಧಿಕಾರಿಗಳ ವಿರುದ್ಧ ಅಕ್ರಮ ಗಣಿಗಾರಿಕೆ ಸಂಬಂಧ ಕ್ರಮಕೈಗೊಳ್ಳಲು ಶಿಫಾರಸ್ಸು ಮಾಡಿದ್ದರೂ ಇಲಾಖಾ ತನಿಖೆ ನಡೆಸಲು ಆದೇಶ ಹೊರಡಿಸಿದ್ದು ಬಿಟ್ಟರೆ, ಯಡಿಯೂರಪ್ಪ ಸರ್ಕಾರ ಬೇರೇನೂ ಕ್ರಮ ಕೈಗೊಂಡಿಲ್ಲ.

ಇದಲ್ಲದೆ ಲೋಕಾಯುಕ್ತರ ತನಿಖೆಗೆ ಅಡ್ಡಿ ತರುವ ಸಲುವಾಗಿ ಫೋನ್ ಕದ್ದಾಲಿಕೆ ನಡೆಸಲಾಗಿದೆ. ಮುಖ್ಯಮಂತ್ರಿಗಳಿಗೆ ಗೊತ್ತಿಲ್ಲದೆ ಸರ್ಕಾರದಲ್ಲಿ ಇನ್ನಾರಿಗೂ ಕದ್ದಾಲಿಕೆ ಮಾಡಲು ಸಾಧ್ಯವಿಲ್ಲ. ಜೊತೆಗೆ ಯಡಿಯೂರಪ್ಪನವರ ಮೇಲೆ ಕರುಣೆ ತೋರಬೇಕೆಂದು ಲೋಕಾಯುಕ್ತ ನ್ಯಾ. ಸಂತೋಷ ಹೆಗ್ಡೆ ಯವರಲ್ಲಿ ಬೇಡಿಕೊಳ್ಳಲು ಬಿಜೆಪಿ ಸಂಸದ ಧನಂಜಯ್ ಕುಮಾರ್ ಮತ್ತು ಸಚಿವ ವಿಎಸ್ ಆಚಾರ್ಯ ಹೋಗಿದ್ದದ್ದು ಎಷ್ಟೊಂದು ನಾಚಿಕೆಗೆಟ್ಟ ಸಂಸ್ಕೃತಿಯವರು ಎನ್ನುವಂತಾಗಿದೆ.

ರೆಡ್ಡಿ ಸಹೋದರರು ಮತ್ತು ಶ್ರೀರಾಮುಲು ಕಿಕ್‌ಬ್ಯಾಕ್ ವ್ಯವಹಾರ

ರೆಡ್ಡಿ ಸಹೋದರರಾದ ಸಚಿವ ಕರುಣಾಕರ ರೆಡ್ಡಿ, ಜನಾರ್ಧನ ರೆಡ್ಡಿ ಮತ್ತು ಶ್ರೀರಾಮುಲು ತಾವು ಕರ್ನಾಟಕದಲ್ಲಿ ಗಣಿ ವ್ಯವಹಾರ ನಡೆಸುತ್ತಿಲ್ಲ, ನಮ್ಮದೇನಿದ್ದರೂ ಆಂಧ್ರದ ಗಣಿಯಲ್ಲಿ ಮಾತ್ರ ವ್ಯವಹಾರ ನಡೆಯುತ್ತಿದೆ ಎಂದು ಡೋಂಗಿ ಬಿಡುತ್ತಿದ್ದರು. ಆದರೆ ಲೋಕಾಯುಕ್ತರ ವರದಿಯಲ್ಲಿ ಇವರು ಓಬಳಾಪುರಂ ಗಣಿ ಕಂಪನಿಯು ಕರ್ನಾಟಕದ ಗಡಿಯೊಳಗೆ ಅಕ್ರಮ ಗಣಿಗಾರಿಕೆ ನಡೆಸುತ್ತಿರುವುದನ್ನು ಮತ್ತು ಶೇ. 40 ರಿಂದ 50 ರವರೆಗೆ ಇತರೆ



ಕೃಪೆ: ಪ್ರಜಾವಾಣಿ

ಗಣಿ ಕಂಪನಿಗಳಿಂದ ಕಿಕ್‌ಬ್ಯಾಕ್ ವಸೂಲಿ ಮಾಡುತ್ತಿದ್ದರು ಎಂಬುದಕ್ಕೆ ಸಾಕ್ಷ್ಯಗಳನ್ನು ನೀಡಲಾಗಿದೆ. ಅಲ್ಲದೆ ಬಿಜೆಪಿಯ ಕೂಡ್ಲಿಗಿ ಕ್ಷೇತ್ರದ ಶಾಸಕ ನಾಗೇಂದ್ರ ಹೆಸರು ಕೂಡ ಇದರಲ್ಲಿದೆ.

ಬಳ್ಳಾರಿಯಲ್ಲಿಯೇ ಬಹುತೇಕ ಅಕ್ರಮ ನಡೆದಿದ್ದು, ಇಲ್ಲಿ ರೆಡ್ಡಿ ಸಹೋದರರು ಪ್ರತ್ಯೇಕ ಆಡಳಿತವನ್ನೇ ನಡೆಸುತ್ತಿರುವುದು ಕಂಡು ಬಂದಿರುವುದರಿಂದ ಲೋಕಾಯುಕ್ತರು ಈ ಅಧ್ಯಾಯವನ್ನು 'ರಿಪಬ್ಲಿಕ್ ಆಫ್ ಬಳ್ಳಾರಿ' ಎಂದೇ ಕರೆದಿದ್ದಾರೆ. ಅರಣ್ಯ ಸಂರಕ್ಷಣಾಧಿಕಾರಿಗಳಾದ ಡಾ. ಯು.ವಿ. ಸಿಂಗ್ ರವರು ಇಲ್ಲಿ ಹಲವು ಪ್ರದೇಶಗಳನ್ನು ಸುತ್ತಾಡಿದ್ದು, ಅವರ ಅಧ್ಯಯನಕ್ಕೆ ಶಾಸಕರೇ ತಡೆಯೊಡ್ಡಿ ಜಿಲ್ಲಾ ಉಸ್ತುವಾರಿ ಸಚಿವರ ಅನುಮತಿಯಿಲ್ಲದೆ ಹೀಗೆ ಸುತ್ತಾಡುವುದು ಸರಿಯಲ್ಲವೆಂದು ಬೆದರಿಸಲಾಗಿದೆ. ಜಿಲ್ಲೆಯ ಇಡೀ ಆಡಳಿತ ಚುಕ್ಕಾಣಿಯನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡು ಬೇಕಾದ

ಪುಟ 10ಕ್ಕೆ

ರಾಜೀನಾಮೆ ಕೇವಲ ಮುಖ್ಯಮಂತ್ರಿಗಳದ್ದಲ್ಲ.. ಇಡೀ ಸರ್ಕಾರದ್ದು..

ನಿತ್ಯಾನಂದಸ್ವಾಮಿ

ಅಕ್ರಮ ಗಣಿಗಾರಿಕೆ ಕುರಿತಾದ ಬಹುನಿರೀಕ್ಷಿತ ಅಂತಿಮ ತನಿಖಾ ವರದಿಯನ್ನು ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರು ರಾಜ್ಯ ಸರ್ಕಾರ ಮತ್ತು ರಾಜ್ಯಪಾಲರಿಗೆ ಸಲ್ಲಿಸಿದ್ದಾರೆ. 31 ಅಧ್ಯಾಯಗಳಾಗಿ ವಿಂಗಡಿಸಲಾದ ಈ ವರದಿಯ 25,228 ಪುಟಗಳಲ್ಲಿ ಲೋಕಾಯುಕ್ತರು ರಾಜ್ಯದಲ್ಲಿ 2006ರಿಂದ 2010ರವರೆಗಿನ ನಾಲ್ಕು ವರ್ಷಗಳ ಅವಧಿಯಲ್ಲಿ ರಾಜ್ಯದ ನೈಸರ್ಗಿಕ ಸಂಪತ್ತನ್ನು ಹೇಗೆ ವ್ಯವಸ್ಥಿತವಾಗಿ ಲೂಟಿ ಮಾಡಲಾಗಿದೆ, ಅದರಿಂದಾಗಿ ರಾಜ್ಯದ ಬೊಕ್ಕಸಕ್ಕೆ ಎಷ್ಟೊಂದು ನಷ್ಟ ಆಗಿದೆ ಮತ್ತು ಅದರಿಂದ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಅವರ ಕುಟುಂಬದವರಿಗೆ ಎಷ್ಟೊಂದು ಲಾಭ ಆಗಿದೆ ಎಂಬುದನ್ನು ಬಯಲಿಗೆಳೆದಿದ್ದಾರೆ.

ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆಯಿಂದ ಸರ್ಕಾರದ ಬೊಕ್ಕಸಕ್ಕೆ 16,085 ಕೋಟಿ ರೂ. ನಷ್ಟವಾಗಿದೆ ಎಂಬ ಲೋಕಾಯುಕ್ತರ ಸ್ಪಷ್ಟನೆ ರಾಜ್ಯದ ಜನತೆಯನ್ನು ಬೆಚ್ಚಿಬೀಳಿಸಿದೆ. ಇದು ಏನಿದ್ದರೂ ಹಿಮಗುಡ್ಡದ ತುದಿ ಮಾತ್ರ. ಲೋಕಾಯುಕ್ತ ಸಂತೋಷ್ ಹೆಗ್ಡೆ ಅವರೇ ಹೇಳಿರುವಂತೆ ಇನ್ನೂ ಎರಡು ತಿಂಗಳು ಅವಕಾಶ ಸಿಕ್ಕಿದ್ದರೆ ಇನ್ನಷ್ಟು ಹಗರಣಗಳು ಬಯಲಿಗೆ ಬರುತ್ತಿದ್ದವು. ಅದಿರಿನ ಮಾರುಕಟ್ಟೆ ಮೌಲ್ಯ ಲೆಕ್ಕ ಹಾಕಿದರೆ ಇದರ ನಾಲ್ಕು ಪಟ್ಟು ಅಂದರೆ ಒಟ್ಟು 64 ಸಾವಿರ ಕೋಟಿ ರೂ.ರಾಜ್ಯ ಬೊಕ್ಕಸಕ್ಕೆ ನಷ್ಟವಾಗಿದೆ ಎಂದು ಲೋಕಾಯುಕ್ತರೇ ಸ್ಪಷ್ಟಪಡಿಸಿದ್ದಾರೆ.



ಅಕ್ರಮ ಗಣಿ ಧೂಳಿನಿಂದ ಮುಖ್ಯಮಂತ್ರಿ ಯಡಿಯೂರಪ್ಪನವರ ಕುಟುಂಬದವರು ಸೌತ್‌ವೆಸ್ಟ್ ಮೈನಿಂಗ್ ಕಂಪನಿಯಿಂದ 30 ಕೋಟಿ ರೂ. ಲಂಚ ಪಡೆದಿದ್ದಾರೆ. ಇತರ ಗಣಿ ಕಂಪನಿಗಳಿಂದಲೂ ಯಡಿಯೂರಪ್ಪ ಕುಟುಂಬದ ಟ್ರಸ್ಟ್ ಹಾಗೂ ಕಂಪನಿಗೆ ದೇಣಿಗೆ ರವಾನೆಯಾಗಿದೆ. ಸಚಿವ ಜನಾರ್ಧನರೆಡ್ಡಿ ಗಣಿ ಕಂಪನಿಗಳಿಂದ ಶೇಕಡ 40 ರಷ್ಟು ಅದಿರನ್ನು ಹಪ್ತಾ ರೂಪದಲ್ಲಿ ವಸೂಲಿ ಮಾಡಿದ್ದಾರೆ. ಈ ಹಪ್ತಾ ಅದಿರನ್ನು ಆಂದ್ರಪ್ರದೇಶದಲ್ಲಿರುವ ಓಬಳಾಪುರಂ ಗಣಿ ಕಂಪನಿಯ ಗಣಿಗಾರಿಕೆ ಪ್ರದೇಶದಲ್ಲಿ ಸಂಗ್ರಹಿಸಿಟ್ಟು ಸಾವಿರಾರು ಕೋಟಿ ರೂ.ವಂಚಿಸಿದ್ದಾರೆ. ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ಪತ್ನಿಯ ಹೆಸರಿನಲ್ಲಿ ಗಣಿ ಕಂಪನಿಯೊಂದನ್ನು ಖರೀದಿಸಿ ಅದರ ಮಾಲಿಕ 25 ಹೆಕ್ಟೇರ್ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿದ್ದಾರೆ. ಗಣಿ ಕಂಪನಿಗಳಿಂದ ಹಫ್ತಾವಸೂಲಿ ಮಾಡುವುದರಲ್ಲಿ ಸಚಿವ ಶ್ರೀರಾಮುಲು ಪ್ರಮುಖ ಪಾತ್ರ ವಹಿಸಿದ್ದಾರೆ. ಈ ಇಬ್ಬರು ಸಚಿವರೊಂದಿಗೆ ಕಂದಾಯ ಸಚಿವ ಕರುಣಾಕರರೆಡ್ಡಿ ಸೇರಿಕೊಂಡು ಬಳ್ಳಾರಿ ಜಿಲ್ಲೆಯ ಕಂದಾಯ. ಪೋಲೀಸ್ ಅರಣ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಶಾಮೀಲಾಗಿ, ಜಿಲ್ಲಾಡಳಿತವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಸರ್ಕಾರಿ ಭೂಮಿ ಒತ್ತುವರಿ ಹಾಗೂ ಅದಿರು ಲೂಟಿಯನ್ನು ನಿರಾತಂಕವಾಗಿ ನಡೆಸುತ್ತಾ ಬಂದಿದ್ದಾರೆ. ರಾಜ್ಯ ಸಭಾ ಸದಸ್ಯ ಅನಿಲ್‌ಲಾಡ್ ಮತ್ತು ಕುಟುಂಬ, ಕೂಡ್ಲಿಗಿ ಶಾಸಕ ನಾಗೇಂದ್ರ ಕೂಡ ಅಕ್ರಮ ಗಣಿಗಾರಿಕೆಯಲ್ಲಿ ಶಾಮೀಲಾಗಿರುವುದು ವರದಿಯಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಶಾಸಕ ಸುರೇಶ್ ಬಾಬು ಸಹ ಅಕ್ರಮ ಗಣಿಗಳಿಂದ ಅದಿರು ರೂಪದಲ್ಲಿ ಹಫ್ತಾ ವಸೂಲಿ ಮಾಡುತ್ತಿರುವುದು ಹಾಗೂ ನಕಲಿ ಪರ್ಮಿಟ್‌ಗಳನ್ನು ವಿತರಿಸುತ್ತಿದ್ದುದು ಕಂಡು ಬಂದಿದೆ. ವಸತಿ ಸಚಿವ ವಿ.ಸೋಮಣ್ಣ ಅವರ ಪುತ್ರ ನಡೆಸುತ್ತಿರುವ 'ಮಾತಾ ಮಿನರಲ್ಸ್ ಕಂಪನಿ'ಯು ತುಮಕೂರಿನ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಅಕ್ರಮ ಗಣಿಗಾರಿಕೆ ನಡೆಸುತ್ತಿರುವುದನ್ನು ಲೋಕಾಯುಕ್ತರು ಪತ್ತೆ ಹಚ್ಚಿದ್ದಾರೆ. ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಕೂಡ ತಮ್ಮ ಅಧಿಕಾರಾವಧಿಯಲ್ಲಿ ಎರಡು ಗಣಿ ಕಂಪನಿಗಳಿಗೆ ಕಾನೂನುಬಾಹಿರವಾಗಿ ಲೈಸೆನ್ಸ್ ನೀಡಿದ್ದಾರೆ ಎಂದು ಸಹ ವರದಿಯಲ್ಲಿ ಪ್ರಸ್ತಾಪಿಸಲಾಗಿದೆ.

ದೇಶದ ಯಾವುದೇ ರಾಜ್ಯದಲ್ಲಿ ಇಷ್ಟೊಂದು ಬೃಹತ್ ಪ್ರಮಾಣದ ಗಣಿ ಲೂಟಿ ನಡೆದಿಲ್ಲ. ಈ ಗಣಿ ಲೂಟಿಯಲ್ಲಿ 400ಕ್ಕೂ ಹೆಚ್ಚು ಕಂಪನಿಗಳು ಭಾಗಿಯಾಗಿವೆ. 100ಕ್ಕೂ ಹೆಚ್ಚು ರಾಜಕಾರಣಿಗಳು ಹಾಗೂ 787 ಮಂದಿ ಸರ್ಕಾರಿ ಅಧಿಕಾರಿಗಳು ಈ ಲೂಟಿಯಲ್ಲಿ ಪಾಲ್ಗೊಂಡಿರುವುದನ್ನು ವರದಿ ಬೆಳಕಿಗೆ ತಂದಿದೆ. ವಿಶ್ವ ದಾಖಲೆಯ ಈ ಲೂಟಿಯಲ್ಲಿ ಬಿಜೆಪಿ ಸರ್ಕಾರ ಇಡಿಯಾಗಿ ಭಾಗಿಯಾಗಿದೆ. ಇದೇ ಲೂಟಿಯ ಹಣವನ್ನು ಈ ಅವಧಿಯಲ್ಲಿ ನಡೆದ ಚುನಾವಣೆಗಳನ್ನು ಗೆಲ್ಲಲು ಬಳಸಲಾಗಿದೆ. ಇದೇ ಹಣದಿಂದ 'ಆಪರೇಷನ್. ಕಮಲ' ನಡೆಸಲಾಗಿದೆ. ಇದೇ ಲೂಟಿಯ ಹಣಕ್ಕಾಗಿ ವಿರೋಧಪಕ್ಷಗಳ ಶಾಸಕರೂ ಸಹ ಜೊಲ್ಲು ಸುರಿಸುತ್ತಾ ಅಲೆದಾಡಿದ್ದಾರೆ. ಇದೇ ಗಣಿ ಲೂಟಿಯ ಹಣ ಬಿಜೆಪಿ ರಾಜ್ಯ ಸರ್ಕಾರವನ್ನು ನಿಯಂತ್ರಿಸುತ್ತಾ ಬಂದಿದೆ ಮಾತ್ರವಲ್ಲ ಅದರ ಹೈಕಮಾಂಡ್ ಸಹ ಇದೇ ಲೂಟಿಯ ಅಮಲಿನಲ್ಲಿ ಮೈ ಮರೆತು ಬಿಟ್ಟಿತ್ತು.

ನಾಯಿ ಹಸಿದಿತ್ತು-ಅನ್ನ ಹಳಸಿತ್ತು:

'ನಮ್ಮ ನಾಯಕ ಯಡಿಯೂರಪ್ಪ ಮೂರು ದಶಕಗಳಿಗೂ ಹೆಚ್ಚು ಕಾಲಜನಪರ ಹೋರಾಟ ನಡೆಸಿ, ರಾಜ್ಯ ತುಂಬಾ ಸುತ್ತಾಡಿ ಪಕ್ಷವನ್ನು ಕಟ್ಟಿದವರು' ಎಂದು ಶಾಸಕ ಸಿ.ಟಿ.ರವಿ ಬಹುಪರಾಕ್ ಹಾಡಿದ್ದಾರೆ. ಇಂತಹ ಒಬ್ಬ ನಾಯಕ ಅಧಿಕಾರ ಸಿಕ್ಕ ಕ್ಷಣದಿಂದ ಸ್ವಂತ ಆಸ್ತಿ ಮಾಡಿಕೊಳ್ಳಲು ತೋರಿದ ಆತುರ ಅವರ ರಾಜಕೀಯದ ನಿಜವಾದ ಗುರಿ ಏನಿತ್ತು ಎಂಬುದನ್ನು ರಾಜ್ಯದ ಜನತೆಯ ಕಣ್ಣೆದುರಿಗೆ ತಂದಿಟ್ಟಿದೆ. ಹಸಿದ ನಾಯಿಗೆ ಆಹಾರವೇನಾದರೂ ಸಿಕ್ಕರೆ ಅದು ಹೇಗೆ ಅದನ್ನು ಗಪಗಪ ತಿನ್ನುತ್ತಾ ಪಕ್ಕಕ್ಕೆ ಬರುವ ಬೇರೆ ನಾಯಿಗಳನ್ನು ಹೇಗೆ ಬೆದರಿಸುತ್ತದೋ ಹಾಗೆ ಕಾಣುತ್ತಿದೆ ಯಡಿಯೂರಪ್ಪನವರ ವರ್ತನೆ.

ಜಿಂದಾಲ್ ಸಮೂಹದ 'ಸೌತ್‌ವೆಸ್ಟ್ ಮೈನಿಂಗ್ ಕಂಪನಿ' ರಾಜ್ಯದಲ್ಲಿ ಗಣಿಗಾರಿಕೆ ನಡೆಸಲು ಅನುಮತಿ ಕೋರಿ ಅರ್ಜಿ ಸಲ್ಲಿಸಿತ್ತು. ಗಣಿಗಾರಿಕೆಗೆ ಅನುಮತಿ ಕೊಡುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಯಡಿಯೂರಪ್ಪ ಪುತ್ರ, ಶಿವಮೊಗ್ಗದ ಸಂಸದ ಬಿ.ವೈ.ರಾಘವೇಂದ್ರ ನಿರ್ದೇಶಕರಾಗಿರುವ ಶಿವಮೊಗ್ಗದ ಪ್ರೇರಣಾ ಟ್ರಸ್ಟ್‌ಗೆ ಸೌತ್‌ವೆಸ್ಟ್ ಮೈನಿಂಗ್ ಕಂಪನಿಯು 10 ಕೋಟಿ ರೂ.ದೇಣಿಗೆ ಹೆಸರಿನಲ್ಲಿ ಲಂಚ ನೀಡಿದೆ. ಬೆಂಗಳೂರಿನ ಕೆ.ಆರ್.ಪುರಂನ ರಾಚೇನಹಳ್ಳಿಯಲ್ಲಿ ಒಂದು ಎಕರೆ ಭೂಮಿಯನ್ನು ಯಡಿಯೂರಪ್ಪನವರ ಪುತ್ರರಾದ ಬಿ.ವೈ.ರಾಘವೇಂದ್ರ, ಬಿ.ವೈ.ವಿಜಯೇಂದ್ರ ಮತ್ತು ಅಳಿಯ ಸೋಹನ್‌ಕುಮಾರ್ ಮಾಲೀಕತ್ವದ 'ಧವಳಗಿರಿ ಪ್ರಾಪರ್ಟಿಸ್' ಎಂಬ ಸಂಸ್ಥೆ ಅದೇ ಸೌತ್‌ವೆಸ್ಟ್ ಮೈನಿಂಗ್ ಕಂಪನಿಗೆ 20 ಕೋಟಿ ರೂ.ಗೆ ಮಾರುತ್ತದೆ. ಆ ಒಂದು ಎಕರೆ ಭೂಮಿಯ ಮಾರುಕಟ್ಟೆ ಬೆಲೆ 1 ಕೋಟಿ ರೂ.ನಿಂದ 1.5 ಕೋಟಿ ರೂ. ಅಷ್ಟೆ ಕಡಿಮೆ ಬೆಲೆಗೆ ಖರೀದಿಸಿದ ಭೂಮಿಯನ್ನು ಯಡಿಯೂರಪ್ಪನವರ ಅಳಿಯ ಮತ್ತು ಮಕ್ಕಳು ಸೇರಿಕೊಂಡು 20 ಕೋಟಿ ರೂ.ಗೆ ಮಾರುತ್ತಾರೆ. ಸೌತ್‌ವೆಸ್ಟ್ ಕಂಪನಿಯು ಸಹ ತಾನೇ ಪೂರ್ತಿ ಹಣವನ್ನು ನೀಡದೆ ಗಣಿಗಾರಿಕೆಯಲ್ಲಿ ಆಸಕ್ತಿ ಹೊಂದಿದ ಬೇರೆ ನಾಲ್ಕು ಕಂಪನಿಗಳಿಂದ ವಸೂಲಿ ಮಾಡಿ ಯಡಿಯೂರಪ್ಪನವರ ಮಕ್ಕಳಿಗೆ ನೀಡುತ್ತದೆ. ಇದು ತೋರಿಕೆಗೆ ಒಂದು ಎಕರೆ ಭೂಮಿಯ ಮಾರಾಟ ಆದರೆ ಒಳಗೊಳಗೆ ಗಣಿಗಾರಿಕೆ ಕಂಪನಿಗಳಿಂದ ಲಂಚ ಸ್ವೀಕರಿಸುವ ರಹಸ್ಯ ವಿಧಾನ!

ಹೀಗೆ ಸಂಪಾದಿಸಿದ ಹಣದ ಮದದಿಂದಾಗಿ ಯಡಿಯೂರಪ್ಪನವರಿಗೆ ನೆಲವೇ ಕಾಣದಂತಾಗಿದೆ. ಅವರ ಭಂಡತನ, ದರ್ಪ ಮತ್ತು ಅಹಂಕಾರದ ಪ್ರವೃತ್ತಿಗೆ ಈ ಹಣವೇ ಕಾರಣ. ಹೋಮ ಹವನಗಳಿಗೆ ಇವರು ಮಾಡುತ್ತಿರುವ ದುಂದುವೆಚ್ಚ-ಮನಸ್ಸಿಗೆ ಬಂದಾಕ್ಷಣ ದೂರ ದೂರದ ದೇವಸ್ಥಾನಗಳಿಗೆ ಹಾರಿಹೋಗಲು ಬಳಸುವ ಹಣ ಅವರ ಅಕ್ರಮ ಸಂಪಾದನೆಯೇ ಆಗಿದೆ. ಇತ್ತೀಚೆಗೆ ಯಡಿಯೂರಪ್ಪನವರು ತಮ್ಮ ಮಕ್ಕಳೊಂದಿಗೆ ಮಾರಿಷಸ್‌ಗೆ ಹಾರಿದ್ದು ತಮ್ಮ ಬಳಿ ಇರುವ

ಪುಟ 13ಕ್ಕೆ



ಪುಟ 10 ಕ್ಕೆ

'ಗಣಿ ಲೂಟಿ: ಲೋಕಾಯುಕ್ತ ತನಿಖಾ ವರದಿ

ಪುಟ 8 ರಿಂದ

ಅಧಿಕಾರಿಗಳನ್ನು ಆಯಕಟ್ಟಿನ ಜಾಗದಲ್ಲಿರಿಸಿಕೊಂಡು ನಿಸರ್ಗ ಸಂಪತ್ತನ್ನು ಲೂಟಿ ಮಾಡಲಾಗಿದೆ. ಬಳ್ಳಾರಿಯಲ್ಲಿ ನಡೆದಿರುವಷ್ಟು ಅಕ್ರಮ ದೇಶದ ಇನ್ನಾವುದೇ ಭಾಗದಲ್ಲೂ ನಡೆದಿರಲು ಸಾಧ್ಯವಿಲ್ಲ ಎಂದು ವರದಿಯಲ್ಲಿ ಹೇಳಲಾಗಿದೆ.

ವಿ. ಸೋಮಣ್ಣ ಮತ್ತು ಮಗ ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿದ್ದು ಅದಿರು ಸಾಗಾಣಿಕೆಯಲ್ಲಿ ಅವರ ಹೆಸರು ವರದಿಯಲ್ಲಿ ಪ್ರಸ್ತಾಪವಾಗಿದೆ.

ಅಕ್ರಮ ಗಣಿಗಾರಿಕೆಯಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರು

ಅಕ್ರಮ ಗಣಿಗಾರಿಕೆ ಏನಿದ್ದರೂ ಯಡಿಯೂರಪ್ಪ, ರೆಡ್ಡಿ ಸಹೋದರರು ಮತ್ತು ಬಿಜೆಪಿಯ ಕೂಸು ಎಂದೇ ಬೊಬ್ಬಿಡುತ್ತಿರುವ ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರ ಕೆಲವು ಹೆಸರುಗಳೂ ಲೋಕಾಯುಕ್ತರ ವರದಿಯಲ್ಲಿವೆ. ಕಾಂಗ್ರೆಸ್ ಪಕ್ಷದ ರಾಜ್ಯ ಸಭಾ ಎಂ.ಪಿ ಅನಿಲ್ ಲಾಡ್ ಅಕ್ರಮವಾಗಿ ತನ್ನ ಪತ್ನಿಯ ಹೆಸರಿನಲ್ಲಿ ಗಣಿಗಾರಿಕೆ ಕಂಪನಿಯೊಂದರ ಮಾಲೀಕತ್ವವನ್ನು ಹೊಂದಿದ್ದು ವ್ಯವಹಾರ ನಡೆಸುತ್ತಿದ್ದಾರೆ ಎಂದು ವರದಿಯಲ್ಲಿ ತಿಳಿಸಿದೆ.

2003 ರಲ್ಲಿ ಅರಣ್ಯ ಪ್ರದೇಶವಾದ 11,620 ಚದರ ಕಿ.ಮೀ ಜಾಗವನ್ನು ಅರಣ್ಯೇತರ ಭೂಮಿಯನ್ನಾಗಿ ಪರಿವರ್ತಿಸುವ ಮೂಲಕ ಗಣಿಗಾರಿಕೆಗೆ ಕಾನೂನು ಬಾಹಿರವಾಗಿ ಅವಕಾಶ ಮಾಡಿಕೊಟ್ಟಿರುವ ಅಂದಿನ ಕಾಂಗ್ರೆಸ್‌ನ ಗಣಿ ಮತ್ತು ಭೂವಿಜ್ಞಾನ ಸಚಿವ ವಿ. ಮುನಿಯಪ್ಪ ಮತ್ತು ಅಧಿಕಾರಿಗಳು ಹೊಣೆ ಎಂದು ವರದಿ ಹೇಳಿದೆ. ಅರಣ್ಯ ಭೂಮಿಯಲ್ಲ ಅದು ಬಯಲು ಸೀಮೆ ಎಂದು ಸಚಿವ ಸಂಪುಟಕ್ಕೆ ಇವರು ತಪ್ಪು ಮಾಹಿತಿ ನೀಡಿ ಭೂಮಿ ಪರಿವರ್ತನೆ ಮಾಡಿರುವುದಕ್ಕೆ ಸಾಕ್ಷ್ಯಗಳನ್ನು ನೀಡಲಾಗಿದೆ.

ಮಾಜಿ ಮುಖ್ಯಮಂತ್ರಿ ಹೆಚ್.ಡಿ ಕುಮಾರಸ್ವಾಮಿ ತಮ್ಮ ಅಧಿಕಾರವಧಿಯಲ್ಲಿ ಜಂತಕಲ್ ಮತ್ತು ಸಾಯಿ ವೆಂಕಟೇಶ್ವರ ಎಂಬ 2 ಕಂಪನಿಗಳಿಗೆ ಗಣಿಗಾರಿಕೆ ನಡೆಸಲು ಪರವಾನಗಿ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಕಾನೂನು ಉಲ್ಲಂಘಿಸಿ ಶಿಫಾರಸ್ಸು ಮಾಡಿದ್ದು ಅವರ ಹೆಸರು ಅಕ್ರಮ ಗಣಿಗಾರಿಕೆಯಲ್ಲಿ ತಳುಕು ಹಾಕಿಕೊಂಡಿದೆ.

ಮುಖ್ಯಮಂತ್ರಿ ವಿರುದ್ಧ 'ಭ್ರಷ್ಟಾಚಾರ ನಿಯಂತ್ರಣ ಕಾಯಿದೆ'ಯಡಿ ಕ್ರಮ

ಕರ್ನಾಟಕ ಲೋಕಾಯುಕ್ತ ಕಾಯಿದೆ ಪ್ರಕಾರ ಲೋಕಾಯುಕ್ತರು ಯಾವುದೇ ಒಂದು ಪ್ರಕರಣದ ತನಿಖೆ ನಡೆಸಿ ವರದಿಯನ್ನು ಆರೋಪಿಗಳಿಗೆ ಸಂಬಂಧಿಸಿದ ಮೇಲ್-ಪ್ರಾಧಿಕಾರಕ್ಕೆ ಸಲ್ಲಿಸಬೇಕು. ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಒಳಗೊಂಡಂತೆ ನಾಲ್ವರು ಸಚಿವರೇ ಆರೋಪಿಗಳಾಗಿರುವುದರಿಂದ ಅವರಿಗೆ ಮೇಲಿನ ಪ್ರಾಧಿಕಾರವೆಂದರೆ ರಾಜ್ಯಪಾಲರೇ. ಹಾಗಾಗಿ ಲೋಕಾಯುಕ್ತರು ಸರ್ಕಾರಕ್ಕೆ ವರದಿ ಸಲ್ಲಿಸಿದ ನಂತರ ಅದರ ಪ್ರತಿಯೊಂದನ್ನು ರಾಜ್ಯಪಾಲರಿಗೂ ಸಲ್ಲಿಸಿದ್ದು, ಮುಖ್ಯಮಂತ್ರಿಯವರ ವಿರುದ್ಧ 'ಭ್ರಷ್ಟಾಚಾರ ನಿಯಂತ್ರಣ ಕಾಯಿದೆ'ಯಡಿ ಕ್ರಮ ಜರುಗಿಸುವಂತೆ ಮತ್ತು ಇತರೆ ಸಚಿವರ ವಿರುದ್ಧ ಗಣಿ ಮತ್ತು ಖನಿಜ ಕಾಯ್ದೆ, ಅರಣ್ಯ ಸಂರಕ್ಷಣಾ ಕಾಯಿದೆ, ಮತ್ತು ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ಕ್ರಮ ಕೈಗೊಳ್ಳುವಂತೆ ಲೋಕಾಯುಕ್ತರು ಶಿಫಾರಸು ಮಾಡಿದ್ದಾರೆ. ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟು ಮಾಡಿರುವ ಆರೋಪಿಗಳಿಂದ ನಷ್ಟದ ನಾಲ್ಕು ಪಟ್ಟು ದಂಡ ವಸೂಲು ಮಾಡಬೇಕೆಂದು ಶಿಫಾರಸು ಮಾಡಲಾಗಿದೆ. ರಾಜ್ಯಪಾಲರ ಮುಂದಿನ ನಡೆ ಏನೆಂದು ನೋಡಬೇಕು. ಉಳಿದಂತೆ ಶಾಸಕರು ಮತ್ತು ಅಧಿಕಾರಿಗಳ ಮೇಲೆ ಸರ್ಕಾರವೇ ಕ್ರಮ ಜರುಗಿಸಬೇಕು.

ಅಕ್ರಮ ಗಣಿಗಾರಿಕೆಯು ಕಳೆದ 20 ವರ್ಷಗಳಿಗೂ ಮೀರಿ ನಿರಾತಂಕವಾಗಿ ಎಲ್ಲ ಸರ್ಕಾರಗಳ ಅಧಿಪತ್ಯದಲ್ಲಿ ಸಾಗಿದ್ದು, ಬಿಜೆಪಿ ಸರ್ಕಾರದ ಅವಧಿಯಲ್ಲಿ ನಾಗಾಲೋಟದ ಜಿಗಿತ ಕಂಡಿದೆ. ಇಂಥಹ ಭ್ರಷ್ಟಾತಿಭ್ರಷ್ಟ ಬಿಜೆಪಿ ಸರ್ಕಾರದ ಕಳ್ಳರ ಕೂಟವನ್ನು ಬಲಿಷ್ಟ ಚಳುವಳಿಯ ಮೂಲಕ ಜನತೆ ಕಿತ್ತೊಗೆಯಬೇಕಿದೆ.

ಕಳವು ಪ್ರಕರಣವನ್ನೇ ಕಳವು ಮಾಡುತ್ತಿರುವ ಯಡಿಯೂರಪ್ಪ ಸರ್ಕಾರ

ಲೋಕಾಯುಕ್ತರು ತನಿಖೆ ನಡೆಸುತ್ತಿರುವ ಬೇಲೆಕೇರಿ ಅದಿರು ಕಳವು ಪ್ರಕರಣವನ್ನೇ ಕಳವು ಮಾಡಲು ಯಡಿಯೂರಪ್ಪ ಸರ್ಕಾರ ಯತ್ನಿಸುತ್ತಿದೆ. ಸುಮಾರು ರೂ. 2,500 ಕೋಟಿ ಮೌಲ್ಯದ 8 ಲಕ್ಷ ಟನ್ ಅದಿರು ರಾಶಿಯನ್ನು ಅಕ್ರಮವಾಗಿ ಬೇಲೆಕೇರಿ ಬಂದರಿನಲ್ಲಿ ಸಂಗ್ರಹಿಸಿಟ್ಟಿದ್ದನ್ನು ಪತ್ತೆ ಹಚ್ಚಿದ್ದ ಲೋಕಾಯುಕ್ತರು ಮತ್ತು ಅರಣ್ಯಾಧಿಕಾರಿಗಳು ಅದರ ಸೀಜ್ ಮಾಡಿದ್ದರು. ಆದರೆ ಸೀಜ್ ಮಾಡಿದ ಅದಿರನ್ನು ಕೆಲವೇ ದಿನಗಳಲ್ಲಿ ಅಕ್ರಮವಾಗಿ ಮಾರಾಟ ಮಾಡಲಾಗಿತ್ತು. ಅದರ ಮೌಲ್ಯವನ್ನು ಅಂದಾಜು ಮಾಡಿ ತನಿಖಾ ವರದಿ ಸಿದ್ಧಪಡಿಸುತ್ತಿರುವ ಲೋಕಾಯುಕ್ತ ಪೊಲೀಸರಿಗೆ ಪರ್ಯಾಯವಾಗಿ ಯಡಿಯೂರಪ್ಪ ಸರ್ಕಾರ ಅದಿರು ಕಳವು ಪ್ರಕರಣವನ್ನು ಸಿಓಡಿ ಗೆ ವಹಿಸಿ ತನಿಖೆಯನ್ನು ದಿಕ್ಕುತಪ್ಪಿಸಲು ಯತ್ನಿಸುತ್ತಿದ್ದಾರೆ. ಒಂದೆಡೆ ಭೂಗರ್ಭ ತಜ್ಞರನ್ನು ಕರೆಸಿ ಮೌಲ್ಯ ನಿಗಧಿಪಡಿಸುವ ಕಾರ್ಯದಲ್ಲಿ ಲೋಕಾಯುಕ್ತರು ತೊಡಗಿದ್ದರೆ, ಮತ್ತೊಂದೆಡೆ ತಾನು ಮಾತ್ರವೇ ಈ ಕುರಿತು ತನಿಖೆ ನಡೆಸುವ ಅಧಿಕಾರ ಹೊಂದಿರುವುದಾಗಿ ಸಿಓಡಿ ಅಡ್ಡ ಬಂದಿದೆ.

ಅಳಿಯನಿಂದ ಹೈಕೋರ್ಟ್‌ನಲ್ಲಿ ವಿಚಾರಣೆಗೆ ತಡೆ ತಂದ ಯಡ್ಡಿ

ಯಡಿಯೂರಪ್ಪ, ಮಕ್ಕಳು ವಿಜಯೇಂಧ್ರ ಮತ್ತು ರಾಘವೇಂದ್ರ, ಅಳಿಯ ಸೊಹನ್ ಕುಮಾರ್, ಮಾಜಿ ಮಂತ್ರಿ ಕೃಷ್ಣಯ್ಯ ಶೆಟ್ಟಿ ಮತ್ತು ಯಡಿಯೂರಪ್ಪನ ಕುಟುಂಬದ ಮಾಲೀಕತ್ವವುಳ್ಳ ಧವಳಗಿರಿ ಪ್ರಾಪರ್ಟೀಸ್ ಡೆವಲಪರ್ಸ್ ಕಂಪನಿಯ ನಿರ್ದೇಶಕರುಗಳ ವಿರುದ್ಧ ಸಿರಾಜಿದ್ದಿನ್.ಬಾಷಾ ಮತ್ತು ಇನ್ನೊಬ್ಬ ವಕೀಲರು 15 ಆರೋಪ ಪಟ್ಟಿ ಸಿದ್ಧ ಪಡಿಸಿ (ಭೂಹಗರಣ, ಭೂಮಿ ಡಿನೋಟಿಫಿಕೇಷನ್, ಇಷ್ಟಬಂದವರಿಗೆ ಭೂಮಿ ಹಂಚಿಕೆ ಇತ್ಯಾದಿಗಳ ವಿರುದ್ಧ) ರಾಜ್ಯಪಾಲರ ಅನುಮತಿ ಪಡೆದು ಲೋಕಾಯುಕ್ತರ ವಿಶೇಷ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ಯಡ್ಡಿ ಅಳಿಯ ಸೊಹನ್ ಕುಮಾರ್ ಲೋಕಾಯುಕ್ತ ನ್ಯಾಯಾಲಯದಲ್ಲಿ ಈ ಕುರಿತು ತನಿಖೆ ನಡೆಸದಂತೆ ಹೈಕೋರ್ಟ್‌ನಲ್ಲಿ ತಡೆಯಾಜ್ಞೆ ತಂದಿದ್ದರು. ಆದರೀಗ ತಾನು ನೀಡಿದ್ದ ತಡೆಯಾಜ್ಞೆಯನ್ನು ಪರಿಶೀಲಿಸಿದ ಹೈಕೋರ್ಟ್, ದಾವೆ ಮುಂದುವರೆಸಲು ಲೋಕಾಯುಕ್ತಕ್ಕೆ ತಡೆಯಾಜ್ಞೆ ತೆರವುಗೊಳಿಸಿ ತನಿಖೆ ನಡೆಸಲು ಅನುಮತಿ ನೀಡಿರುವುದು ಯಡ್ಡಿ ಮತ್ತು ಮಕ್ಕಳಿಗೆ ನಡುಕ ಹುಟ್ಟಿಸಿದೆ.

ನೆರೆ ಹೊರೆ

ಕೇರಳ: ಮುಷ್ಕರ ನಿರತ ವಿದ್ಯಾರ್ಥಿಗಳ ಮೇಲೆ ಲಾಠಿ ಚಾರ್ಜ್

ಉಮ್ಮನ್ ಚಾಂಡಿ ನೇತೃತ್ವದ ಐಕ್ಯರಂಗ ಸರ್ಕಾರ ಅಧಿಕಾರಕ್ಕೆ ಬಂದದ್ದೇ ತಡ ರಾಜ್ಯದಲ್ಲಿ ಶಿಕ್ಷಣದ ಖಾಸಗೀಕರಣ ಪ್ರಕ್ರಿಯೆ ಆರಂಭವಾಗಿದೆ. ಇದನ್ನು ವಿರೋಧಿಸಿ ವಿದ್ಯಾರ್ಥಿಗಳು ಬೃಹತ್ ಸಂಖ್ಯೆಯಲ್ಲಿ ಎಸ್‌ಎಫ್‌ಐ ನೇತೃತ್ವದಲ್ಲಿ ಹೋರಾಟದ ಕಣಕ್ಕೆ ಧುಮುಕಿದ್ದಾರೆ. ವಿವಿಧ ಜಿಲ್ಲೆಗಳಲ್ಲಿ ಹೋರಾಟ ತೀವ್ರ ಸ್ವರೂಪ ಪಡೆದುಕೊಂಡಿದ್ದು, ಚಳವಳಿಯನ್ನು ಹತ್ತಿಕ್ಕಲು ರಾಜ್ಯ ಸರ್ಕಾರ ಪೊಲೀಸ್ ಬಲವನ್ನು ಪ್ರಯೋಗಿಸಿದೆ. ಅಶ್ರುವಾಯು ಹಾಗೂ ಲಾಠಿ ಪ್ರಯೋಗದ ಮೂಲಕ ವಿದ್ಯಾರ್ಥಿ ಆಂದೋಲನವನ್ನು ದಮನಿಸಲು ಪ್ರಯತ್ನಿಸಿದೆ.

ಜೂನ್ 24ರಂದು ಕೊಚ್ಚಿ ಮತ್ತು ಕಣ್ಣೂರಿನಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆ ಮೇಲೆ ಪೊಲೀಸ್ ದೌರ್ಜನ್ಯ ನಡೆದಿದೆ. ಸಾರ್ವಜನಿಕ ಶಿಕ್ಷಣವನ್ನು ರಕ್ಷಿಸಲು ವಿದ್ಯಾರ್ಥಿಗಳು ಇಲ್ಲಿ ಬೃಹತ್ ಮೆರವಣಿಗೆ ನಡೆಸಿದ್ದರು. ವಿದ್ಯಾರ್ಥಿ ಸಮೂಹವನ್ನು ತಡೆಯಲು ಪೊಲೀಸರು ಅಶ್ರುವಾಯು ಹಾಗೂ ಜಲ ಫಿರಂಗಿಗಳನ್ನು ಬಳಸಿದರು. ಈ ಘಟನೆಯಲ್ಲಿ ನೂರಕ್ಕೂ ಹೆಚ್ಚು ಮಂದಿ ಗಾಯಗೊಂಡರು. 25 ಮಂದಿಯನ್ನು ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಯಿತು. ಎಸ್‌ಎಫ್‌ಐನ ರಾಜ್ಯ ಪದಾಧಿಕಾರಿಯಾಗಿರುವ ಎ.ಎ. ರಹೀಂ ಕೂಡ ಗಾಯಾಳುಗಳಲ್ಲಿ ಸೇರಿದ್ದಾರೆ.

ಶೈಕ್ಷಣಿಕ ಸಮಸ್ಯೆಗಳನ್ನು ಬಗೆಹರಿಸುವುದು ಬಿಟ್ಟು ವಿದ್ಯಾರ್ಥಿಗಳ ಮೇಲೆ ದೌರ್ಜನ್ಯ ನಡೆಸಿ ಹೋರಾಟವನ್ನು ಹತ್ತಿಕ್ಕುವುದು ಖಂಡನೀಯ. ಸ್ವತಃ ಉಮ್ಮನ್ ಚಾಂಡಿ ವಿದ್ಯಾರ್ಥಿ ಚಳವಳಿಯಿಂದ ಬಂದ ಜನನಾಯಕರಾಗಿದ್ದು, ಅವರ ಅಧಿಕಾರದಲ್ಲೇ ಇಂತಹ ಕೃತ್ಯಗಳು ನಡೆದಿದೆ ಎಂಬುದನ್ನು ಗಮನಿಸಬೇಕಿದೆ.

ಜೂನ್ 29ರಂದು ನಡೆದ ವಿದ್ಯಾರ್ಥಿ ಚಳವಳಿಯ ಮೇಲೂ ಸಶಸ್ತ್ರ ಪೊಲೀಸರ ದೌರ್ಜನ್ಯ ಮುಂದುವರಿಯಿತು. ಎಐವೈಎಫ್ ಮತ್ತು ಎಐಎಸ್‌ಎಫ್ ನೇತೃತ್ವದಲ್ಲಿ ನಡೆಯುತ್ತಿದ್ದ ವಿದ್ಯಾರ್ಥಿ ಚಳವಳಿ ಮೇಲೂ ಲಾಠಿ ಪ್ರಯೋಗಿಸಲಾಯಿತು. ಈ ಘಟನೆಯಲ್ಲೂ ಹಲವರು ಗಾಯಗೊಂಡಿದ್ದಾರೆ.

ಎಸ್‌ಎಫ್‌ಐನ ರಾಜ್ಯ ಜೊತೆ ಕಾರ್ಯದರ್ಶಿ ಆಗಿರುವ ಶಾಸಕ ಆರ್.ರಾಜೇಶ್ ಕೂಡ ಗಾಯಾಳು ಆಗಿದ್ದಾರೆ.


ಈ ಸರಣಿ ದೌರ್ಜನ್ಯಗಳನ್ನು ಖಂಡಿಸಿ ಎಸ್‌ಎಫ್‌ಐ ವಿಧಾನಸಭೆ ಚಲೋ ಕಾರ್ಯಕ್ರಮ ಆಯೋಜಿಸಿತ್ತು. ಇಲ್ಲೂ ಶಾಂತಿಯುತ ಹೋರಾಟದ ಮೇಲೆ ಅನಗತ್ಯವಾಗಿ ಪೊಲೀಸ್ ಹಿಂಸಾಚಾರ ನಡೆದಿದೆ. ಹೋರಾಟದ ಬಳಿಕ ಪ್ರತಿಭಟನಾಕಾರರು ಚದುರುತ್ತಿದ್ದಾಗ ಪೊಲೀಸರು ಮನಬಂದಂತೆ ಥಳಿಸಿದ್ದಾರೆ. 22 ಹ್ಯಾಂಡ್ ಗ್ರೆನೇಡ್‌ಗಳನ್ನು ಎಸೆಯಲಾಗಿದ್ದು, ಲಾಠಿ ಚಾರ್ಜ್ ಮಾಡಲಾಗಿದೆ. ನಗರ ಪೊಲೀಸ್ ಆಯುಕ್ತ ಮನೋಜ್ ಅಬ್ರಹಾಂ ಸ್ವತಃ ಈ ಹಿಂಸಾಚಾರದ ನೇತೃತ್ವ ವಹಿಸಿದ್ದರು. ಎಸ್‌ಎಫ್‌ಐನ ರಾಜ್ಯ ಅಧ್ಯಕ್ಷ ಕೆ.ವಿ. ಸುಮೇಶ್, ಉಪಾಧ್ಯಕ್ಷ ಎ.ಎ. ರಹೀಂ, ಕೇರಳ ವಿವಿ ಯೂನಿಯನ್ ಅಧ್ಯಕ್ಷ ಲೆನಿನ್, ಜಿಲ್ಲಾಧ್ಯಕ್ಷ ಬಾಲಮುರಳಿ, ಎಐಎಸ್‌ಎಫ್ ರಾಜ್ಯ ಅಧ್ಯಕ್ಷ ಪ್ರದೀಪ್ ಕುಮಾರ್, ಎ. ಸಾಜನ್, ಉದಯನ್ ಕುಮಾರ್, ರಮ್ಯ, ಲೇಖಾ ಮೊದಲಾದವರು ಗಂಭೀರವಾಗಿ ಗಾಯಗೊಂಡಿದ್ದಾರೆ.

'ಹಣಕಾಸು ಮಂತ್ರಿಗಳು, ಕಾರ್ಯದರ್ಶಿಗಳನ್ನೇಕೆ ಸಾಕ್ಷಿ ಮಾಡಲಿಲ್ಲ?'

2ಜಿ ಆಪಾದಿತರ ಪ್ರಶ್ನೆ

2ಜಿ ಹಗರಣದ ವಿಚಾರಣೆ ಆರಂಭವಾಗಿದೆ. ಆಪಾದಿತರಾಗಿ ಜೈಲಿನಲ್ಲಿರುವ ಮಾಜಿ ದೂರಸಂಪರ್ಕ ಮಂತ್ರಿ ಮತ್ತು 'ಅವರ ಕಾರ್ಯದರ್ಶಿಯಾಗಿದ್ದ ಸಿದ್ಧಾರ್ಥ ಬೆಹುರಾ ತಂತಮ್ಮ ವಕೀಲರ ಮೂಲಕ ಕೆಲವು 'ಸತ್ಯ'ಗಳನ್ನು ಹೇಳಿದ್ದಾರೆ! 2ಜಿ ಲೈಸೆನ್ಸನ್ನು ಅಗ್ಗದಲ್ಲಿ ಪಡೆದ ಸ್ವಾನ್ ಟೆಲಿಕಾಂ ಮತ್ತು ಯುನಿಟೆಕ್ ವೈರ್‌ಲೆಸ್ ತಮ್ಮ ಕಂಪನಿಗಳಲ್ಲಿ ತಮ್ಮದೇ ಪಾಲನ್ನು ಕಡಿಮೆ ಮಾಡಿಕೊಳ್ಳುವ ಅಂದರೆ ತಮ್ಮ ಲೈಸೆನ್ಸ್‌ಗಳನ್ನು ಅನುಕ್ರಮವಾಗಿ ಎಟಿಸಲಾಟ್ ಮತ್ತು ಟೆಲಿನೋರ್ ಎಂಬ ವಿದೇಶಿ ಕಂಪನಿಗಳಿಗೆ ಮಾರಿಕೊಳ್ಳುವ ಬಗ್ಗೆ ಪ್ರಧಾನ ಮಂತ್ರಿಗಳಿಗೂ ಗೊತ್ತಿತ್ತು, ಹಣಕಾಸು ಮಂತ್ರಿಗಳಿಗೂ ಗೊತ್ತಿತ್ತು, ಅಂದರೆ ಅವರಿಬ್ಬರ ಮೌನಸಮ್ಮತಿಯಿತ್ತು, ಇದು ಸರಕಾರದ ಧೋರಣೆಯಲ್ಲದಿದ್ದರೆ ಪ್ರಧಾನ ಮಂತ್ರಿಗಳು ಈಗಿನ ಯುಪಿಎ ವಿಧಾನದಂತೆ 'ಮಂತ್ರಿಗಳ ಗುಂಪು' ನೇಮಿಸುತ್ತಿದ್ದರಲ್ಲವೇ ಎಂದು ಎ.ರಾಜ ಸೂಚಿಸಿದರೆ, ಅವರ ಕಾರ್ಯದರ್ಶಿಯಾಗಿದ್ದ ಬೆಹುರಾ, ತಾನು ಒಬ್ಬ ಸರಕಾರೀ ಅಧಿಕಾರಿಯಾಗಿ ಸರಕಾರದ ಧೋರಣೆಯನ್ನು ಜಾರಿಗೆ ತಂದಿದ್ದೇನಷ್ಟೇ, ಸಿಬಿಐ ಸೂಚಿಸಿರುವಂತೆ ಪಿತೂರಿ, ಅಕ್ರಮದ ಆಪಾದನೆ ಸಲ್ಲ ಎಂದಿದ್ದಾರೆ.

ರಾಜಾ ಅವರು ಆಗಿನ ಹಣಕಾಸು ಮಂತ್ರಿಗಳಾದ ಚಿದಂಬರಂರವರನ್ನು ಸಾಕ್ಷಿಯಾಗಿಸಬೇಕಿತ್ತು ಎಂದರೆ, ಬೆಹುರಾ ಆಗ ಹಣಕಾಸು ಇಲಾಖೆಯ ಕಾರ್ಯದರ್ಶಿಯಾಗಿದ್ದ, ಈಗ ರಿಝರ್ವ್ ಬ್ಯಾಂಕ್ ಗವರ್ನರ್ ಆಗಿರುವ



ಕೃಪೆ: ದಿ ಹಿಂದೂ

ಸುಬ್ಬಾರಾವ್‌ರನ್ನೂ ಸಾಕ್ಷಿಯಾಗಿ ಮಾಡಬೇಕಿತ್ತು ಎಂದಿದ್ದಾರೆ. ತಾನು ಈ ಇಲಾಖೆಗೆ ಬರುವ ಮೊದಲೇ ಸುಬ್ಬಾರಾವ್, ದೂರಸಂಪರ್ಕ ಇಲಾಖೆಯ ಕಾರ್ಯದರ್ಶಿಗಳಾದ ದಿನೇಶ್ ಮಾಥುರ್ ಮತ್ತು ಟೆಲಿಕಾಂ ಆಯೋಗದ ಹಣಕಾಸು ಕಾರ್ಯದರ್ಶಿ ಮಂಜು ಮಾಧ್ವನ್ ಸರಕಾರದ ಧೋರಣೆಯನ್ನು ನಿರ್ಧರಿಸಿದ್ದರು. ತಾನು ಸರಕಾರದ ಅಧಿಕಾರಿಯಾಗಿ ಅದನ್ನು ವಿರೋಧಿಸುವಂತಿರಲಿಲ್ಲ, ಆದರೂ ತನ್ನನ್ನು ಮಾತ್ರ ಆಪಾದಿತರಾಗಿಸಲಾಗಿದೆ, ಮಂಜು ಮಾಧ್ವನ್ ಹಾಗೂ ದಿನೇಶ್ ಠಾಕುರ್ ಅವರನ್ನು ಸಾಕ್ಷಿಯಾಗಿಸಲಾಗಿದೆ, ತನ್ನನ್ನೂ ಕೇವಲ ಸಾಕ್ಷಿಯಾಗಿಸಬಹುದಾಗಿತ್ತು ಎಂದು ವಾದಿಸಿದ್ದಾರೆ.

ರಾಜಾ 1.76ಲಕ್ಷ ಕೋಟಿರೂ, ನಷ್ಟವಾಗಿದೆ ಎಂಬ ಸಿಎಜಿ ಲೆಕ್ಕಾಚಾರವನ್ನೇ ಪ್ರಶ್ನಿಸಿದ್ದಾರೆ. ಈ ಹಿಂದೆ ಪ್ರಧಾನ ಮಂತ್ರಿಗಳೂ ಆಹಾರ ಸಬ್ಸಿಡಿಯೊಂದಿಗೆ ಹೋಲಿಕೆ ತಂದು ಸುಮಾರಾಗಿ ಇದೇ ಮಾತನ್ನೇ ಬೇರೆ ರೀತಿಯಲ್ಲಿ ಹೇಳಿದ್ದರಲ್ಲವೇ? ಖಾಸಗಿಯವರಿಗೆ 2ಜಿಯಂತಹ ರಾಷ್ಟ್ರೀಯ ಸಂಪನ್ಮೂಲವನ್ನು ಅಗ್ಗದಲ್ಲಿ ಮಾರುವುದು ಯುಪಿಎ ಸರಕಾರದ ಧೋರಣೆಯಾಗಿತ್ತು ಎಂಬುದಂತೂ ಇದರಿಂದ ಖಚಿತ– ಅದನ್ನು ಹಗರಣ ಎನ್ನಬೇಕೋ ಬೇಡವೋ ಎಂಬುದಷ್ಟೇ ಉಳಿದಿರುವ ಪ್ರಶ್ನೆ! ನವ–ಉದಾರವಾದಿಗಳ ಮಟ್ಟಿಗೆ, ಚಮಚಾ ಬಂಡವಾಳಶಾಹಿಗಳ ಮಟ್ಟಿಗಂತೂ ಇದು ಹಗರಣವಲ್ಲ, ಒಂದು ಸಹಜ ಕ್ರಮ!!


ಈ ನಡುವೆ 2ಜಿ ಹಗರಣದಲ್ಲಿ ಯುಪಿಎ–2 ಸಂಪುಟದಲ್ಲಿ ತನ್ನ ಎರಡು ಸ್ಥಾನಗಳನ್ನು ಕಳಕೊಂಡಿರುವ ಡಿಎಂಕೆ ಅವನ್ನು ತುಂಬಲು ತನ್ನ ಪಕ್ಷದಿಂದ ಬೇರೆ ಹೆಸರುಗಳನ್ನು ಸೂಚಿಸದಿರಲು ನಿರ್ಧರಿಸಿದೆ. ಅದರೆ ಅದು ಯುಪಿಎ ಯಲ್ಲಿ ಮುಂದುವರೆಯುತ್ತದಂತೆ.

★

ಪ.ಬಂಗಾಲದಲ್ಲಿ ಮಾವೋವಾದಿಗಳ ಬಿಡುಗಡೆ : ಯುಪಿಎಗೆ ಪೇಚು

ಪಶ್ಚಿಮ ಬಂಗಾಲದ ಟಿಎಂಸಿ– ಕಾಂಗ್ರೆಸ್ ಸರಕಾರ ಇಬ್ಬರು ಪ್ರಮುಖ ನಕ್ಸಲೀಯ ನಾಯಕರೂ ಸೇರಿದಂತೆ ಒಟ್ಟು 52 ಬಂಧಿತ ಮಾವೋವಾದಿಗಳನ್ನು ಬಿಡುಗಡೆ ಮಾಡುವ ಯೋಚನೆಯಲ್ಲಿದೆಯಂತೆ. ಇದು ಯುಪಿಎ–2 ಸರಕಾರಕ್ಕೆ ಇನ್ನೊಂದು ಪೇಚು ತಂದಿದೆ. ಹಿಂದೆ ಎಡರಂಗ ಸರಕಾರ ಮಾವೋವಾದಿಗಳೊಂದಿಗೆ ಟಿಎಂಸಿ ಶಾಮೀಲಿನ ಬಗ್ಗೆ ಗಮನ ಸೆಳೆದಾಗ ಅಧಿಕಾರದ ನಿರೀಕ್ಷೆಯಿಂದಾಗಿ ಮೌನವಾಗಿದ್ದ ಅದಕ್ಕೆ ಈಗ ತನ್ನ ಮಿತ್ರಪಕ್ಷದ ಯೋಚನೆಯಿಂದ ಕಳವಳ ಉಂಟಾಗಿದೆ.

ಮಾವೋವಾದಿಗಳನ್ನು ಎದುರಿಸಲು ಆದಿವಾಸಿಗಳನ್ನು ಸೇರಿಸಿಕೊಂಡು ಸಶಸ್ತ್ರ


ವೇದರಾಜ ಎನ್.ಕೆ.

ಜುಡುಂ ಎಂಬ ಪಡೆಯನ್ನು ರಚಿಸಿದ್ದು ಸರಿಯಲ್ಲೆಂಬ ಸುಪ್ರಿಂ ಕೋರ್ಟ್ [illegible] ಮಾವೋವಾದಿಗಳ ವಿರುದ್ಧ ಕಾರ್ಯಾಚರಣೆಗೆ ತೊಂದರೆಯುಂಟಾಗಿದೆ ಎನ್ನುತ್ತಿರುವ ಯುಪಿಎ–2 ಗೃಹಮಂತ್ರಿಗಳ ಪಕ್ಷ ಕಾಂಗ್ರೆಸಿಗಂತೂ ತಾನು ಕಿರಿಯ ಪಾಲುದಾರನಾಗಿರುವ ಪಶ್ಚಿಮ ಬಂಗಾಲ ಸರಕಾರದ ಯೋಚನೆ ಪೇಚು ತಂದಿದೆ. ಆದರೆ ನಿಜವಾಗಿ ಈಗ ಅದು ಪೇಚಾಡುವುದಕ್ಕೆ ಕಾರಣವಿಲ್ಲ, ಏಕೆಂದರೆ ಚುನಾವಣೆ ಗೆಲ್ಲಲು ಈ ಕೂಟ ಕೊಟ್ಟ ಚುನಾವಣಾ ವಚನಗಳಲ್ಲಿ ಇದೂ ಒಂದು. ಮಾಡಿದ್ದುಣ್ಣುವ ಪೇಚಾಟ ಇದು.

★

ಬೆಲೆಗಳ ನಾಗಾಲೋಟಕ್ಕೆ ಬೆಳೆಗಳ ಖರೀದಿ ಬೆಲೆಗಳ ಏರಿಕೆ ಕಾರಣವಂತೆ!

ಹೀಗೆಂದು ದೇಶದ ಹಣಕಾಸು ಮಂತ್ರಿಗಳು ಹೇಳುತ್ತಿದ್ದಾರೆ. ರೈತರಿಗೆ 'ನ್ಯಾಯಯುತ ಮತ್ತು ಫಲದಾಯಕ' ಬೆಲೆಗಳನ್ನು ಕೊಡುತ್ತಿದ್ದೇವೆ ಎಂಬ ಯುಪಿಎ ಸರಕಾರದ ಮಾತು ಕೇವಲ ಮಿಥ್ಯೆ ಎಂದಿರುವ ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) 2012–13ರ ಸಾಲಿಗೆ ಕಬ್ಬು ಬೆಲೆಗಳನ್ನು ನಿಗದಿ ಮಾಡುವಾಗ ಕಬ್ಬು ಬೆಳೆಯಲು ತಗಲುವ ನಿಜವಾದ ಖರ್ಚನ್ನು ನಿರ್ಲಕ್ಷಿಸಬಾರದು ಎಂದು ಎಚ್ಚರಿಸಿದೆ.

ರಸಗೊಬ್ಬರ ಬೆಲೆ ವಿಪರೀತವಾಗಿ ಹೆಚ್ಚಿದೆ, ಡೀಸೆಲ್ ಬೆಲೆಗಳೂ ಏರಿವೆ. ಹೀಗಿದ್ದರೂ ಯುಪಿಎ–2 ಸರಕಾರದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಕಬ್ಬಿನ ಉತ್ಪಾದನಾ ಖರ್ಚು ಆರು ವರ್ಷಗಳಲ್ಲಿ 69ರೂ.ನಿಂದ 79 ರೂ.ಗೆ ಏರಿದೆಯಷ್ಟೇ ಎಂದು ಲೆಕ್ಕ ಹಾಕಿದೆ. ಇದು ಸರಿಯಲ್ಲ ಎಂದಿರುವ ಎಐಕೆಎಸ್ ತಮಿಳುನಾಡು, ಆಂಧ್ರಪ್ರದೇಶ, ಕರ್ನಾಟಕ ಮತ್ತು ಉತ್ತರಪ್ರದೇಶಗಳಿಂದ ಮಾಹಿತಿ ಸಂಗ್ರಹಿಸಿ ಸ್ವಾಮಿನಾಥನ್ ಆಯೋಗದ ಶಿಫಾರಸುಗಳ ಆಧಾರದಲ್ಲಿ ಲೆಕ್ಕ ಹಾಕಿ ಕ್ವಿಂಟಾಲಿಗೆ ಕನಿಷ್ಠ 300ರೂ. ನಿಗದಿ ಮಾಡಬೇಕು ಎಂದು ಆಗ್ರಹಿಸಿದೆ. ಇದಲ್ಲದೆ ಸಕ್ಕರೆಯ ಮೇಲಿನ ಹತೋಟಿ ತೆಗೆದು, ಕಬ್ಬು ಬೆಳೆಗಾರರಿಗೆ ಕೊಡಬೇಕಾದ ಹಣವನ್ನು ಅಪಾರ ಪ್ರಮಾಣದಲ್ಲಿ ಬಾಕಿ ಇಟ್ಟುಕೊಂಡಿರುವ ಸಕ್ಕರೆ [illegible] ಸಂತುಷ್ಟಗೊಳಿಸುವುದನ್ನು [illegible] ವಿರೋಧಿಸಿದೆ.

★

ಪುಟ 13 ಕ್ಕೆ

ಕಾಂಗ್ರೆಸ್ಸೆಂಬ 'ಮೇಳ'ದಲ್ಲಿ ಅಯ್ಯರ್‌ರಂತವರ 'ಸರ್ಕಸ್'

"ಕಾಂಗ್ರೆಸ್ ಪಕ್ಷ ಹೊಸ ಆರ್ಥಿಕ ಧೋರಣೆಯ ಪ್ರಶ್ನೆಯೊಂದಿಗೆ ಯಾವ ರೀತಿಯಲ್ಲಿ ಗುದ್ದಾಡಿದೆಯೆಂದರೆ ಆ ಬಗ್ಗೆ ಗಂಭೀರ ಸಂದೇಹಗಳಿರುವ ನನ್ನಂತವರನ್ನು ಅಂಚಿಗೆ ತಳ್ಳಲಾಗಿದೆ. ಪಕ್ಷ ಇಡಿಯಾಗಿ ಮನಮೋಹನ ಸಿಂಗ್‌ರವರ ಹಿಂದೆ ಇದೆ. ನಿಜಸಂಗತಿಯೆಂದರೆ, ಕಾಂಗ್ರೆಸ್ ಪಕ್ಷದ ಕಾಳಜಿ ಮಹಾತ್ಮ ಗಾಂಧಿಯವರ ಕಾಲದಲ್ಲಿ ನಮ್ಮ 80% ಜನತೆಯದ್ದಿದ್ದಂತೆ ಈಗಲೂ ಇದೆ. ನಾವು ಅಂಗೀಕರಿಸಿದ ಈ ಬೆಳವಣಿಗೆ ವಿಧಾನ 8 ಶೇಕಡಾ ಜಿಡಿಪಿ ವೃದ್ಧಿ ಮತ್ತು 0.8ಶೇಕಡಾ ಬಡತನದ ವೃದ್ಧಿ ತಂದಿದೆ. ಈ ಬೆಳವಣಿಗೆಯ ವಿಧಾನದ ಫಲಿತಾಂಶವಾಗಿ ವಿಶ್ವ ಸಂಸ್ಥೆಯ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ 1994ರಲ್ಲಿ 134ನೇ ಸ್ಥಾನ ಹೊಂದಿದ್ದ ಭಾರದ ಸ್ಥಾನ 2011ರಲ್ಲಿಯೂ 134ರಲ್ಲಿಯೇ ಇದೆ" – ಇದು ಯುಪಿಎ ದರ್ಬಾರಿನಲ್ಲಿ ನವ–ಉದಾರವಾದಿ ಧೋರಣೆಯೊಂದನ್ನು ಅನುಸರಿಸದೆ ಮಂತ್ರಿ ಪದವಿ ಕಳಕೊಂಡು 'ಅಂಚಿಗೆ ತಳ್ಳಲ್ಪಟ್ಟ' ಮಾಜಿ ಪೆಟ್ರೋಲಿಯಂ ಮಂತ್ರಿ ಮಣಿಶಂಕರ್ ಅಯ್ಯರ್ ಉವಾಚ.

"ನಾವೆಲ್ಲ ಅಲ್ಲಿ ಇದ್ದೇವೆ. 24, ಅಕ್ಬರ್ ರಸ್ತೆಯಲ್ಲಿ ಒಂದು ರೀತಿಯ ಮೇಳ ನಡೆಯುತ್ತಿದೆ. ನೀವು ಅದರ ಭಾಗವಾಗಿರಬೇಕಾದರೆ ಆ ಸರ್ಕಸ್ಸಿನಲ್ಲಿ ಸೇರಿಕೊಳ್ಳಬೇಕು. ಕೆಲವೊಮ್ಮೆ ನಿಮಗೆ ಗೆಲುವು ಸಿಗಬಹುದು, ಕೆಲವೊಮ್ಮೆ ಸೋಲಾಗಬಹುದು, ಆದರೆ ಒಂದಿಲ್ಲೊಂದು ದಿನ ಖಂಡಿತಾ ನೀವು ಏನನ್ನಾದರೂ ಸಾಧಿಸಬಹುದು ಎಂಬ ನಂಬಿಕೆ ಸದಾ ನಿಮ್ಮಲ್ಲಿರಬೇಕು" ಇದು ಮುಂದುವರೆದು ಅವರು ಹೇಳಿರುವ ಮಾತು(24, ಅಕ್ಬರ್ ರಸ್ತೆ ಕಾಂಗ್ರೆಸ್ ಪ್ರಧಾನ ಕಚೇರಿಯಿರುವ ಸ್ಥಳ)!

ಅವರ ಈ ಹೇಳಿಕೆಗೆ ಕಾಂಗ್ರೆಸ್‌ನ ಅಧಿಕೃತ ವಕ್ತಾರರು ಆಕ್ಷೇಪ ವ್ಯಕ್ತಪಡಿಸಿದಾಗ ತಾನು ಸರ್ಕಸ್ ಎಂದದ್ದು ಕಾಂಗ್ರೆಸ್ ಪಕ್ಷವನ್ನಲ್ಲ, ಅದರ ಕೇಂದ್ರ ಕಚೇರಿಯಲ್ಲಿ ನಡೆಯುವ ಮೇಳದ ಬಗ್ಗೆ ಎಂದು ಅಯ್ಯರ್ 'ಸ್ಪಷ್ಟೀಕರಿಸ' ಬೇಕಾಗಿ ಬಂತು. ಈಗಲೂ ಕಾಂಗ್ರೆಸ್ ಪಕ್ಷಕ್ಕೆ 80% ಜನತೆಯ ಬಗ್ಗೆ ಕಾಳಜಿಯಿದೆ ಎನ್ನುವುದನ್ನು ನಂಬುವುದಾದರೆ, ಗಾಂಧೀಜಿಯ ಕಾಲದಲ್ಲೂ ಕಾಂಗ್ರೆಸ್ ನೀತಿ ಹೀಗೆಯೇ ಇತ್ತು ಎಂದು ಭಾವಿಸಬೇಕೇ– ಅಂದರೆ ಮೂಲಭೂತವಾಗಿ ಆಳುವ ಮಂದಿಯ ಹಿತಾಸಕ್ತಿಗಳಿಗೆ ಜನಸಾಮಾನ್ಯರ ಒಳಿತಿನ ಪ್ರಶ್ನೆಯನ್ನು ಬಳಸಿಕೊಳ್ಳುವುದು? ○

ಭ್ರಷ್ಟಾಚಾರ ನವ ಉದಾರೀಕರಣದ ಕೂಲಿ

ಪುಟ 7 ರಿಂದ


ಬೆಂಬಲ ನೀಡಿರುವುದನ್ನು ತರಾಟೆಗೆ ತೆಗೆದು ಕೊಂಡಿದ್ದರು. ಸಂಸದೀಯ ಪ್ರಜಾಪ್ರಭುತ್ವದ ವ್ಯವಸ್ಥೆಗೆ ಹಜಾರೆ ಮತ್ತವರ ಗುಂಪು ನಡೆಸುತ್ತಿರುವ ದಾಳಿಗೆ ಸಿಪಿಐ(ಎಂ) ಸಹಕಾರ ನೀಡಿ ಪಿತೂರಿ ಮಾಡುತ್ತಿದೆ ಎಂಬ ಆರೋಪವನ್ನೂ ಮಾಡಿದ್ದರು. ಪುಣ್ಯಕ್ಕೆ ಅವರು ಕಂಟ್ರೋಲರ್ ಆಂಡ್ ಆಡಿಟರ್ ಜನರಲ್ ಮತ್ತು ಸುಪ್ರೀಂ ಕೋರ್ಟ್‌ನ್ನು ಈ ಪಿತೂರಿಯ ಪಟ್ಟಿಯಲ್ಲಿ ಸೇರಿಸಲು ಮರೆತುಬಿಟ್ಟಿದ್ದರು. ಸಂಸದೀಯ ಪ್ರಜಾಪ್ರಭುತ್ವದ ವಿಷಯಕ್ಕೆ ಬರುವುದಿದ್ದರೆ, ಪ್ರಣಬ್ ಮುಖರ್ಜಿ ಮತ್ತವರ ಸಂಪುಟ ಸಹದ್ಯೋಗಿಗಳು ಪದೇ ಪದೇ ಸಂಸತ್ತಿನ ಘನತೆಯ ಜೊತೆ ರಾಜಿ ಮಾಡಿಕೊಂಡಿದ್ದಾರೆ. ಅದಕ್ಕೆ ತಾಜಾ ಉದಾಹರಣ ಕೆಲ ವಾರಗಳ ಹಿಂದೆ ನಡೆದ ಸಂಸತ್ತಿನ ಮಳೆಗಾಲದ ಅಧಿವೇಶನವನ್ನು ಮುಂದೂಡಿದ ಪ್ರಕರಣ. ಐದು ರಾಜ್ಯಗಳ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಸಂಸತ್ತಿನ ಬಜೆಟ್ ಅಧಿವೇಶನದ ಕಲಾಪ ಅವಧಿಯನ್ನು ಸುಮಾರು ಒಂದು ತಿಂಗಳ ವರೆಗೆ ಕಡಿತಗೊಳಿಸಲಾಗಿತ್ತು.

ಬಿಜೆಪಿ ಮತ್ತು ಎಡ ಪಕ್ಷಗಳ ಮೇಲೆ ದಾಳಿ ಮಾಡುವ ಮೂಲಕ ಉನ್ನತ ಮಟ್ಟದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ವಿರುದ್ಧದ ಹೋರಾಟವನ್ನು ಹತ್ತಿಕ್ಕಬಹುದು ಎಂದು ಕಾಂಗ್ರೆಸ್ ನಾಯಕತ್ವ ಯೋಚಿಸಿದ್ದರೆ ಅದು ಕೇವಲ ಭ್ರಮೆ. ಉನ್ನತ ಮಟ್ಟದ ಭ್ರಷ್ಟಾಚಾರ ಮತ್ತು ಗುಲಾಮಿ ಬಂಡವಾಳದ ಪಾರಮ್ಯಕ್ಕೆ ಕಾರಣವಾದ ನವ ಉದಾರೀಕರಣದ ನೀತಿಗಳನ್ನು ಆರಂಭಿಸಿದ್ದೇ ಕಾಂಗ್ರೆಸ್ ನೇತೃತ್ವದ ಸರ್ಕಾರ. ಈ ನೀತಿಗಳಿಂದಾಗಿಯೇ ಈಗ ಅದು ಸಂಕಷ್ಟಕ್ಕೆ ಸಿಲುಕಿದೆ.

ಇನ್ನು ಬಿಜೆಪಿ ಕಥೆ ಕೇಳುವುದೇ ಬೇಡ. ಕರ್ನಾಟಕದಲ್ಲಿ ಅದರ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಮ್ಮ ವಿರುದ್ಧದ ಗಂಭೀರ ಭ್ರಷ್ಟಾಚಾರ ಆರೋಪಗಳನ್ನು ಎದುರಿಸುತ್ತಿರುವ ಪರಿಯೇ ಪ್ರಜಾಪ್ರಭುತ್ವದ ಅಣಕ. ಇಂತಹ ಪ್ರಕರಣಗಳ ಇತ್ಯರ್ಥಕ್ಕೆ ಅವರು ಲೋಕಾಯುಕ್ತವಾಗಲೀ ಅಥವಾ ಯಾವುದೇ ನ್ಯಾಯಾಲಯವನ್ನಾಗಲಿ ನಂಬುವುದಿಲ್ಲ. ಅದರ ಬದಲು ಧರ್ಮಸ್ಥಳಕ್ಕೆ ಭೇಟಿ ನೀಡುತ್ತಾರೆ. ಅಲ್ಲಿನ ದೇವರು ಮಂಜುನಾಥನೇ ತೀರ್ಪನ್ನು ಪ್ರಕಟಿಸಲಿ ಎಂದು ಯಡಿಯೂರಪ್ಪ ಬಯಸುತ್ತಾರೆ. ಆದರೆ, ಕಾಂಗ್ರೆಸ್ ಭ್ರಷ್ಟಾಚಾರದ ಆರೋಪಕ್ಕೆ ತುತ್ತಾದರೆ, ಆಗ ಇದೇ ಮಂದಿ ಹಿಂದುತ್ವದ ಶೈಲಿಯಲ್ಲಿ ತಮ್ಮ ಭ್ರಷ್ಟಾಚಾರ ವಿರುದ್ಧದ ಪ್ರತಿಭಟನೆ ನಡೆಸುತ್ತಾರೆ.

ಪೆಟ್ರೋಲಿಯಂ ಉತ್ಪನ್ನಗಳ ತೆರಿಗೆ- ಹಣದುಬ್ಬರಕ್ಕೆ ಮತ್ತಷ್ಟು ವೇಗ

ಕೇಂದ್ರ ಸರ್ಕಾರ ಮತ್ತು ಜನರ ನಡುವೆ ಮತ್ತಷ್ಟು ಕಂದಕ ಹೆಚ್ಚುತ್ತಿದೆ ಎಂಬುದನ್ನು ವಿವರಿಸಲು ಇತ್ತೀಚೆಗೆ ನಡೆದ ಇನ್ನೆರಡು ವಿಷಯಗಳನ್ನು ಪ್ರಸ್ತಾಪಿಸಬೇಕಿದೆ. ಇವು




ಸರ್ಕಾರದ ಜನಪರ ಕಾಳಜಿ ಮತ್ತು ತನ್ನ ಆರ್ಥಿಕ ನೀತಿಯ ಗುರಿಯನ್ನು ಸ್ಪಷ್ಟಪಡಿಸುತ್ತದೆ. ಯುಪಿಎ ಸರ್ಕಾರ ಮತ್ತೊಂದು ಸುತ್ತಿನ ತೈಲ ಬೆಲೆ ಏರಿಸುವ ಮೂಲಕ ಜನರ ಮೇಲೆ ಇನ್ನೊಂದು ಬೃಹತ್ ಹೊರೆಯನ್ನು ಹಾಕಿದೆ. ಈ ಬಾರಿ ಅದು ಡೀಸೆಲ್, ಸೀಮೆಎಣ್ಣೆ ಮತ್ತು ಅಡುಗೆ ಅನಿಲದ ಬೆಲೆ ಏರಿಕೆ ಮೂಲಕ. ಬೆಲೆ ಏರಿಸುವ ಸಂದರ್ಭದಲ್ಲೇ ಅದು ಕಚ್ಚಾ ತೈಲ ಮತ್ತು ತೈಲೋತ್ಪನ್ನಗಳ ಮೇಲಿನ ಅಬಕಾರಿ ಸುಂಕವನ್ನು ಶೇ.5ರಷ್ಟು ಕಡಿತಗೊಳಿಸಿದೆ. ಜನರ ಹೊರೆ ತಗ್ಗಿಸಲು ಈ ಕ್ರಮ ಎಂಬುದಾಗಿ ಸರ್ಕಾರ ಬಿಂಬಿಸುತ್ತಿದೆ. ಆದರೆ, 2010-11ರ ಕೇಂದ್ರ ಬಜೆಟ್‌ನಲ್ಲಿ ಹೆಚ್ಚುವರಿ ಶೇ. 5 ತೆರಿಗೆ ಹಾಕಿರುವುದನ್ನು ನಾವು ಗಮನಿಸಬೇಕು. ಆ ಕ್ಷಣದಲ್ಲೇ ಪೆಟ್ರೋಲ್ ಮತ್ತು ಡೀಸೆಲ್‌ಗಳ ದರದಲ್ಲಿ ಏರಿಕೆಯಾಗಿತ್ತು. ಈ ಹೆಚ್ಚುವರಿ ತೆರಿಗೆಯನ್ನು ಎಡಪಕ್ಷಗಳು ಸೇರಿದಂತೆ ಎಲ್ಲ ಪ್ರತಿಪಕ್ಷಗಳೂ ವಿರೋಧಿಸಿದ್ದವು. ಎಡಪಕ್ಷಗಳ ಮುತ್ಸದ್ದಿತನದಲ್ಲಿ ಈ ಬೆಲೆ ಏರಿಕೆಯನ್ನು ವಿರೋಧಿಸಿ ಎಲ್ಲ ಜಾತ್ಯತೀತ ವಿರೋಧ ಪಕ್ಷಗಳು ಅಖಿಲ ಭಾರತ ಮುಷ್ಕರವನ್ನೂ ಸಂಘಟಿಸಿತು. ಶೇ. 5 ಹೆಚ್ಚುವರಿ ತೆರಿಗೆಯನ್ನು ವಾಪಸ್ ಪಡೆಯುವಂತೆ ಒತ್ತಾಯಿಸಿ ಸಂಸತ್ತಿನಲ್ಲಿ ಪ್ರತಿಪಕ್ಷಗಳು ನಿಲುವಳಿ ಗೊತ್ತುವಳಿಯನ್ನು ಮಂಡಿಸಿತು. ಆದರೆ, ತೆರಿಗೆ ವಾಪಸ್ ಪಡೆಯದೆ ಕೇಂದ್ರ ಸರ್ಕಾರ ಆಗ ಜನರ ಮೇಲೆ ಅನಗತ್ಯ ಹೊರೆಯನ್ನು ಹಾಕಿತ್ತು. ಈಗ ಆ ತೆರಿಗೆಯನ್ನು ವಾಪಸ್ ಪಡೆಯುವ ಮೂಲಕ ಜನರ ಕಣ್ಣಿಗೆ ಮಣ್ಣೆರಚಿದೆ. ಇದೇ ಸಂದರ್ಭದಲ್ಲಿ ಮೂಲ ತೆರಿಗೆ ವ್ಯವಸ್ಥೆಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ.

ಪೀಪಲ್ಸ್ ಡೆಮಾಕ್ರಸಿಯ ಹಿಂದಿನ ಸಂಚಿಕೆಯ ಸಂಪಾದಕೀಯದಲ್ಲಿ ಪ್ರಸ್ತಾಪಿಸಿದಂತೆ, 2010-11ರ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರ ತೈಲೋತ್ಪನ್ನ ವಲಯದಲ್ಲಿ 1,36,000 ಕೋಟಿ ರೂಪಾಯಿ ಆದಾಯವನ್ನು ಸಂಗ್ರಹಿಸಿದೆ. ಇದರಲ್ಲಿ, 40000 ಕೋಟಿ ರೂಪಾಯಿಯನ್ನು ಸಬ್ಸಿಡಿ ಮತ್ತು ಸಾರ್ವಜನಿಕ ವಲಯದ ತೈಲ ಮಾರ್ಕೆಟಿಂಗ್ ಕಂಪೆನಿಗಳಿಗೆ ಬಾಂಡ್‌ಗಳಾಗಿ ನೀಡಿದೆ. ಇದು ತೈಲ ಕ್ಷೇತ್ರದ ಒಟ್ಟು ಆದಾಯದ ಶೇ. 20ರಷ್ಟಿದೆ. ಅಂದರೆ ಕೇಂದ್ರ ಸರ್ಕಾರ ತೆರಿಗೆ ರೂಪದಲ್ಲಿ ಸಂಗ್ರಹಿಸುವ ಪ್ರತಿ 100 ರೂಪಾಯಿಯಲ್ಲಿ 20 ರೂಪಾಯಿ ಮಾತ್ರ ಸಬ್ಸಿಡಿಯಾಗಿದೆ, ಉಳಿದದ್ದು ಸರ್ಕಾರದ ಖಜಾನೆಗೆ ಹೋಗುತ್ತದೆ. ಈ ತೆರಿಗೆ ನೀತಿಗಳು ಹಣದುಬ್ಬರಕ್ಕೆ ಹೇಗೆ ದಾರಿ ಮಾಡಿಕೊಡುತ್ತದೆ ಎಂಬುದನ್ನು ವಿವರಿಸುತ್ತದೆ.

ಪರಮಾಣು ಒಪ್ಪಂದ

ಮೂರನೇ ವಿಷಯ, ಭಾರತ-ಅಮೆರಿಕ ಪರಮಾಣು ಒಪ್ಪಂದದ ಸಂದರ್ಭದಲ್ಲಿ ಮನಮೋಹನ್ ಸಿಂಗ್ ಸರ್ಕಾರ ನಡೆದುಕೊಂಡ ರೀತಿ. 45 ದೇಶಗಳ ಸದಸ್ಯತ್ವ ಹೊಂದಿರುವ ಪರಮಾಣು ಪೂರೈಕೆದಾರರ ತಂಡ(ಎನ್‌ಎಸ್‌ಜಿ) ಇತ್ತೀಚೆಗೆ ಸಭೆ ಸೇರಿ ಪರಮಾಣು ಅಭಿವೃದ್ಧಿ ಮತ್ತು ಮರು ಸಂಸ್ಕರಣ ತಂತ್ರಜ್ಞಾನ ಕುರಿತ ಮಾರ್ಗದರ್ಶಿ ಸೂತ್ರಗಳನ್ನು ತಯಾರಿಸಿತು. ಪರಮಾಣು ನಿಶಸ್ತ್ರೀಕರಣ ಒಪ್ಪಂದಕ್ಕೆ ಸಹಿ ಹಾಕದ ದೇಶಗಳಿಗೆ ಈ ಸೂಕ್ಷ್ಮ ತಂತ್ರಜ್ಞಾನವನ್ನು ರಫ್ತು ಮಾಡದಿರಲು ಈ ಸಭೆಯಲ್ಲಿ ನಿರ್ಧರಿಸಲಾಗಿತ್ತು.

ಈ ತೀರ್ಮಾನದ ಪ್ರಕಾರ, ಭಾರತ ಕೂಡ



ಆಮದು ನಿಷೇಧಕ್ಕೆ ಒಳಗಾದ ದೇಶ. ಹಾಗಾಗಿ ನಮಗೆ ಪರಮಾಣು ತಂತ್ರಜ್ಞಾನದ ಪ್ರಯೋಜನ ಸಿಗುವುದಿಲ್ಲ. ಹಿಂದಿನಿಂದಲೂ ಎಡ ಪಕ್ಷಗಳು ಭಾರತ-ಅಮೆರಿಕ ಪರಮಾಣು ಒಪ್ಪಂದವನ್ನು ಪ್ರಬಲವಾಗಿ ವಿರೋಧಿಸಿದ್ದನ್ನು ಇಲ್ಲಿ ಉಲ್ಲೇಖಿಸಬಹುದು. ಭಾರತಕ್ಕೆ ಈ ಒಪ್ಪಂದದಿಂದ ಯಾವುದೇ ಪ್ರಯೋಜನ ಇಲ್ಲ, ನಾಗರಿಕ ಸಮಾಜದ ಹಿತಕ್ಕಾಗಿ ಬಳಸಲು ಪರಮಾಣು ತಂತ್ರಜ್ಞಾನ ದೇಶಕ್ಕೆ ಸಿಗುವುದಿಲ್ಲ ಎಂಬುದು ನಮ್ಮ ವಿರೋಧಕ್ಕೆ ಇದ್ದ ಪ್ರಮುಖ ಕಾರಣಗಳಲ್ಲೊಂದು. ಪರಮಾಣು ಒಪ್ಪಂದಕ್ಕೆ ಸಹಿ ಹಾಕುವ ಸಾಕಷ್ಟು ಹಿಂದೆಯೇ ಅಮೆರಿಕದ ಸಂಸತ್ತಿನಲ್ಲಿ ಹೈಡ್ ಆ್ಯಕ್ಟ್ ಎಂಬ ಕಾನೂನನ್ನು ಅಂಗೀಕರಿಸಲಾಗಿತ್ತು. ಈ ಕಾಯ್ದೆ ಪ್ರಕಾರ, ಭಾರತಕ್ಕೆ ಪರಮಾಣು ತಂತ್ರಜ್ಞಾನ ಮತ್ತು ಮರುಸಂಸ್ಕರಣ ತಂತ್ರಜ್ಞಾನವನ್ನು ಹಸ್ತಾಂತರಿಸಲು ಸ್ಪಷ್ಟವಾದ ನಿರ್ಬಂಧ ವಿಧಿಸಲಾಗಿದೆ.

ಇದು 2006, ಆಗಸ್ಟ್ 17ರಂದು ಪ್ರಧಾನಿ ಸಂಸತ್ತಿಗೆ ನೀಡಿದ ಭರವಸೆಗೆ ಸಂಪೂರ್ಣ ವಿರುದ್ಧವಾಗಿರುವ ವಾಸ್ತವ. ಅಂದು ಪ್ರಧಾನಿ ಹೇಳಿದ್ದು, "ನಾಗರಿಕ ಇಂಧನಕ್ಕೆ ಸಂಬಂಧಿಸಿದಂತೆ ಪರಮಾಣು ಸಹಕಾರ ಮತ್ತು ತಂತ್ರಜ್ಞಾನ ವಿನಿಮಯಕ್ಕೆ ಸಂಬಂಧಿಸಿದಂತೆ ವಿಧಿಸಲಾದ ನಿರ್ಬಂಧಗಳನ್ನು ತೆಗೆದುಹಾಕಲು ಕೋರಿಕೊಳ್ಳಲಾಗುವುದು."

ಹೈಡ್ ಆ್ಯಕ್ಟ್‌ನಲ್ಲಿ ಇಂತಹ ಒಂದು ನಿರ್ಬಂಧ ಇದೆ ಎಂಬುದನ್ನು ಯುಪಿಎ ಸರ್ಕಾರ ನಿರಾಕರಿಸಿಲ್ಲ. ಇಂತಹ ಸಂದರ್ಭದಲ್ಲಿ, ಕೇಂದ್ರ ಸರ್ಕಾರವು ಎನ್‌ಎಸ್‌ಜಿ ಸಭೆಯಲ್ಲಿ ಭಾರತಕ್ಕೆ ಅಣು ಇಂಧನ ಆಮದಿಗೆ ಎಲ್ಲ ಪೂರ್ಣ ವಿನಾಯಿತಿ ನೀಡಿದೆ ಎಂದು ಹೇಳಿಕೊಂಡಿತ್ತು. ಈ ವಿನಾಯಿತಿಯಿಂದಾಗಿ ಅಣು ತಂತ್ರಜ್ಞಾನ ಮತ್ತು ಪರಮಾಣು ರಿಯಾಕ್ಟರ್‌ಗಳನ್ನು ಆಮದು ಮಾಡಿಕೊಳ್ಳಬಹುದು ಎಂದು ಸರ್ಕಾರ ಸ್ಪಷ್ಟಪಡಿಸಿತ್ತು. ಎನ್‌ಎಸ್‌ಜಿಯು ಹಸಿರುನಿಶಾನೆಗೂ ಮುನ್ನ, ಅಮೆರಿಕ ಜಿ-8ರಾಷ್ಟ್ರಗಳ ಮುಂದೆ ಹೊಸ ಮಾರ್ಗಸೂಚಿಯ ಪ್ರಸ್ತಾಪವನ್ನು ಇಟ್ಟಿತ್ತು. ಇದರ ಪ್ರಕಾರ ಭಾರತ ಸೇರಿದಂತೆ ಅಣು ಒಪ್ಪಂದಕ್ಕೆ ಸಹಿ ಹಾಕದ ಯಾವುದೇ ರಾಷ್ಟ್ರಕ್ಕೂ ಸೂಕ್ಷ್ಮ ತಂತ್ರಜ್ಞಾನದ ವಿನಿಮಯವನ್ನು ನಿರ್ಬಂಧಿಸಬೇಕೆಂಬುದನ್ನು ಉಲ್ಲೇಖಿಸಿತ್ತು. ಇಷ್ಟೆಲ್ಲ ವಿಚಾರ ಪ್ರಧಾನಿ, ಅವರ ಸಚಿವರು ಮತ್ತು ಕೇಂದ್ರ ಸರ್ಕಾರಕ್ಕೆ ಗೊತ್ತಿದ್ದರೂ ಪೂರ್ಣ ವಿನಾಯಿತಿ ಮೂಲಕ ದೇಶಕ್ಕೆ ಅಣು ತಂತ್ರಜ್ಞಾನ ಹರಿದುಬರಲಿದೆ ಎಂಬುದನ್ನು ಪದೇ ಪದೇ ಹೇಳುತ್ತಾ ಬರಲಾಯಿತು.

ಅಣು ಒಪ್ಪಂದದ ಮೂಲಕ ಮನಮೋಹನ ಸಿಂಗ್ ಸರ್ಕಾರ ದೇಶಕ್ಕೆ ಮಾರಕ ಒಪ್ಪಂದವನ್ನು ಗಂಟು ಹಾಕಿದೆ. ನಾವು ಅಮೆರಿಕದ ಪರಮಾಣು ರಿಯಾಕ್ಟರ್‌ಗಳನ್ನು ಕಡ್ಡಾಯವಾಗಿ ಖರೀದಿ ಮಾಡಬೇಕಾಗಿದೆ. ಇದೇ ವೇಳೆ, ಅಣು ಇಂಧನವನ್ನು ಕೆಲವೊಂದು ಷರತ್ತಿಗೊಳಪಟ್ಟು ಆಮದು ಮಾಡಬೇಕಾಗುತ್ತದೆ. ನಾವು ಶತಕೋಟಿ ಡಾಲರ್‌ಗಟ್ಟಲೆ ವ್ಯವಹಾರವನ್ನು ಅಮೆರಿಕದ ಅಣು ಉದ್ಯಮಕ್ಕೆ ನೀಡಬೇಕು. ಇಲ್ಲೂ, ಫುಕುಷಿಮಾದ ಬಳಿಕ, ಯಾರೂ ಅಣು ಸ್ಥಾವರದ ಆಮದಿಗೆ ಒಲವು ತೋರಿಸುತ್ತಿಲ್ಲ. ಅಮೆರಿಕದ ಜೊತೆ ವ್ಯವಹರಿಸುವ ಸಂದರ್ಭದಲ್ಲಿ ಮನಮೋಹನ್ ಸಿಂಗ್ ಸರ್ಕಾರವು ಭಾರತದ ಹಿತಾಸಕ್ತಿಯನ್ನು ರಕ್ಷಿಸುತ್ತದೆ ಎಂಬುದನ್ನು ನಾವು ನಿರೀಕ್ಷಿಸುವುದು ತಪ್ಪಾಗುತ್ತದೆ.

ರಾಜೀನಾಮೆ ಕೇವಲ ಮುಖ್ಯಮಂತ್ರಿ.....

ಪುಟ 9 ರಿಂದ

ಕಪ್ಪು ಹಣವನ್ನು ಶುಭ್ರಗೊಳಿಸಲಿಕ್ಕಾಗಿಯೇ ಎಂದು ಜನ ಮಾತನಾಡುತ್ತಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಯಡಿಯೂರಪ್ಪ ಮತ್ತು ಅವರ ಮಕ್ಕಳು ಎಷ್ಟು ಸಾಧ್ಯವೋ ಅಷ್ಟೆಲ್ಲವನ್ನು ಧೋಚಿದ್ದಾರೆ, ಮಾತ್ರವಲ್ಲ ದೋಚುವವರಿಗೆ ಆಸ್ಪದ ಕೊಡುತ್ತಾ ಬಂದಿದ್ದಾರೆ. ಈ ಅಕ್ರಮ ಸಂಪತ್ತಿನ ಬಲದಿಂದ ಶಾಸಕರನ್ನು ತನ್ನ ಬೆಂಬಲಕ್ಕೆ ಇಟ್ಟುಕೊಳ್ಳಬಹುದೆಂಬ ಧೈರ್ಯ ಅವರಿಗಿದೆ. ಹಾಗಾಗಿ ಹೈಕಮಾಂಡ್ ಆದೇಶದ ನಂತರವೂ ಯಡಿಯೂರಪ್ಪ ತನ್ನ ಸ್ಥಾನಕ್ಕೆ ರಾಜೀನಾಮೆ ನೀಡಲು ಮುಂದಾಗಲಿಲ್ಲ. ಷರತ್ತುಗಳನ್ನು ಮುಂದೊಡ್ಡಿದ್ದಾರೆ. ಆಷಾಢ ಮಾಸದ ನೆಪ ಮುಂದಿಟ್ಟಿದ್ದಾರೆ. ಹೈಕಮಾಂಡಿಗೆ ಸವಾಲು ಹಾಕಲು ಮುಂದಾಗಿದ್ದಾರೆ. ಇದುವರೆಗೆ ಯಡಿಯೂರಪ್ಪ ಬಿಜೆಪಿ ಹೈಕಮಾಂಡ್ ಅನ್ನು ತೃಪ್ತಿಪಡಿಸುತ್ತಾ ಬಂದಿದ್ದರು. ಈಗ ಹೈ ಕಮಾಂಡ್‌ಗೆ ಯಡಿಯೂರಪ್ಪ ಅವರನ್ನು ಕೆಳಗಿಳಿಸುವುದು ಅನಿವಾರ್ಯವಾಗಿದೆ. ಸಂಸತ್ತಿನಲ್ಲಿ ತಮ್ಮ ಮುಖ ಉಳಿಸಿಕೊಳ್ಳಲು ಇದು ಅನಿವಾರ್ಯವಾಗಿದೆ. ಯಡಿಯೂರಪ್ಪರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗೆ ಇಳಿಸುವ ಬಿಜೆಪಿ ಹೈ ಕಮಾಂಡಿನ ಕ್ರಮದ ಹಿಂದೆ ಕರ್ನಾಟಕದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರವನ್ನು ತಡೆಗಟ್ಟುವ ಯಾವ ಉದ್ದೇಶವೂ ಅವರಿಗಿಲ್ಲ. ಕೇಂದ್ರ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರವನ್ನು ವಿರೋಧಿಸಲು ಬಿಜೆಪಿಗೆ ನೈತಿಕತೆಯ ಪ್ರಶ್ನೆ ಎದುರಾಗಿತ್ತು. ಅಷ್ಟಕ್ಕೆ ಮಾತ್ರ ಯಡಿಯೂರಪ್ಪ ವಿರುದ್ಧ ಕ್ರಮಕ್ಕೆ ಬಿಜೆಪಿ ಹೈಕಮಾಂಡ್ ಮುಂದಾಗಿದೆ.

ಬಿಜೆಪಿ ಸರ್ಕಾರವೇ ರಾಜೀನಾಮೆ ಕೊಡಬೇಕು

ಯಡಿಯೂರಪ್ಪ ರಾಜೀನಾಮೆ ಕೊಡಬಹುದು-ಕೊಡದೆ ಇರಬಹುದು. ಯಡಿಯೂರಪ್ಪನ ರಾಜೀನಾಮೆ ಒಂದರಿಂದಲೇ ರಾಜ್ಯದ ಸಮಸ್ಯೆ ಇತ್ಯರ್ಥವಾಗುವುದಿಲ್ಲ. ಸರ್ಕಾರದ ಬೊಕ್ಕಸಕ್ಕೆ ನಷ್ಟ ಮಾಡಿರುವ ಮುಖ್ಯಮಂತ್ರಿ, 4 ಜನ ಸಚಿವರು, ಮತ್ತು ನೂರಾರು ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕಾಗಿದೆ. ಅಂದರೆ. ಸರಿಸುಮಾರು ಇಡಿ ಸರ್ಕಾರದ ವಿರುದ್ಧ ಕಾನೂನು ಕ್ರಮ ಜರುಗಿಸಬೇಕಾಗಿಧೆ. ರಾಜ್ಯದ ಇಡೀ ರಾಜಕೀಯ ಮತ್ತು ಆಡಳಿತ ವ್ಯವಸ್ಥೆ ಭ್ರಷ್ಟಾಚಾರದಲ್ಲಿ ಮುಳುಗಿದೆ. ಭ್ರಷ್ಟಾಚಾರ ನಿಯಂತ್ರಣಾ ಕಾಯ್ದೆ, ಗಣಿ ಮತ್ತು ಖನಿಜ ಕಾಯ್ದೆ, ಅರಣ್ಯ ಸಂರಕ್ಷಣಾ ಕಾಯ್ದೆ, ಭಾರತೀಯ ದಂಡ ಸಂಹಿತೆಯ ವಿವಿಧ ಕಾಯ್ದೆಗಳ ಅಡಿಯಲ್ಲಿ ಪ್ರಕರಣ ವಿಚಾರಣೆ ನಡೆಯಬೇಕಾಗಿದೆ. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಆಗಬೇಕಾಗಿದೆ. ಈ ಕಾನೂನು ಪ್ರಕ್ರಿಯೆಯನ್ನು ಕ್ರಮಬದ್ಧವಾಗಿ ನಡೆಸಲು ಸಾಧ್ಯವಾಗಬೇಕಾದರೆ ಹೊಸ ಸರ್ಕಾರವೊಂದು ಅಧಿಕಾರಕ್ಕೆ ಬರುವುದು ಅಗತ್ಯವಿದೆ. ಕೇವಲ ಯಡಿಯೂರಪ್ಪನ ಸ್ಥಾನಕ್ಕೆ ಒಬ್ಬ ಬಿಜೆಪಿ ಶಾಸಕನನ್ನು ತರುವ ಮೂಲಕ ಈ ಪ್ರಶ್ನೆ ಇತ್ಯರ್ಥ ಆಗಲಾರದು. ಮುಕ್ತವಾದ ತನಿಖೆಯಾಗಿ ಎಲ್ಲ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕಾದರೆ ಹೊಸ ಜನಾದೇಶದಿಂದ ಅಧಿಕಾರಕ್ಕೆ ಬರುವ ಸರ್ಕಾರ ಅತ್ಯಗತ್ಯವಾಗಿದೆ.ಲೋಕಾಯುಕ್ತ ತನಿಖೆಯ ಭಾಗವಾಗಿ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿ ಯು.ವಿ.ಸಿಂಗ್ ಮತ್ತು ತಂಡ ಬಳ್ಳಾರಿಗೆ ಹೋಗಿದ್ದಾಗ ಕೆ.ಎಂ.ಎಫ್. ಅಧ್ಯಕ್ಷ ಸೋಮಶೇಖರ್‌ರೆಡ್ಡಿ ಅಧಿಕಾರಿಗಳಿಗೆ ಮೊಬೈಲ್ ಕರೆ ಮಾಡಿ ಬೆದರಿಕೆ ಹಾಕಿದ್ದರು ಎಂದು ಸಹ ವರದಿಯಲ್ಲಿ ಪ್ರಸ್ತಾಪಿಸಲಾಗಿದೆ. ಹೀಗಿರುವಾಗ ಮತ್ತೊಬ್ಬ ಬಿಜೆಪಿ ಶಾಸಕ ಅಥವಾ ಮುಖಂಡರ ನೇತೃತ್ವದಲ್ಲಿ ಅಧಿಕಾರ ವಹಿಸಿ ಕೊಂಡರೆ ಮುಕ್ತ ತನಿಖೆ ಸಾಧ್ಯವಾಗದು ಮಾತ್ರವಲ್ಲ ರಾಜ್ಯದ ಲೂಟಿ ನಿಲ್ಲದು.



ಮುಖ್ಯಮಂತ್ರಿ ವಿರುದ್ಧವೇ ಆರೋಪ ಇರುವುದರಿಂದ ಲೋಕಾಯುಕ್ತರು ಅವರ ವಿರುದ್ಧ ಕಾನೂನುಕ್ರಮ ಜರುಗಿಸಲು ರಾಜ್ಯಪಾಲರು ಅನುಮತಿ ನೀಡಬೇಕೆಂದು ಕೋರಿದ್ದಾರೆ. ಇದೇ ಸರ್ಕಾರ ಮುಖ್ಯಮಂತ್ರಿ ವಿರುದ್ಧ ದೂರು ದಾಖಲಾಗುವುದು ಅಸಾಧ್ಯ. ಹೊಸ ಜನಾದೇಶದೊಂದಿಗೆ ಅಧಿಕಾರಕ್ಕೆ ಬರುವ ಸರ್ಕಾರದಿಂದ ಮಾತ್ರ ಈ ಕ್ರಮವನ್ನು ನಿರೀಕ್ಷಿಸಬಹುದು. ಆದ್ದರಿಂದ ವಿಧಾನಸಭೆ ವಿಸರ್ಜಿಸಿ ಚುನಾವಣೆ ನಡೆಸಬೇಕಾದದ್ದು ಅಗತ್ಯವಾಗಿದೆ.

ಬಿಜೆಪಿ ವಕ್ತಾರ ಸಿ.ಟಿ.ರವಿ ಮೊದಲಾದವರು "ನಮ್ಮ ಪಕ್ಷಕ್ಕೆ 5 ವರ್ಷಗಳವರೆಗೆ ಅಧಿಕಾರ ನಡೆಸಲು ಜನಾದೇಶ ಸಿಕ್ಕಿದೆ ಎಂದು ಹೇಳುತ್ತಿದ್ದಾರೆ. ಅಂದರೆ 5 ವರ್ಷದವರೆಗೆ ನಮಗೆ ಗುತ್ತಿಗೆ ನೀಡಲಾಗಿದೆ ಎಂಬುದು ಬಿಜೆಪಿಯವರ ತರ್ಕ. ನಮ್ಮ ಸಂವಿಧಾನ ಆ ತರಹದ ಗುತ್ತಿಗೆ ನೀಡುವುದಿಲ್ಲ. ಅಮೇರಿಕಾದಲ್ಲಿ ಅಂತಹ ಪದ್ಧತಿ ಇರಬಹುದು. ನಮ್ಮ ದೇಶದಲ್ಲೂ ಕೂಡ ಅಮೇರಿಕಾದಲ್ಲಿ ಇರುವ ರೀತಿಯಲ್ಲಿ 'ಎರಡು ಪಕ್ಷ' ಪದ್ಧತಿಯನ್ನು ಜಾರಿಗೆ ತರಲು ಬಿಜೆಪಿಯವರು ತುದಿಗಾಲಿನ ಮೇಲೆ ನಿಂತಿದ್ದಾರೆ. ನಮ್ಮ ಸಂವಿಧಾನದ ಪ್ರಕಾರ ಜನಬೆಂಬಲ ಕಳೆದುಕೊಂಡ ಸರ್ಕಾರ ಪತನವಾಗುತ್ತದೆ.

ಬಿಜೆಪಿಗೆ ರಾಜ್ಯ ವಿಧಾನಸಭೆಯಲ್ಲಿ ಇರುವ ಬಹುಮತ ನಿಜವಾದ ಬಹುಮತವಲ್ಲ. ಅದು ಗಿಟ್ಟಿಸಿಕೊಂಡ ಕೃತಕ. ಬಹುಮತ ಬಿಜೆಪಿಗೆ ಜನಾದೇಶವೇ ಇರಲಿಲ್ಲ.

ಭ್ರಷ್ಟ ವಿಧಾನಗಳ ಮೂಲಕ ಅದು ಅಧಿಕಾರಕ್ಕೆ ಬಂತು ಮತ್ತೇ ಅಧಿಕಾರದಲ್ಲಿ ಮುಂದುವರೆಯುತ್ತಿರುವುದು ಲೋಕಾಯುಕ್ತರ ವರದಿಯ ನಂತರವಂತೂ. ಅದರ ನರನಾಡಿಗಳಲ್ಲಿ ಹರಿಯುತ್ತಿರುವುದು ಭ್ರಷ್ಟಾಚಾರ ಎಂಬುದು ಸಾಬೀತಾಗಿದೆ. ಬಿಜೆಪಿಯನ್ನು ಬೆಂಬಲಿಸಿದ ಜನಗಳೇ ಅದರತ್ತ ಈಗ ಅಸಹ್ಯಪಟ್ಟುಕೊಂಡು ಉಗುಳುತ್ತಿದ್ದಾರೆ. ಇಡೀ ಸರ್ಕಾರಕ್ಕೆ ಹಗರಣಗಳಲ್ಲಿ ಮುಳುಗಿರುವುದರಿಂದ ಸರ್ಕಾರವೇ ರಾಜೀನಾಮೆ ಕೊಟ್ಟು ಜನಾದೇಶ ಕೋರಲು ಮುಂದಾಗಬೇಕು. ಯಡಿಯೂರಪ್ಪನ ಬದಲು ಸದಾನಂದಗೌಡ ಬಂದರೂ, ಜಗದೀಶ್ ಶೆಟ್ಟರ್ ಬಂದರೂ, ಕೆ.ಎಸ್.ಈಶ್ವರಪ್ಪ ಬಂದರೂ, ಅನಂತಕುಮಾರ್ ಬಂದರೂ, ಅಥವಾ ಯಡಿಯೂರಪ್ಪ ಸೂಚಿಸುವ ಯಾರೊಬ್ಬ ಮುಖ್ಯಮಂತ್ರಿಯಾಗಿ ಬಂದರೂ ಪ್ರಸಕ್ತ ಸಮಸ್ಯೆಗೆ ಪರಿಹಾರ ದೊರೆಯದು. ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಲು ಜನ ಯಾರಿಗೆ ಅಧಿಕಾರ ನೀಡುತ್ತಾರೋ ಅವರು ಆ ಜವಾಬ್ದಾರಿ ವಹಿಸಬೇಕು. ಆದ್ದರಿಂದ ವಿಧಾನಸಭೆಗೆ ಚುನಾವಣೆ ಘೋಷಣೆ ಆಗಬೇಕು.

ಆದರೆ, ಈ ಕಾರಣಕ್ಕಾಗಿ ರಾಜ್ಯಪಾಲರು ಸಂವಿಧಾನದ 356ನೇ ಕಲಂ ಬಳಕೆ ಮಾಡಿ ಸರ್ಕಾರವನ್ನು ವಜಾಗೊಳಿಸಲು ಮುಂದಾಗಬಾರದು. ಸಂವಿಧಾನದ ಈ ವಿಧಿಯನ್ನು ಅನೇಕ ಬಾರಿ ಕೇಂದ್ರ ಸರ್ಕಾರ ದುರ್ಬಳಕೆ ಮಾಡಿದ್ದು ಇದೆ. ಇದಕ್ಕೆ ಕರ್ನಾಟಕದಲ್ಲಿ ಅವಕಾಶ ಕೊಟ್ಟರೆ ಮತ್ತೆ ಬೇರೆ ಕಡೆಗಳಲ್ಲಿಯೂ ಕೇಂದ್ರ ಸರ್ಕಾರ ಅದರ ದುರ್ಬಳಕೆ ಮಾಡಲು ಮುಂದಾಗ ಬಹುದು. ಅಂತಹ ಪ್ರಜಾಪ್ರಭುತ್ವ ಕ್ರಮಕ್ಕೆ ಅವಕಾಶ ಕೊಡದೆ ರಾಜ್ಯದಲ್ಲಿ

ಅಧಿಕಾರಕ್ಕೆ ಬರಬೇಕಾದರೆ ರಾಜ್ಯ ಬಿಜೆಪಿ ರಾಜೀನಾಮೆ ಕೊಟ್ಟು ಚುನಾವಣೆಗೆ ಅವಕಾಶ ಮಾಡಿಕೊಡಬೇಕು. ಲೋಕಾಯುಕ್ತರ ಆರೋಪಗಳಲ್ಲಿ ಏನೂ ಹುರುಳಿಲ್ಲ ಎಂದು ಜನತೆಯ ಮುಂದೆ ವಿಚಾರಣೆಗಳಲ್ಲಿ ತಾವು ನಿರಪರಾಧಿಗಳೆಂದು ಸಾಬೀತುಪಡಿಸಿ ಹೊರಬರಬಹುದು. ಆದ್ದರಿಂದ ರಾಜ್ಯದ ಹಿತದೃಷ್ಟಿಯಿಂದ ರಾಜ್ಯ ಬಿಜೆಪಿ ಸರ್ಕಾರ ರಾಜೀನಾಮೆ ನೀಡಬೇಕು. ಬಿಜೆಪಿ ಹೈ ಕಮಾಂಡಿಗೆ ನಿಜವಾಗಿಯೂ ಪ್ರಜಾಪ್ರಭುತ್ವದಲ್ಲಿ, ಜನಪರ ಆಡಳಿತ ನೀಡುವುದರಲ್ಲಿ ವಿಶ್ವಾಸ ಇದ್ದರೆ, ಮುಖ್ಯಮಂತ್ರಿ ಸ್ಥಾನಕ್ಕೆ ಹೊಸಬನನ್ನು ಹುಡುಕುವ ಸರ್ಕಸ್‌ನ್ನು ಬಿಟ್ಟು ರಾಜ್ಯ ಸರ್ಕಾರದ ರಾಜೀನಾಮೆಗೆ ಮುಂದಾಗಬೇಕು. ರಾಜ್ಯದ ಜನತೆ ಈ ದಿಕ್ಕಿನಲ್ಲಿ ತಮ್ಮ ಒತ್ತಡವನ್ನು ಹೆಚ್ಚಿಸಬೇಕು. □

ಯುಪಿಎ ದರ್ಬಾರ್ ...

ಪುಟ 12 ರಿಂದ

ಬೆಲೆಹತೋಟಿ: ಕೈಲಾಗದ ಮಂದಿಯ ಅಲ್ಪತನ

ಬಳಕೆದಾರರ ಬೆಲೆ ಸೂಚ್ಯಂಕ ಹೆಸರೇ ಸೂಚಿಸುವಂತೆ ದೇಶದಲ್ಲಿ ಬೆಲೆಯೇರಿಕೆಯ ಒಂದು ಸೂಚಕ. "ಇದನ್ನು ಲೆಕ್ಕ ಹಾಕಲು ಮಾಹಿತಿ ಸಂಗ್ರಹಿಸುವವರ ಸಂಬಳ ಇದೇ ಸೂಚ್ಯಂಕವನ್ನು ಆಧರಿಸಿರುವುದರಿಂದ ಇದನ್ನು ಹಿಗ್ಗಿಸುವ ಒಂದು ಪ್ರವೃತ್ತಿ ಅದರಲ್ಲಿ ಅಡಕವಾಗುತ್ತದೆ" ಎಂದು ಭಾರತ ಸರಕಾರದ ಹಣಕಾಸು ಇಲಾಖೆಯ ಮುಖ್ಯ ಆರ್ಥಿಕ ಸಲಹೆಗಾರ ಎಂಬ ಹುದ್ದೆಯಲ್ಲಿರುವ ಕೌಶಿಕ್ ಬಸು ಎಂಬಾತ ಹೇಳಿರುವುದಾಗಿ ವರದಿಯಾಗಿದೆ. ಈ ಮನುಷ್ಯನಿಗೆ ಬೆಲೆಯೇರಿಕೆಯನ್ನು ತಡೆಯುವ ಕ್ರಮಗಳ ಬಗ್ಗೆ 'ಸಲಹೆ' ನೀಡುವ ಸಾಮರ್ಥ್ಯವಿಲ್ಲ ಅಥವಾ ಆತ ಅಂಟಿಸಿ ಕೊಂಡಿರುವ ನವ-ಉದ್ಧಾರವಾದಿ ತತ್ವಗಳಿಂದಾಗಿ ಬೆಲೆಯೇರಿಕೆ ತಡೆಯುವ ಮನಸ್ಸೇ ಇರಲಿಕ್ಕಿಲ್ಲ, ಆದ್ದರಿಂದ ಈ ಮಾಹಿತಿ ಸಂಗ್ರಹಿಸುವವವರ ಪ್ರಾಮಾಣಿಕತೆಯನ್ನೇ ಪ್ರಶ್ನಿಸ ಹೊರಟಿದ್ದಾರೆ. ಇಂತಹ ಹೇಳಿಕೆಗಳನ್ನು ಕೊಡದಂತೆ ಈ ಸಲಹೆಗಾರನಿಗೇ ಸಲಹೆ ಕೊಡಬೇಕು ಎಂದು ಸರಕಾರೀ ನೌಕರರ ಸಂಘಟನೆಗಳ ಮುಖಂಡರು ಹಣಕಾಸು ಮಂತ್ರಿಗಳನ್ನು ಕೋರಿದ್ದಾರೆ. ವಾಸ್ತವವಾಗಿ ಈ ಬಳಕೆದಾರ ಬೆಲೆ ಸೂಚ್ಯಂಕದ ಲೆಕ್ಕಾಚಾರದಲ್ಲಿ ಇರುವ ದೋಷಗಳಿಂದಾಗಿ ಇದು ಬೆಲೆಯೇರಿಕೆಯ ಪ್ರಮಾಣವನ್ನು ಕುಗ್ಗಿಸಿ ಹೇಳುತ್ತದೆ ಎಂಬುದು ಬಹಳ ಕಾಲದಿಂದ ಇರುವ ಟೀಕೆ. ಹೀಗಿರುವಾಗ ಆರ್ಥಿಕ ಸಲಹೆಗಾರರದ್ದು ಒಂದು ಕುತ್ಸಿತ ಹೇಳಿಕೆ, ನವ-ಉದಾರವಾದಿ ನೀತಿಗಳ ದುಷ್ಪರಿಣಾಮ ಗಳನ್ನು ಮರೆಮಾಚಲಿಕ್ಕಾಗಿ ಸಾರ್ವಜನಿಕರಲ್ಲಿ ಗೊಂದಲ ಮೂಡಿಸಲು, ಆಮೂಲಕ ಜುಲೈ ತಿಂಗಳಲ್ಲಿ ಕೇಂದ್ರ ಮತ್ತು ರಾಜ್ಯಸರಕಾರಗಳ ನೌಕರರಿಗೆ ಸಲ್ಲಬೇಕಾದ ತುಟ್ಟಿಭತ್ಯೆ ಏರಿಕೆಯನ್ನು ನಿರಾಕರಿಸಲು ಕೊಟ್ಟಿರುವ ಹೇಳಿಕೆ ಎಂದು ಕೇಂದ್ರ ಸರಕಾರೀ ನೌಕರರ ಮತ್ತು ಸಂಘಗಳ ಮಹಾಒಕ್ಕೂಟದ ಮಹಾಕಾರ್ಯದರ್ಶಿ ಕೆ.ಕೆ. ಎನ್ ಕುಟ್ಟಿ ಮತ್ತು ಅಖಿಲ ಭಾರತ ರಾಜ್ಯ ಸರಕಾರೀ ನೌಕರರ ಒಕ್ಕೂಟದ ಹಿರಿಯ ಉಪಾಧ್ಯಕ್ಷ ಸುಕೋಮಲ್ ಸೇನ್ ಜಂಟಿ ಹೇಳಿಕೆಯಲ್ಲಿ ಟೀಕಿಸಿದ್ದಾರೆ. □

ಜಗದಗಲ

ಶರತ್‌ಚಂದ್ರ

ಅಂತರ್ರಾಷ್ಟ್ರೀಯ ಕೃಷಿ ಟಿಯು ಸಮ್ಮೇಳನ "ಪ್ಯಾರೀಸಿನ ಕರೆ"

ಇತ್ತೀಚೆಗೆ (ಜೂನ್ 20–27) ಪ್ಯಾರೀಸಿನಲ್ಲಿ 3 ನೇ ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳ ಕಾರ್ಮಿಕರ ಟ್ರೇಡ್ ಯೂನಿಯನುಗಳ 3 ನೇ ಅಂತರ್ರಾಷ್ಟ್ರೀಯ ಸಮ್ಮೇಳನ ನಡೆಯಿತು. ಇದರಲ್ಲಿ 82 ದೇಶಗಳಿಂದ ಬಂದ 150 ಪ್ರತಿನಿಧಿಗಳು ಭಾಗವಹಿಸಿದ್ದರು. ವಿಶ್ವವ್ಯಾಪಿ ಕೃಷಿ, ಆಹಾರ, ವಾಣಿಜ್ಯ, ಜವಳಿ ಮತ್ತು ಸಂಬಂಧಿತ ಕ್ಷೇತ್ರಗಳ ಕಾರ್ಮಿಕರ ಈ ಸಮ್ಮೇಳನ "ಪ್ರಜಾಸತ್ತೆ, ಸಾಮಾಜಿಕ ಪ್ರಗತಿ, ಹೋರಾಟಗಳು, ಶಾಂತಿ ಮತ್ತು ಸೌಹಾರ್ದತೆ" ಗಳ ಬ್ಯಾನರಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಸಮ್ಮೇಳನ ಜಾಗತಿಕ ಕೃಷಿ ಬಿಕ್ಕಟ್ಟನ್ನು ವಿವರವಾಗಿ ಚರ್ಚಿಸಿತು. ಕೃಷಿಯನ್ನು ಬಾಧಿಸುತ್ತಿರುವ ತತ್ ಕ್ಷಣದ ಬೇಡಿಕೆಗಳು ಮತ್ತು ಆರ್ಥಿಕ ಅಂಶಗಳನ್ನು ಎತ್ತಿಕೊಂಡು ಹೋರಾಟ ಮಾಡಿದರೆ ಸಾಲದು. ಈ ಬಿಕ್ಕಟ್ಟು ಉಂಟು ಮಾಡುವ ಸಾಮಾಜಿಕ–ರಾಜಕೀಯ ಸನ್ನಿವೇಶವನ್ನು ಗಮನಕ್ಕೆ ತೆಗೆದುಕೊಳ್ಳದೆ, ಕೃಷಿ ಮತ್ತು ಸಂಬಂಧಿತ ಕಾರ್ಮಿಕರ ಸಮಸ್ಯೆಗಳಿಗೆ ದೂರಗಾಮಿ ಪರಿಹಾರಗಳನ್ನೂ ಕಂಡುಕೊಳ್ಳಲೂ ಸಾಧ್ಯವಿಲ್ಲ. ಜಾಗತಿಕ ಕೃಷಿ ಆರ್ಥಿಕದ ಬಿಕ್ಕಟ್ಟನ್ನು ನಿವಾರಿಸಲೂ ಸಾಧ್ಯವಿಲ್ಲ. ಇದು ಸಮ್ಮೇಳನ ಪ್ರತಿನಿಧಿಗಳ ಮೂಲಕ, ಜಗತ್ತಿನ ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳ ಕಾರ್ಮಿಕರಿಗೆ ನೀಡಿದ ಸಂದೇಶವಾಗಿತ್ತು.

2004 ರಲ್ಲಿ ನಡೆದ 2 ನೇ ಸಮ್ಮೇಳನಕ್ಕಿಂತ (53 ದೇಶಗಳಿಂದ ಬಂದ) ಪ್ರತಿನಿಧಿಗಳ ಸಂಖ್ಯೆ ಹೆಚ್ಚು ಕಡಿಮೆ ಇಮ್ಮಡಿಯಾಗಿತ್ತು. ಇದಕ್ಕೆ ಹಲವು ಕಾರಣಗಳಿವೆ. ಈ ಅವಧಿಯಲ್ಲಿ ಹೆಚ್ಚೆಚ್ಚು ದೇಶಗಳ ಕೃಷಿ ಸಂಬಂಧಿತ ಕಾರ್ಮಿಕರು ಮತ್ತು ಗ್ರಾಮೀಣ ರೈತಾಪಿ ಜನತೆಯನ್ನು ದಿವಾಳಿ ಎಬ್ಬಿಸಿದೆ. ಜಾಗತಿಕ ಬಂಡವಾಳ ಐ.ಎಂ.ಎಫ್. ಶರತ್ತುಗಳ ಮೂಲಕ, ಸರ್ಕಾರಗಳು ವ್ಯಾಪಾರಿಗಳು ಕೆಲವು ಕೃಷಿ ಯೂನಿಯನುಗಳನ್ನೂ ಸಹ ಶಾಮೀಲು ಮಾಡಿಕೊಳ್ಳುವ ಮೂಲಕ ತನ್ನ ಕಬಂಧ ಬಾಹುಗಳನ್ನು ವಿಶ್ವಾದ್ಯಂತ ಹರಡಿದೆ. ಇವರಿಗೆ ಬದಲಿ ನೀತಿಗಳಿಗೆ ಹೋರಾಡುವುದು ಬಿಟ್ಟರೆ ಯಾವುದೇ ದಾರಿ ಉಳಿದಿಲ್ಲ. ಆದರೆ ಇಂತಹ ಪ್ರತಿರೋಧ ಸ್ಥಳೀಯ, ಪ್ರಾಂತೀಯ ಅಥವಾ ದೇಶದ ಮಟ್ಟದಲ್ಲಿ ಮಾತ್ರ ಮಾಡಿದರೆ ಸಫಲವಾಗದಿರುವ ಸನ್ನಿವೇಶ ಇದೆ. ಪ್ರಾದೇಶಿಕ, ಜಾಗತಿಕ ಸಂಯೋಜಿತ ಪ್ರತಿರೋಧ, ಬದಲಿ ರೂಪಿಸುವಿಕೆ ಅನಿವಾರ್ಯವಾಗಿದೆ. ಬಡ ದೇಶಗಳ ಸಾಲ ಮನ್ನಾ, ಆಹಾರ ಭದ್ರತೆಗೆ, ಕ್ರಾಂತಿಕಾರಿ ಭೂಸುಧಾರಣೆ, ಆಹಾರ ಬೆಳೆಗಳಿಗೆ ಭೂಮಿ ಮೀಸಲಾತಿ, ಕೃಷಿ ಲಾಗುವಾಡು ಮತ್ತು ಉತ್ಪನ್ನಗಳ ಬೆಲೆಗಳ ಮೇಲೆ ಜಾಗತಿಕ ಮಾರುಕಟ್ಟೆಗಳ ಹಿಡಿತ ಬಿಡಿಸುವ ನೀತಿಗಳು, ಸರ್ಕಾರದ ಪ್ರೋತ್ಸಾಹದೊಂದಿಗೆ ಸಹಕಾರಿ ಕೃಷಿ, ವ್ಯಾಪಕ ರೇಶನ್ ವ್ಯವಸ್ಥೆ ? ಮುಂತಾದ ಬದಲಿ ನೀತಿಗಳಿಗೆ ಹೋರಾಡಬೇಕಾಗಿದೆ. ಇಂತಹ ಬದಲಿ ನೀತಿಗಳಿಗೆ ಹೋರಾಡಲು ಪ್ರಾದೇಶಿಕ (ಉದಾ: ದಕ್ಷಿಣ ಏಶ್ಯಾ), ಖಂಡ (ಉದಾ: ಏಶ್ಯಾ) ಸಂಘಟನೆಗಳನ್ನು ಕಾರ್ಯಕ್ರಮಗಳನ್ನು ಸಂಘಟಿಸಲು ಸಮ್ಮೇಳನ ಕರೆ ಕೊಟ್ಟಿದೆ. ಏಶ್ಯಾದಲ್ಲಿ ಇಂತಹ ಸಮ್ಮೇಳನ ನಡೆಸುವ ಜವಾಬ್ದಾರಿಯನ್ನು ಭಾರತದ ಪ್ರತಿನಿಧಿಗಳು ವಹಿಸಿಕೊಂಡರು.

"ಪ್ಯಾರಿಸಿನ ಕರೆ"

ಪ್ರಸಿದ್ಧ "ಪ್ಯಾರಿಸ್ ಕಮ್ಯೂನ್" ನ 140 ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಸಮ್ಮೇಳನ "ಪ್ಯಾರಿಸಿನ ಕರೆ" ಎಂಬ ಹೇಳಿಕೆ ಹೊರಡಿಸಿತು. "ಪ್ಯಾರಿಸ್ ಕಮ್ಯೂನ್" ಸ್ಫೂರ್ತಿ ಪಡೆದು ಬಂಡವಾಳಶಾಹಿ ಮತ್ತು ಪಾಳೆಯಗಾರಿಶಾಹಿಯನ್ನು ಕಿತ್ತೊಗೆಯಲು ಎಲ್ಲಾ ಕಾರ್ಮಿಕರ ಐಕ್ಯತೆ–ಹೋರಾಟಕ್ಕೆ "ಕರೆ" ಒತ್ತು ನೀಡಿದೆ. ಕೃಷಿ–ವಾಣಿಜ್ಯ ಬಹು ರಾಷ್ಟ್ರೀಯ ಕಂಪನಿಗಳು ಮತ್ತು ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆಗಳ ದುಷ್ಟಕೂಟದ ಮೂಲಕ, ಸಾಮ್ರಾಜ್ಯಶಾಹಿ ಆಹಾರವನ್ನು ಬಡ ದೇಶಗಳು ಮತ್ತು ಬಡ ಜನತೆಯ ವಿರುದ್ಧ ಒಂದು ಅಸ್ತ್ರವಾಗಿ ಬಳಸುತ್ತಿದೆ. ಗ್ರಾಮೀಣ ರೈತಾಪಿ ಮತ್ತಿತರ ಉತ್ಪಾದಕರು ಒಂದು ಉತ್ಪಾದಕ ಶಕ್ತಿಯಾಗಿ ಅಳಿಸಿ ಹಾಕಲು ಹೊರಟಿದೆ. ಅದರ ವಿರುದ್ಧ ವ್ಯಾಪಕ ಪ್ರತಿರೋಧ ಒಡ್ಡಬೇಕು. ಅದಕ್ಕಾಗಿ ಬದಲಿ ನೀತಿಗಳಿಗೆ ಹೋರಾಡಬೇಕು. ಆಹಾರ ಸಾರ್ವಭೌಮತೆಯ ಪರಿಕಲ್ಪನೆ ವಿಮೋಚನೆಯ ಒಂದು ಅಸ್ತ್ರ ಎಂದು "ಕರೆ" ಹೇಳಿದೆ.

ಉತ್ತರ ಅಮೆರಿಕ ಮತ್ತು ಯುರೋಪುಗಳಲ್ಲದೆ, ಆಫ್ರಿಕಾ (29) ಏಶ್ಯಾ (20) ಮತ್ತು ಲ್ಯಾಟಿನ ಅಮೆರಿಕ (17) ಗಳಿಂದ ಪ್ರತಿನಿಧಿಗಳು ಬಂದಿದ್ದರು. ಅಖಿಲ ಭಾರತ ಕಿಸಾನ ಸಭಾದ ಪ್ರಧಾನ ಕಾರ್ಯದರ್ಶಿ ಎಸ್.ಆರ್.ಪಿಳ್ಳೆ ಈ ಅಂತರ್ರಾಷ್ಟ್ರೀಯ ಟಿಯು ಸಂಘಟನೆಯ ಉಪಾಧ್ಯಕ್ಷರಾಗಿ ಮತ್ತು ಕೃಷಿ ಕೂಲಿಕಾರರ ಸಂಘದ ಸುನೀತ್ ಚೋಪ್ರಾ ಕಾರ್ಯಕಾರಿ ಮಂಡಳಿಯ ಸದಸ್ಯರಾಗಿ ಪುನರಾಯ್ಕೆಯಾದರು. ಕೃಷಿ ಕಾರ್ಮಿಕರ ಯೂನಿಯನುಗಳ ಚಳುವಳಿ ಪ್ರಬಲವಾಗಿರುವ ಯುರೋಪು, ಏಶ್ಯಾ, ಉತ್ತರ ಮತ್ತು ಲ್ಯಾಟಿನ್ ಅಮೆರಿಕಗಳಲ್ಲದೆ ಆಫ್ರಿಕಾದ ಸೆನೆಗಲ್, ಕಾಂಗೋ, ಮಾಲಿ, ಜಿಂಬಾಬ್ವೆ ಮತ್ತು ಈಜಿಪ್ಟಿನಿಂದ ಪ್ರತಿನಿಧಿಗಳು ಬಂದಿದ್ದು ಗಮನಾರ್ಹವಾಗಿತ್ತು. ಸೆನೆಗಾಲ್ ನ ಅಲಿಯೋನಾದಿಯೇ ಅವರನ್ನು ಅಧ್ಯಕ್ಷರಾಗಿ, ಫ್ರಾನ್ಸಿನ ಜೂಲಿಯನ್ ಹಕ್ ಅವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಆರಿಸಲಾಯಿತು. ಈ ಸಂಘಟನೆಯ ಚರಿತ್ರೆಯಲ್ಲೇ ಮೊದಲ ಬಾರಿಗೆ, ಟುನಿಶಿಯಾದ ಸವುದ್ ಮಹಮೂದ್ ಅವರು ಕಾರ್ಯಕಾರಿ ಸಮಿತಿಯ ಮಹಿಳಾ ಸದಸ್ಯರಾಗಿ ಆಯ್ಕೆಯಾದರು. ○

ಸೋಮಾಲಿಯಾದಲ್ಲಿ ಹಸಿವು ಸಾವುಗಳು

"ಆಫ್ರಿಕಾದ ಕೊಂಬು" ಎಂದು ಕರೆಯಲಾಗುವ ಉತ್ತರ ಆಫ್ರಿಕಾದ ಪ್ರದೇಶದ ದೇಶ ಸೋಮಾಲಿಯಾದಲ್ಲಿ ದೊಡ್ಡ ಸಂಖ್ಯೆಯಲ್ಲಿ ಹಸಿವು–ಸಾವುಗಳು ಆಗುತ್ತಿವೆ. ಹಸಿವು–ಸಾವುಗಳು ಈ ಪ್ರದೇಶದಲ್ಲಿ ಅಪರೂಪವೇನು ಅಲ್ಲದಿದ್ದರೂ, ವಿಶ್ವಸಂಸ್ಥೆ ಇದು "ಹಸಿವು ಪೀಡಿತ ಪ್ರದೇಶ" ಎಂದು ಘೋಷಿಸಿದೆ. ಪ್ರತಿ ದಿನ ಹತ್ತು ಸಾವಿರ ಜನರಲ್ಲಿ ಎರಡಕ್ಕಿಂತ ಹೆಚ್ಚು ಹಸಿವು–ಸಾವುಗಳು ಆದರೆ, ವಿಶ್ವಸಂಸ್ಥೆ ಅಂತಹ ಪ್ರದೇಶವನ್ನು "ಹಸಿವು ಪೀಡಿತ ಪ್ರದೇಶ" ಘೋಷಿಸುತ್ತದೆ. ಸೋಮಾಲಿಯಾದಲ್ಲಿ ಕಳೆದ ಕೆಲವು ವಾರಗಳಲ್ಲಿ ಪ್ರತಿ ದಿನ 10 ಸಾವಿರ ಜನರಲ್ಲಿ 6 ಕ್ಕಿಂತ ಹೆಚ್ಚು ಹಸಿವು–ಸಾವುಗಳು ಸಂಭವಿಸುತ್ತಿವೆ.

1990 ರ ದಶಕದಿಂದಲೂ ತೀವ್ರ ಆಹಾರ ಬಿಕ್ಕಟ್ಟು ಅನುಭವಿಸುತ್ತಿದ್ದರೂ ಸೊಮಾಲಿಯಾ, 1992 ರ ನಂತರ ಮೊದಲ ಬಾರಿಗೆ "ಹಸಿವು ಪೀಡಿತ ಪ್ರದೇಶ" ಎಂದು ಘೋಷಿಸಲಾಗಿದೆ. ಸಾವಿರಾರು ಜನ ರಾಜಧಾನಿ ಮೊಗಾದಿಶು ಮತ್ತು ಗಡಿ ದಾಟಿ ನೆರೆಯ ಇಥೀಯಪಿಯಾ ಮತ್ತು ಕೆನ್ಯಾಕ್ಕೆ ವಲಸೆ ಹೋಗುತ್ತಿದ್ದಾರೆ. ಸೊಮಾಲಿಯಾದಲ್ಲಿ ಇನ್ನೂ ನಡೆಯುತ್ತಿರುವ ಆಂತರಿಕ ಯುದ್ಧ ಮತ್ತು ರಾಜಕೀಯ ಅಭದ್ರತೆಯಿಂದ ಪರಿಹಾರ ಕ್ರಮಗಳಿಗೆ ಇನ್ನಷ್ಟು ಅಡ್ಡಿಯಾಗಿದೆ. ಕೆನ್ಯಾದಲ್ಲಿ ಇರುವ ನಿರಾಶ್ರಿತರ ಕ್ಯಾಂಪುಗಳು ಆಗಲೇ ತುಂಬಿ ತುಳುಕುತ್ತಿವೆ. 90 ಸಾವಿರ ಸಾಮರ್ಥ್ಯ ಇರುವ ಕ್ಯಾಂಪುಗಳಲ್ಲಿ 3.7 ಲಕ್ಷ ಹಸಿದ ಜನ ನೆರೆದಿದ್ದಾರೆ. ಹಲವು ವಾರಗಳ ಕಾಲ ನಡೆದು ಈ ಕ್ಯಾಂಪುಗಳಿಗೆ ಬರುತ್ತಿದ್ದಾರೆ. ಸೊಮಾಲಿಯಾದ ಅರ್ಧದಷ್ಟು ಜನಕ್ಕೆ (ಸುಮಾರು 37 ಲಕ್ಷ) ತುರ್ತು ಆಹಾರ ಪೂರೈಕೆ ಅಗತ್ಯ ಇದೆ. ಈ ಪ್ರದೇಶದ ಇತರ ದೇಶಗಳು ಸೇರಿದಂತೆ ಸುಮಾರು 110 ಲಕ್ಷ ಜನ "ಹಸಿವು ಪೀಡಿತ ಪ್ರದೇಶ" ಆಗುವ ಅಂಚಿನಲ್ಲಿದ್ದಾರೆ. ಅವರಿಗೂ ತುರ್ತು ಆಹಾರ ಪೂರೈಕೆ ಅಗತ್ಯ ಇದೆ.



ತೀವ್ರ ಮಳೆಯ ಅಭಾವ, ಆಹಾರ ದಾಸ್ತಾನಿನ ಅಭಾವ ಮತ್ತು ಆಹಾರ ಬೆಲೆಗಳ ವಿಪರೀತ ಏರಿಕೆ ಇಂತಹ ಗಂಭೀರ ಪರಿಸ್ಥಿತಿಗೆ ಕಾರಣವಾಗಿದೆ. ಆದರೂ ಸೊಮಾಲಿಯಾದ ಸರ್ಕಾರವಾಗಲಿ, ವಿಶ್ವದ ಶ್ರೀಮಂತ ಸರ್ಕಾರಗಳಾಗಲಿ ಈ ಭೀಕರ ಪರಿಸ್ಥಿತಿಗೆ ತಕ್ಕ ಪರಿಹಾರದ ಯೋಚನೆ ಮಾಡುತ್ತಿಲ್ಲ. ದಕ್ಷಿಣ ಸೊಮಾಲಿಯಾದಲ್ಲಿ ಅಲ್–ಶಬಾಬ್ ಎಂಬ ಇಸ್ಲಾಮಿಕ್ ಸಂಘಟನೆ ಕಳೆದ ವಾರದ ವರೆಗೆ ಯಾವುದೇ ಪರಿಹಾರ ಕ್ರಮಗಳಿಗೆ ಅವಕಾಶ ಕೊಡುತ್ತಿರಲಿಲ್ಲ. ಅವರ ಮೇಲೂ ದಾಳಿ ಮಾಡುತ್ತಿದ್ದರು. ಹಲವಾರು ಪರಿಹಾರ ಕಾರ್ಯಕರ್ತರು ಪ್ರಾಣ ಕಳೆದುಕೊಂಡಿದ್ದಾರೆ. ○

ಜನಶಕ್ತಿ
ಕನ್ನಡ ವಾರಪತ್ರಿಕೆ


ಸಂಪಾದಕೀಯ...

ಪುಟ 3 ರಿಂದ

ಸದಾನಂದಗೌಡ, ಜಗದೀಶ್ ಶೆಟ್ಟರ್, ಶೋಭಾ ಕರಂದ್ಲಾಜೆ, ಅನಂತಕುಮಾರ್ ಇವರೆಲ್ಲರೂ ಅಕ್ರಮ-ಭ್ರಷ್ಟಾಚಾರ-ಹಗರಣಗಳ ಆರೋಪಿಗಳೇ. ಇಂತಹವರು ಅಧಿಕಾರದ ಚುಕ್ಕಾಣಿ ಹಿಡಿಯುವುದು ನೈತಿಕವಾಗಿ, ಕಾನೂನಾತ್ಮಕವಾಗಿ ಎಷ್ಟು ಸರಿ? ಆದರೆ ಬಿಜೆಪಿ ಇನ್ನುಳಿದ ಒಂದೂವರೆ ವರುಷವೂ ಅಧಿಕಾರ ಅನುಭವಿಸಲು, ಲೂಟಿ ಮುಂದುವರಿಸಲು ಹಾತೊರೆಯುತ್ತಿದೆ. ಮುಖ್ಯಮಂತ್ರಿ ಆಯ್ಕೆಯ ವಿಚಾರದಲ್ಲಿ ಜಾತಿ ಭಾವನೆ ಕೆರಳಿಸಿ ದುರ್ಲಾಭ ಹೊಡೆಯಲು ಸಹ ಹೊಂಚುಹಾಕಿದೆ.

ಈ ಸಂದರ್ಭದಲ್ಲಿ ಇಂತಹ ಯಾವುದೇ ಕ್ರಮಗಳೂ ಜನರ ಕಣ್ಣಿಗೆ ಮಣ್ಣೆರೆಚುವ ಮಹಾವಂಚನೆಯಾಗಿದೆ. ಇದೇ ಹೊತ್ತಿನಲ್ಲಿ ಯಡಿಯೂರಪ್ಪ ಅಧಿಕಾರ ತ್ಯಜಿಸುವುದೇ ಎಲ್ಲದಕ್ಕೂ ಪರಿಹಾರವಲ್ಲ, ಬದಲಾಗಿ ಆರೋಪಿತರೆಲ್ಲಾ ಕಾನೂನಿನಂತೆ ವಿಚಾರಣೆಗೆ ಒಳಗಾಗಿ ಮಾಡಿದ ಅಪರಾಧ, ದ್ರೋಹಗಳಿಗೆ ಶಿಕ್ಷೆ ಅನುಭವಿಸುವಂತಾಗಬೇಕು. ದೇಶಕ್ಕೆ ವಂಚಿಸಿದ ಸಾವಿರಾರು ಕೋಟಿ ರೂಪಾಯಿಗಳನ್ನು ಅಕ್ರಮ ಆಸ್ತಿಯನ್ನು ಮುಟ್ಟುಗೋಲು ಹಾಕುವಂತಾಗಬೇಕು. ಆದ್ದರಿಂದ ಈ ಸರ್ಕಾರ ಇಡಿಯಾಗಿ ರಾಜೀನಾಮೆ ನೀಡಿ ಹೊಸ ಜನಾದೇಶವನ್ನು ಪಡೆಯಬೇಕು. ಸರ್ಕಾರವನ್ನೇ ತೊಲಗಿಸುವಂತಾಗಲು ಪ್ರಬಲ ಜನಾಂದೋಲನ ಅತ್ಯಗತ್ಯ.

ಈ ಅಕ್ರಮ ಗಣಿಗಾರಿಕೆ, ಭೂ ದಂಧೆ ಮಾಫಿಯಾಗಳ ಹಣ ಕರ್ನಾಟಕದ ರಾಜಕೀಯ, ಆರ್ಥಿಕ ಜನಜೀವನವನ್ನೇ ಕಲುಷಿತಗೊಳಿಸಿದೆ. ಪ್ರಜಾಪ್ರಭುತ್ವವನ್ನೇ ನಾಶ ಗೊಳಿಸುತ್ತಾ ಸಂವಿಧಾನ-ಕಾನೂನುಬದ್ಧ ಆಡಳಿತಕ್ಕೆ ಬೆದರಿಕೆಯಾಗಿದೆ. ಇದಕ್ಕೆ ಕಡಿವಾಣ ಹಾಕಲೇಬೇಕು. ಆದರೆ ಇದರಲ್ಲಿ ಪಾಲುದಾರರಾಗಿರುವ ಕಾಂಗ್ರೆಸ್-ಬಿಜೆಪಿಗಳಿಗೆ ಅಂತಹ ಕ್ರಮ ಕೈಗೊಳ್ಳುವುದುಬೇಕಿಲ್ಲ. ಸ್ವಾವಲಂಬನೆ ನಾಡಿನ ಸಂಪತ್ತು ಉಳಿಸಿ ರಕ್ಷಿಸುವ ಹೊಸ ಗಣಿ ನೀತಿಯನ್ನು ತರಲು ಸಿದ್ಧವಿಲ್ಲ. ಇವರಿಗೆ ಅಕ್ರಮಗಳನ್ನು ದಮನಿಸುವುದು ಬೇಕಾಗಿಲ್ಲ. ಕನಿಷ್ಠ ಆಮದು-ರಫ್ತು ನಿಯಂತ್ರಿಸಿ ಸರ್ಕಾರಿ ಸ್ವಾಮ್ಯದ ಕಂಪನಿಗಳ ಮೂಲಕ ವಹಿವಾಟು ನಡೆಸುವ ರಾಷ್ಟ್ರೀಕರಣದ ಕ್ರಮವನ್ನಾದರೂ ಅನುಸರಿಸಬೇಕು. ಆದರೆ ಉದಾರೀಕರಣದಲ್ಲಿ ತಿಂದುಂಡು ತೇಗುವ ಈ ಖೂಳರಿಂದ ಅದನ್ನು ನಿರೀಕ್ಷಿಸುವುದು ಅಸಾಧ್ಯ. ಆದ್ದರಿಂದಲೇ ರಾಜ್ಯದಲ್ಲಿ ಪರ್ಯಾಯಕ್ಕಾಗಿ ಜನಾಂದೋಲನವೇ ಬೇಕು. ○



ಹಗರಣಗಳ ಆಗರವಾಗಿರುವ ಬಿಜೆಪಿ ಸರ್ಕಾರದ ರಾಜೀನಾಮೆ, ಹೊಸ ಜನಾದೇಶಕ್ಕೆ ಆಗ್ರಹಿಸಿ ರಾಜ್ಯದಾದ್ಯಂತ ಪ್ರತಿಭಟನೆ -ಸಭೆಗಳು

ಲೋಕಾಯುಕ್ತ ವರದಿಯ ಹಿನ್ನೆಲೆಯಲ್ಲಿ ಇಡೀ ಸರ್ಕಾರವೇ ರಾಜೀನಾಮೆ ಸಲ್ಲಿಸಬೇಕೆಂದು ಹಾಗೂ ಭಾಗಿಯಾಗಿರುವ ಎಲ್ಲರ ಮೇಲೂ ಕಾನೂನಾತ್ಮಕ ಕ್ರಮಗಳನ್ನು ಜರುಗಿಸಬೇಕೆಂದು ಆಗ್ರಹಿಸಿ ರಾಜ್ಯಾದ್ಯಂತ ಪ್ರತಿಭಟನಾ ಧರಣಿ-ಬಹಿರಂಗ ಸಭೆಗಳನ್ನು ನಡೆಸಬೇಕೆಂದು ಸಿಪಿಐ(ಎಂ) ರಾಜ್ಯ ಸೆಕ್ರಟಾರಿಯೇಟ್ ಕರೆ ನೀಡಿದೆ.

ಜುಲೈ 28 ರಿಂದ ಆಗಸ್ಟ್ 7ರೊಳಗೆ ಇಂತಹ ಸಭೆಗಳು ಜಿಲ್ಲಾ ಕೇಂದ್ರಗಳು, ಪ್ರಮುಖ ತಾಲ್ಲೂಕುಗಳಲ್ಲಿಯೂ ನಡೆಯಲಿವೆ. ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು ಈ ಸಭೆಗಳಲ್ಲಿ ಭಾಗವಹಿಸಲಿದ್ದಾರೆ. ಬಿಜೆಪಿ ಸರ್ಕಾರದ ಎಲ್ಲಾ ಅಕ್ರಮ ಹಗರಣ, ಜನದ್ರೋಹಿ ನೀತಿ, ವಿವರಿಸಿ ಹೊಸದಾಗಿ ಜನಾದೇಶ ಪಡೆಯಬೇಕೆಂದು ಆಗ್ರಹಿಸಲಿದ್ದಾರೆ. ಲೋಕಾಯುಕ್ತ ವರದಿಯ ಮುಖ್ಯ ಅಂಶಗಳನ್ನು, ವಿವರಿಸಲಿದ್ದಾರೆ. ಪರ್ಯಾಯ ನೀತಿಗಳಿಗಾಗಿ ಒತ್ತಾಯಿಸಲಿದ್ದಾರೆ. ನಿರಂತರವಾಗಿ, ಭ್ರಷ್ಟಾಚಾರ, ಹಗರಣಗಳ ವಿರುದ್ಧ, ವಿಶೇಷವಾಗಿ ಅಕ್ರಮ ಗಣಿಗಾರಿಕೆ-ಸಾಗಾಣಿಕೆಗಳ ಕೇಂದ್ರವಾಗಿರುವ ಬಳ್ಳಾರಿಯಲ್ಲಿ ಜಿಲ್ಲೆಯಲ್ಲಿ ಮೊಟ್ಟಮೊದಲ ಬಾರಿಗೆ ಇಂತಹ ಅಕ್ರಮಗಳನ್ನು ಬೆಳಕಿಗೆ ತಂದಿರುವ ಸಿಪಿಐ(ಎಂ) ತನ್ನ ಹೋರಾಟವನ್ನು ಇನ್ನಷ್ಟು ವ್ಯಾಪಕವಾಗಿ ತೀವ್ರಗೊಳಿಸಲು ನಿರ್ಧರಿಸಿದೆ.

ಬಾಂಗ್ಲಾದೇಶದ ಚಲನಚಿತ್ರಗಳ ಹಬ್ಬ

ಪುಟ 16 ರಿಂದ

ಒಂದನ್ನು ಬದಲಾಯಿಸಲು ಹೋದಾಗ, ಗಂಡನ ಕೈಯಲ್ಲಿ ಹೊಡೆತವನ್ನು ತಿಂದ ಅವನ ಹೆಂಡತಿಯು ಆತ್ಮಹತ್ಯೆ ಮಾಡಿಕೊಳ್ಳಲು ಸಿದ್ಧಳಾಗುತ್ತಾಳೆ. ಆದರೆ ಅವಳು ಹಾಗೆ ಮಾಡದೆ, ಪ್ರತೀಕಾರವಾಗಿ ಮಿಕ್ಕಿದ್ದ ನೋಟುಗಳೆಲ್ಲವನ್ನೂ ಸುಟ್ಟುಹಾಕುತ್ತಾಳೆ. ಇತ್ತ ಬ್ಯಾಂಕಿನಲ್ಲಿ ಫಜ್ಲು ಮತ್ತು ಅವನ ಸ್ನೇಹಿತ 'ಮೆಂಬರ್'ಗೆ ಆಘಾತ ಕಾದಿರುತ್ತದೆ. ಆ ನೋಟುಗಳು ಝ್ಯುರೇ ರಾಜ್ಯವನ್ನು ಮೊಬತು ಆಳಿದಾಗ ಚಲಾವಣೆಯಲ್ಲಿತ್ತೆಂದೂ, ಮೊಬತೂ ರಾಜ್ಯ ಕಳೆದುಕೊಂಡಮೇಲೆ ಈ ನೋಟುಗಳಿಗೆ ಬೆಲೆಯಿಲ್ಲವೆಂದೂ ಬ್ಯಾಂಕಿನವರು ಹೇಳುತ್ತಾರೆ. ನಿರಾಶನಾದ ಫಜ್ಲೂ ಮನೆಗೆ ಬಂದು ಮಿಕ್ಕ ನೋಟುಗಳನ್ನು ಕೇಳಿದಾಗ, ಅವನ ಹೆಂಡತಿ ಸುಟ್ಟ ಬೂದಿಯನ್ನು ಅವನಿಗೆ ಕೊಡುತ್ತಾಳೆ. ಇಬ್ಬರೂ ಕುಸಿದು ಬೀಳುತ್ತಾರೆ. ಕನಸು ಬೂದಿಯಾದ ಮೇಲೆ, ಆಸೆಯೆಂಬ ರೆಕ್ಕೆಯಮೇಲೆ ಹಾರುತ್ತಿದ್ದ ಅವರಿಬ್ಬರೂ ಕೆಳಗಿಳಿದು, ಬಡತನದ ಹೊಸಜೀವನವನ್ನು ಆರಂಭಿಸುತ್ತಾರೆ.

ಒಪೇಕ್ಕ(ನಿರೀಕ್ಷೆ, ನಿರ್ದೇಶನ: ಅಬು ಸಯೀದ್). ಈ ಚಿತ್ರವು ಇಸ್ಲಾಂ ಹೋರಾಟವನ್ನು ಸಮಕಾಲೀನ ದೃಷ್ಟಿಯಿಂದ ಯೋಚಿಸುತ್ತದೆ. ಇಬ್ಬರು ಯುವಕರು, ರೋಬುಲ್ ಮತ್ತು ರಂಜು ಬೇರೆ ಬೇರೆ ದಾರಿಯಲ್ಲಿ ಹೋಗಲು ನಿರ್ಧರಿಸುತ್ತಾರೆ. ರೋಬುಲ್ ಹಾಡುಗಾರನಾಗ ಬೇಕೆಂದು, ತನ್ನ ಅಜ್ಜಿಯನ್ನು ಗ್ರಾಮದಲ್ಲಿ ಬಿಟ್ಟು, ಢಾಕಾ ನಗರಕ್ಕೆ ಹೋಗುತ್ತಾನೆ. ರಂಜು, ಒಬ್ಬ ವಿಜ್ಞಾನದ ವಿದ್ಯಾರ್ಥಿ, ಇಸ್ಲಾಂ ಆತಂಕವಾದಿ ಗುಂಪನ್ನು ಸೇರಿ, ವಿಮುಖನಾಗಿ, ತನ್ನ ಹೆತ್ತವರೊಂದಿಗೂ ಹೆಚ್ಚು ಮಾತನಾಡುವುದಿಲ್ಲ. ರೋಬುಲ್ ಒಂದು ಕಛೇರಿಯಲ್ಲಿ ಹಾಡುತ್ತಿದ್ದಾಗ, ರಂಜುನ ಸ್ಫೋಟಕವಸ್ತುವೊಂದು ಅವನನ್ನು ಕೊಲ್ಲುತ್ತದೆ. ರಂಜುನ ತಂದೆತಾಯಿಗೆ ಅವನ ಗೂಢ ಕೃತ್ಯಗಳು ಗೊತ್ತಾಗುವುದು ಪೋಲೀಸರು ಅವರ ಮನೆಯನ್ನು ಶೋಧಿಸಿದಾಗ. ಅವರು ಅವನಿಗೆ ಹಿಂತಿರುಗಿ ಬರುವಂತೆ ಕೇಳಿಕೊಳ್ಳುತ್ತಾರೆ. ಆದರೆ ರಂಜುವಿಗೆ ತೊರೆದು ಬರುವುದರಲ್ಲಿನ ಅಪಾಯ ಗೊತ್ತು. ಅವನು ಗುಂಪನ್ನು ತೊರೆಯಲು ಸಿದ್ಧನಾಗಿದ್ದ ಒಬ್ಬ ಯುವಕನ ಹತ್ಯೆಯನ್ನು ನೋಡಿದ್ದ. ಈ ಚಿತ್ರದಲ್ಲಿ ಎಲ್ಲರೂ ಯಾರನ್ನೋ ನಿರೀಕ್ಷಿಸುತ್ತಾರೆ. ಅಜ್ಜಿ ರೋಬುಲ್‌ನನ್ನು, ರಂಜುನ ಹೆತ್ತವರು ರಂಜುವನ್ನು, ರಂಜು, ತಾನಿರುವ ಕವಲುದಾರಿಯಲ್ಲಿ ಯಾವ ಕಡೆ ಹೋಗಬೇಕೆಂಬುದನ್ನು ನಿರೀಕ್ಷಿಸುತ್ತಿದ್ದಾನೆ.

ಮನಮುಟ್ಟುವ ಛಾಯಾಗ್ರಹಣ, ಹಿನ್ನೆಲೆ ಗಾಯನ, ವಾಸ್ತವಿಕತೆಯನ್ನು ಬಿಂಬಿಸುವ ಚಿತ್ರೀಕರಣ, ಭಾವನಾತ್ಮಕವಾದ ಭಾಷೆಯಿಲ್ಲದಿರುವುದು, ಇವುಗಳೆಲ್ಲವೂ ಸೇರಿ, ಚಿತ್ರಕಾರನಿಗೆ ಒಂದು ಒಳ್ಳೆಯ ಪ್ರಯೋಗವಾಗಿದೆ. ಈ ದಿಟ್ಟತನವು ಬಂದಿರುವುದು, 30 ಲಕ್ಷಕ್ಕೂ ಹೆಚ್ಚು ಜನರನ್ನು, ಅದರಲ್ಲೂ ಅನೇಕ ಸೃಜನಶೀಲ ವ್ಯಕ್ತಿಗಳನ್ನು, ಬಿಡುಗಡೆಯ ಯುದ್ಧದಲ್ಲಿ ಕಳೆದುಕೊಂಡ, 1947 ಇಸವಿಯಿಂದ ಸೈನಿಕ ರಾಜ್ಯ ಮತ್ತು ಸುಮಾರು 40 ವರ್ಷಗಳ ಕಾಲ 'ಕೆಲವಂಶಗಳಲ್ಲಿ ಮಾತ್ರ ಪ್ರಜಾಪ್ರಭುತ್ವ' ಆದ ದೇಶದಿಂದ. ಮೊದಲ ಎರಡು ಚಿತ್ರಗಳಲ್ಲಿ ನಾವು ಎಡಪಕ್ಷಗಳ ರಾಜಕೀಯ ಪ್ರಭಾವವನ್ನು ಮೊದಲಿನ ಪೂರ್ವ ಪಾಕಿಸ್ತಾನದ ಮೇಲೆ ನೋಡಬಹುದು. ಇದು ಹಿಂದಿನ ಪಶ್ಚಿಮ ಪಾಕಿಸ್ತಾನದ ಊಳಿಗಮಾನ್ಯ ರಾಜಕೀಯ ಮನಸ್ಥಿತಿಗೆ ಪೂರ್ತಿ ಭಿನ್ನವಾಗಿದೆ. ಈ ಕಾರಣಕ್ಕಾಗಿಯೇ, ಸಮರದ ಹೊತ್ತಿನಲ್ಲಿ ಜನರ ಆಕಾಂಕ್ಷೆ ಜಾತ್ಯಾತೀತ ಸಮಾಜ, ಪ್ರಜಾಪ್ರಭುತ್ವ, ಸಮಾಜವಾದಗಳ ಕಡೆಗೆ ಇದ್ದವು. 1972 ರ ಬಾಂಗ್ಲಾದೇಶದ ಸಂವಿಧಾನದಲ್ಲಿ ಈ ಮೌಲ್ಯಗಳು ಮೂಲಭೂತ ಗುರಿಯಾದವು. ಆಮೇಲೆ ಬಂದ ಪ್ರಭುತ್ವಗಳಲ್ಲಿ ಈ ಎಲ್ಲಾ ಗುರಿಗಳೂ ಮರೆಯಾದವು. ಇಂದಿನ ರಾಜಕೀಯ ಪರಿಸ್ಥಿತಿ, ಈ ಗುರಿಗಳನ್ನು ಹಿಂತರುವುದಕ್ಕೆ ನಡೆಯುತ್ತಿರುವ ಕಠಿಣ ಸೆಣಸಾಟ. ಇತ್ತೀಚಿನ, ಅಂದರೆ, 30 ಜೂನ್ 2011 ನಲ್ಲಿ ಆದ ಬಾಂಗ್ಲಾದೇಶದ ಸಂವಿಧಾನ ತಿದ್ದುಪಡಿ, ಜನರ ಆಕಾಂಕ್ಷೆಗಳನ್ನು ಹಿಂತರುವ ಒಂದು ಪುಟ್ಟ ಹೆಜ್ಜೆ. ತಮ್ಮ ಗುರಿ ಸಾಧಿಸಬೇಕೆನ್ನುವ ಜನರ ಹಠವನ್ನು ಈ ಚಿತ್ರಗಳಲ್ಲಿ ನೋಡಬಹುದು. ○

RNI No. KARKAN /2006/17926 Posted on every Satuarday
Postal Reg. No. RNP/KA/BGS/2078/2010-12 Posted at MBC Bangalore GPO

ಬಾಂಗ್ಲಾದೇಶದ ಚಲನಚಿತ್ರಗಳ ಹಬ್ಬ

ಅರ್ಜುನ್

ಬಾಂಗ್ಲಾದೇಶದ ಇತ್ತೀಚಿನ ಚಲನಚಿತ್ರಗಳನ್ನು ಬೆಂಗಳೂರಿನ ಬಾದಾಮಿ ಹೌಸ್‌ನಲ್ಲಿ ಜುಲೈ 11 ದರಿಂದ 15 ದರವರೆಗೆ ತೋರಿಸಲಾಯಿತು. ಈ ಚಿತ್ರಗಳನ್ನು ನೋಡುವಾಗ ಹಿಂದಿನ ನೆನಪುಗಳು ಬಹಳಷ್ಟು ಬಂದವು. ಶಾಲೆ ಮತ್ತು ಕಾಲೇಜು ದಿನಗಳಲ್ಲಿ, ವಿಯೆಟ್ನಾಂ ಪ್ರಜೆಗಳ ಧೀರ ಪ್ರತಿಭಟನೆಯಿಂದ ಉತ್ತೇಜಿತರಾಗಿದ್ದೆವು. ಅವರಿಗೆ ಜಯ ಲಭಿಸುವುದೆಂಬುದರಲ್ಲಿ ಯಾವ ಸಂದೇಹವೂ ಇರಲಿಲ್ಲ. ಆದರೆ, ಪೂರ್ವಪಾಕಿಸ್ತಾನದಲ್ಲಿ ನಡೆಯುತ್ತಿದ್ದ ಬಂಗಾಲೀಯರ ನರಮೇಧದ ಬಗ್ಗೆ ಕೇಳಿದಾಗ, ನಮ್ಮ ಪ್ರಶ್ನೆ ಹೀಗಿತ್ತು: "ಇದು ಎಷ್ಟು ದಿನ ಸಾಗುವುದು ಮತ್ತು ಅವರು ಇದನ್ನು ಹೇಗೆ ತಡೆದುಕೊಳ್ಳುವರು?" 60ರ ದಶಕದಲ್ಲಿ, ನೈಜೀರಿಯಾದಿಂದ ಬಯಾಫ್ರ ಬೇರೆಯಾಗಬೇಕೆಂದು ಬಯಸಿದಾಗ ನಡೆದ ದಾರುಣ ರಕ್ತಪಾತ ಮತ್ತು ಇತ್ತೀಚಿನ ದಿನಗಳಲ್ಲಿ ನಡೆದ ಹಿಂದಿನ ಯುಗಾಸ್ಲಾವಿಯಾದ ಕುಲಶುಚಿತ್ವದ ಘಟನೆಗಳು, ನಮ್ಮನ್ನು ಹೀಗೆ ಪ್ರಶ್ನಿಸುವಂತೆ ಮಾಡಿದವು.

ಈ ಚಿತ್ರಗಳು, ಒಟ್ಟಿಗೆ ಮತ್ತು ಈ ಕೆಳಗಿನ ಪ್ರಕಾರದಲ್ಲಿ ನೋಡಿದಾಗ, ಪೂರ್ವ ಪಾಕಿಸ್ತಾನದಿಂದ ಇವತ್ತಿನ ಬಾಂಗ್ಲಾದೇಶದ ವರೆಗೆ ಇರುವ ಚರಿತ್ರೆಯ ಒಂದು ಇಣುಕು ನೋಟ ಕೊಡುತ್ತವೆ. ಕೋಮುವಾದದಿಂದ ವಿಭಜಿತವಾಗಿ, ಅಲ್ಪಸಂಖ್ಯಾತರ ತಾಪತ್ರಯಗಳಿಂದ ತುಂಬಿದ ಪೂರ್ವ ಪಾಕಿಸ್ತಾನದಿಂದ, ಜನಗಳ ಮನಸ್ಸಿನಲ್ಲಿ ಹುಟ್ಟಿದ ಜಾತ್ಯಾತೀತ, ಸಮಾಜವಾದ ಮತ್ತು ಪ್ರಜಾಪ್ರಭುತ್ವದ ಆಕಾಂಕ್ಷೆಗಳು, ಪಶ್ಚಿಮ ಪಾಕಿಸ್ತಾನದ ದುರಾಡಳಿತದಿಂದ ಬೆಂಗಾಲೀ ಜನರ ಬಿಡುಗಡೆ, ಬಾಂಗ್ಲಾದೇಶದಲ್ಲಿನ ಬಡತನ, ಮುಸ್ಲಿಂ ಮೂಲಭೂತವಾದಿಗಳಿಂದ ಬರುವ ಅಪಾಯ - ಈ ಎಲ್ಲವನ್ನೂ ಈ ಚಿತ್ರಗಳಲ್ಲಿ ನೋಡಬಹುದು.


'ಚಿತ್ರಾನದೀರ್ ತೀರೆ' (ನಿರ್ದೇಶನ: ಮೊಕಾಮೆಲ್)


'ಚಿತ್ರಾನದೀರ್ ತೀರೆ' (ನಿರ್ದೇಶನ: ಮೊಕಾಮೆಲ್) ಈ ಸಾಲಿನಲ್ಲಿ ಮೊದಲ ಚಿತ್ರ. ಬೇರೆ ಹಿಂದುಗಳು ದೇಶ ಬಿಟ್ಟು ಹೋಗುತ್ತಿರುವಾಗ, ತಾನು ನೆಲೆಸಿರುವ ನಾಡಿನಲ್ಲೇ ಇರಬೇಕೆನ್ನುವ ಒಬ್ಬ ಹಿಂದೂ ವಕೀಲನಾದ ನಿಶಿಕಾಂತೊನ ಕಥೆಯಿದು. ದೇಶಬಿಟ್ಟು ಹೋದ ಹಿಂದೂಗಳ ಮನೆಯಲ್ಲಿ, ಭಾರತದಿಂದ ಬರುವ ಮುಸ್ಲಿಮರನ್ನು ಸೇರಿಸುವ ಲಾಭದಾಯಕ ವ್ಯಾಪಾರವನ್ನು ಮಾಡುವ 'ಮುಸ್ಲಿಂಲೀಗ್' ಮತ್ತು 'ಜಮಾಯತ್-ಇ-ಇಸ್ಲಾಂ' ನಿಂದ ದಾಳಿಯ ಭಯವೂ ಇತ್ತು. ಇಂತಹ ಕೋಮುಗಲಭೆಯಲ್ಲೂ, ನಿಶಿಕಾಂತನಿಗೆ ತನ್ನ ಜೊತೆಗಾರ ವಕೀಲನಾದ ಶಮ್ಸುದ್ದೀನ್ ನಿಂದ ರಕ್ಷಣೆ ಸಿಗುತ್ತದೆ. ಎರಡೂ ಜಾತಿಯ ಮಕ್ಕಳು ಒಟ್ಟಾಗಿ ಆಟವಾಡುತ್ತಿರುತ್ತಾರೆ. ಹೀಗಿರುವಾಗ, ನಿಶಿಕಾಂತೋನ ಮಗಳು ಮಿನೋತಿ ಒಬ್ಬ ಮುಸ್ಲಿಂ ಹುಡುಗನಾದ ಬಾದಲ್‌ನನ್ನು ಪ್ರೀತಿಸುತ್ತಾಳೆ. ಬಾದಲ್ ಢಾಕಾಗೆ ಹೋಗಿ ರಾಜಕೀಯ ಚಳುವಳಿಯಲ್ಲಿ ಸೇರಿಕೊಳ್ಳುತ್ತಾನೆ. ಪ್ರಜಾಪ್ರಭುತ್ವ ಸ್ಥಾಪನೆಯಾಗಬೇಕೆಂದು, ಪಾಕಿಸ್ಥಾನ ಅಮೇರಿಕಾದ ಗುಂಪುಗಳಾದ 'ಸಿಯಟೋ' ಮತ್ತು 'ಸೆಂಟೋ'ವನ್ನು ಸೇರಬಾರದೆಂದು ಪ್ರತಿಭಟಿಸುವಾಗ ಪೋಲೀಸರು ಬಾದಲ್‌ನನ್ನು ಕೊಲ್ಲುತ್ತಾರೆ. ತನ್ನ ದುಃಖ ಮತ್ತು ಒಂಟಿತನವನ್ನು ಮರೆಯಲು ಮಿನೋತಿ ಬಹಳ ಹೆಣಗುತ್ತಾಳೆ.

1965 ನಲ್ಲಿ, ಭಾರತ ಮತ್ತು ಪಾಕಿಸ್ಥಾನದ ಮಧ್ಯೆ ಯುದ್ಧದಿಂದ ಕೋಮು ಗಲಭೆ ಮತ್ತೆ ಶುರುವಾಗುತ್ತದೆ. ಶಮ್ಸುದ್ದೀನ್ ಮತ್ತೆ ನಿಶಿಕಾಂತೊವಿಗೆ ರಕ್ಷಣೆ ನೀಡಲು ಸಿದ್ಧವಿರುತ್ತಾನೆ. ಆದರೆ, ಈ ಪ್ರಯಾಸವನ್ನು ತಾಳಲಾರದ ನಿಶಿಕಾಂತೋ ಚಿತ್ರಾನದಿಯ ತೀರದಲ್ಲಿ ಹೃದಯಾಘಾತದಿಂದ ಮರಣಿಸುತ್ತಾನೆ. ಮೊದಲಬಾರಿ, ಮಿನೋತಿ, ತನ್ನ ನಾಡಿನಲ್ಲಿಯೇ ನೆಲೆಯಿಲ್ಲದೇ, ತನ್ನ ಪ್ರಿಯವಾದ ನೋರೆಲ್‌ನನ್ನು ಬಿಟ್ಟು, ತನಗೆ ಗೊತ್ತೇಯಿಲ್ಲದ, ದೂರದ ಕಲ್ಕತ್ತಾಗೆ ತೆರಳುತ್ತಾಳೆ.

'ಜೊಯ್ ಜಾತ್ರಾ' (ನಿರ್ದೇಶನ: ತನ್ವೀರ್ ಅಹಮದ್). ಈ ಚಿತ್ರವು 1971 ರ ಮುಕ್ತಿ ಯುದ್ದದ ಕಥೆಯನ್ನು ಹೇಳುತ್ತದೆ. ನದೀ ತೀರದ ಒಂದು ಗ್ರಾಮದಲ್ಲಿ, ಹಿಂದೂಗಳು, ಮುಸ್ಲಿಮರು ಮತ್ತು ಕ್ರೈಸ್ತರು, ಯಾವ ಗಲಭೆಯು ಇಲ್ಲದೆ, ಅಲ್ಲಿನ ಬ್ರಾಹ್ಮಣನ ಕಸಿವಿಸಿ ಇದ್ದರೂ, ಸಹಬಾಳ್ವೆ ನಡೆಸುತ್ತಿರುತ್ತಾರೆ. ಅಲ್ಲಿನ ಜನರು, ಯುದ್ದವು ತುಂಬಾ ದೂರವಿದೆಯೆಂದು ಅಂದುಕೊಳ್ಳುತ್ತಾರೆ. ಆದರೆ ಆಕಸ್ಮಿಕವಾಗಿ, ಒಂದು ರಾತ್ರಿ, ಪಾಕಿಸ್ತಾನಿ ಸೈನ್ಯವು ನುಗ್ಗಿ, ಮನೆಗಳನ್ನು ಸುಟ್ಟು, ಕಂಡ ಕಂಡ ಜನರನ್ನು ಕೊಲ್ಲುತ್ತದೆ. ಭಯಭೀತರಾದ ಜನರು, ಒಂದು ಚಿಕ್ಕ ನಾವೆಯನ್ನು ಹತ್ತುತ್ತಾರೆ. ನಾವಿಕ ಆಲಿ, ಸರಿಯಾದ ದಾರಿ ಗೊತ್ತಿಲ್ಲದಿದ್ದರೂ, ಭಾರತ ತೀರದ ಕಡೆ ನಾವೆಯನ್ನು ಓಡಿಸುತ್ತಾನೆ. ನಾವೆಯಲ್ಲಿರುವವರು ಬೇರೆ ಬೇರೆ ಜಾತಿಯವರು. ಜೀವಕ್ಕೆ ಒದಗಿರುವ ಅಪಾಯದಿಂದ ಅವರಲ್ಲಿ ಗಾಢ ಮೈತ್ರಿ ಹುಟ್ಟಿಕೊಳ್ಳುತ್ತದೆ. ಅನೇಕ ದಾಳಿಗಳನ್ನು ಎದುರಿಸಿ, ಅನೇಕ ನಾವೆಯ ಮಿತ್ರರನ್ನು ಕಳೆದುಕೊಂಡ ಬಳಿಕ ಅವರು ಸ್ವತಂತ್ರ ತೀರವನ್ನು ಸೇರುತ್ತಾರೆ. ಅವರ ನಿಜವಾದ ಜೈತ್ರಯಾತ್ರೆ ಅಲ್ಲಿಂದ ಆರಂಭವಾಗುತ್ತದೆ.

'ಸ್ವಪ್ನೋದನಯ್' ('ಆಸೆಯೆಂಬ ರೆಕ್ಕೆಯ ಮೇಲೆ' ನಿರ್ದೇಶನ: ಗೋಲಂ ರಬ್ಬಾನಿ ಬಿಪ್ಲಬ್). ಇದು ಒಂದು ಸಮಕಾಲೀನ ಕಥೆ. ಒಬ್ಬ ಯುವಕ, ಫಜ್ಲು ಅಥವಾ ಕೊಬಿರಾಜ್ (ವೈದ್ಯ) ಗ್ರಾಮದ ಮಾರುಕಟ್ಟೆಯಲ್ಲಿ ಔಷದಿಗಳನ್ನು ತನ್ನ ಹತ್ತುವಯಸ್ಸಿನ ಮಗ ರತನ್ ಜೊತೆ ಮಾರಾಟ ಮಾಡುತ್ತಿದ್ದ. ಅವನು ಒಂದು ದಿನ, ರತನ್‌ಗೆ ಬಳಸಿದ ವಸ್ತುಗಳ ಅಂಗಡಿಯಲ್ಲಿ ಒಂದು ಪಾಯಿಜಾಮಾ ಕೊಳ್ಳುತ್ತಾನೆ. ಈ 'ಹೊಸ' ಪಾಯಿಜಾಮಾವನ್ನು ಒಗೆಯುವಾಗ, ಅವನ ಹೆಂಡತಿ ಅನೇಕ ಲಕ್ಷ ಬಾಳುವ ಪಾಶ್ಚಾತ್ಯ ನೋಟುಗಳನ್ನು ಅದರಲ್ಲಿ ನೋಡುತ್ತಾಳೆ. ಫಜ್ಲುನ ಸ್ನೇಹಿತ 'ಮೆಂಬರ್' ಆದವನು, ಅವರ ಹಣಕ್ಕೆ ಬ್ಯಾಂಕಿನಲ್ಲಿ ಬದಲಾಯಿಸಲು ಒಪ್ಪುತ್ತಾನೆ. ಫಜ್ಲು ಇದುವರೆಗೆ ಯಾವತ್ತೂ ಬ್ಯಾಂಕಿಗೆ ಹೋದವನಲ್ಲ. ಆದರೆ, ಈಗ ಆ ಇಬ್ಬರು ಸ್ನೇಹಿತರು ಮತ್ತು ಅವರ ಹೆಂಡತಿಯರು, ಶ್ರೀಮಂತ ಜೀವನದ ಬಗ್ಗೆ ಕನಸು ಕಾಣುತ್ತಾರೆ. ಆದರೆ, ಈ ಕನಸು ಫಜ್ಲುವನ್ನು ಅವಿವೇಕನನ್ನಾಗಿ ಮಾಡುತ್ತದೆ. ಅವನು 'ಮೆಂಬರ್'ನ ನಾದಿನಿ ಜೊತೆ ಅಕ್ರಮ ಸಂಬಂಧ ಬೆಳೆಸಿ, ತನ್ನ ಹೆಂಡತಿಯನ್ನು ಕೀಳಾಗಿ ಕಾಣುತ್ತಾನೆ. ಫಜ್ಲು ಬ್ಯಾಂಕಿಗೆ ಆ ನೋಟುಗಳಲ್ಲಿ

ಪುಟ 15 ಕ್ಕೆ



ಒಪೇಕ್ಕ
(ನಿರೀಕ್ಷೆ. ನಿರ್ದೇಶನ: ಅಬು ಸಯೀದ್).

ಕವನ

ಬೆಲೆ ಏರಿಕೆ ಬೆಂಕಿಯಲ್ಲಿ ಹಸಿದ ಹೊಟ್ಟೆಯ ತಾಳ

ಬಸಿದ ಬೆವರಿನ ಬಿಸಿಲು ಬವಣೆಯ ಮೇಳ
ದಿನವಿಡಿ ಹಂಬಲಿಸಿ ತಿನ್ನಲು ಒಂದಿಡಿ ಕೂಳ
ಅಯ್ಯೋ ಇಲ್ಲ ನಿರಾಳ
ಬಡವರ ಬದುಕು ಕರಾಳ
ಬೆಲೆ ಏರಿಕೆ ಬೆಂಕಿಯಲ್ಲಿ ಕೊರಕೊತ
ಬೆಯ್ಯುತ್ತಿದೆ ಬಡವರ ಬದುಕು
ದಗದಗ ಹತ್ತಿ ಉರಿಯುತ್ತಿದೆ
ಡಿಸೇಲ್ ಪೆಟ್ರೋಲ್ ಗ್ಯಾಸ್ ಬುಕ್ಕು
ಬಂಡವಾಳಶಾಹಿಗಳ ಕಪಿಮುಷ್ಠಿಯಲ್ಲಿ
ಅಧಿಕಾರ ಸಿಕ್ಕು
ಭ್ರಷ್ಟಾಚಾರದ ಗಣಿದೂಳಿನೊಳಗೆ ಅಟ್ಟಹಾಸ
ಮೆರೆದಿದೆ ಶ್ರೀಮಂತರ ಥಳುಕು ಬಳುಕು
ಹಸಿದ ಹೊಟ್ಟೆಯ ಬಗೆದು ನೋಡುವ
ಕಪ್ಪು ಕೈಯಲ್ಲಿ ಮಿಂಚೋ ವಜ್ರದ ಬೆರಳೆ
ಉಸಿರು ಕಟ್ಟಿಸಿ ಹಸಿದ ಒಡಲ ಕೊರಳ
ಕೊಯ್ಯೋ ಕಾಳ ಸಂತೆಯ ಉರುಳೆ
ಸುಟ್ಟು ಕಣ್ಣೊಳಗೆ ಕನಸ ಹುಡುಕೋ ತವಕ
ನೊಂದ ಜನರ ಮಡುಗಟ್ಟಿದ ಸಿಟ್ಟು ಸಿಡುಕು
ಸಾಗಿಬರುತಿದೆ ದುಡಿವ ಜನರ ದಂಡು
ಬೇವರ ಬೆಲೆಯ ಕೇಳುತ
ಖಾಕಿ ಕೈಯ್ಯೊಳು ಮದ್ದು ಗುಂಡು
ಕಾಯ್ದು ನಿಂತಿವೆ ಹೊಂಚು ಹಾಕುತ
ಸುರಿಸೋ ಒಂದೊಂದು ಹನಿಯ
ಬೆವರ ಮುತ್ತಿಗೆ
ಕಟ್ಟುವ ಬೆಲೆ ಮೂರು ಕಾಸು
ಉಪ್ಪಿಗಾದರೆ ಸೊಪ್ಪಿಗಿಲ್ಲ
ಬಾಕಿಗಿನ್ನೂ ಈರುಳಿ ಬೆಳ್ಳುಳ್ಳಿ ಮೆಣಸು
ಬೆಳೆದು ನಿಂತ ಹನುಮಂತನ ಬಾಲ
ಶೆಟ್ಟಿ ಅಂಗಡಿಯ ಸಾಲ

ಮಹೇಶ್ ಊಗಿನಹಳ್ಳಿ,
ಆನೇಕಲ್

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH